ಶನಿವಾರ, ಮೇ 1, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 121 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭೂಮಿಕಾ**
ಕಾರ್ಮಿಕರ ದಿನ ಮತ್ತೆ ಬಂದಿದೆ. ಕೋವಿಡ್‌ನಿಂದಾಗಿ ಉದ್ಯೋಗಸ್ಥ ತಾಯಂದಿರ ಮೇಲೆ ಕಚೇರಿ ಕೆಲಸದ ಜೊತೆ ಮಕ್ಕಳ ಹೋಂ ಸ್ಕೂಲಿಂಗ್ ಎಂದು ಇನ್ನಷ್ಟು ಹೊರೆ ಬಿದ್ದಿದೆ.

**ಚರ್ಚೆ** ರಾಜ್ಯದಲ್ಲಿ ಕೊರೊನಾ ಪರಿಸ್ಥಿತಿ ನಿಭಾಯಿಸಲು ವೈದ್ಯಕೀಯ ತುರ್ತು ಪರಿಸ್ಥಿತಿ ಹೇರುವ ಅಗತ್ಯ ಇದೆಯೇ? 7

ದೆಹಲಿ: ಆಸ್ಪತ್ರೆ ಹೊರಗೆ ಸತ್ತವರ ಸಂಖ್ಯೆ ಲೆಕ್ಕಕ್ಕಿಲ್ಲ 9

**ಕಾರ್ಮಿಕರ ದಿನದ ಶುಭಾಶಯಗಳು**

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 48,782 | 14,631 | 74.09 |

ಸಮಸ್ಯೆ ಹಂಚಿಕೊಂಡವರ ಮೇಲೆ ಕ್ರಮ ಕೈಗೊಂಡರೆ ಹುಷಾರ್: ಸರ್ಕಾರಕ್ಕೆ 'ಸುಪ್ರೀಂ' ಎಚ್ಚರಿಕೆ

# ಜನರ ದನಿ ದಮನ ಮಾಡಬೇಡಿ

ನವದೆಹಲಿ (ಪಿಟಿಐ): ನೆರವಿಗೆ ಸಂಬಂಧಿಸಿ ಜನರು ಕೋರಿಕೆ ಮುಂದಿಟ್ಟಾಗ ಆ ದನಿಯನ್ನು ಸರ್ಕಾರವು ದಮನಿಸಬಾರದು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ. ಅಂತರ್ಜಾಲದಲ್ಲಿ ನೆರವು ಕೇಳಿದಾಗ ಅದು ವದಂತಿ ಹರಡುವಿಕೆ ಎಂದು ಜನರನ್ನು ಸುಮ್ಮನಾಗಿಸಬಾರದು ಎಂದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ರಾಜ್ಯಗಳ ಪೊಲೀಸ್ ಮುಖ್ಯಸ್ಥರಿಗೆ ಕೋರ್ಟ್ ಹೇಳಿದೆ.

'ನಾವು ಇದನ್ನು ಸ್ಪಷ್ಟವಾಗಿ ಹೇಳಲು ಬಯಸುತ್ತೇವೆ. ಜನರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರೆ ಅಂತಹ ಮಾಹಿತಿಯ ಹರಿವನ್ನು ತಡೆಯುವ ಕೆಲಸ ಮಾಡಬೇಡಿ. ಹಾಸಿಗೆ ಅಥವಾ ಆಮ್ಲಜನಕ ಕೊರತೆಯನ್ನು ಹೇಳಿಕೊಂಡವರಿಗೆ ಪೊಲೀಸರು ಕಿರುಕುಳ ನೀಡಿದರೆ ಅವರ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ' ಎಂದು ಪೀಠ ಎಚ್ಚರಿಸಿದೆ.

'ಈ ಮಾಹಿತಿಯು ಎಲ್ಲ ಪೊಲೀಸ್ ಸಿಬ್ಬಂದಿಗೂ ತಲುಪಲಿ. ಮಾಹಿತಿಯು ಮುಕ್ತವಾಗಿ ಹರಿಯಲಿ. ನಮ್ಮ ಪೌರರ ಧ್ವನಿಯನ್ನು ಆಲಿಸೋಣ. ಅವರ ಧ್ವನಿಯನ್ನು ಅದುಮಿಡುವ ಕೆಲಸ ಬೇಡ' ಎಂದು ಪೀಠವು ಸ್ಪಷ್ಟಪಡಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ನೆರವಿನ ಕೋರಿಕೆಯನ್ನು ತಡೆಯುವುದು ಸೇರಿದಂತೆ ಮಾಹಿತಿಯ ಮುಕ್ತ ಹರಿವಿಗೆ ಅಡ್ಡಿ ಪಡಿಸುವ ಯಾವುದೇ ಕ್ರಮವನ್ನು ನ್ಯಾಯಾಂಗನಿಂದನೆಯಾಗಿ ಪರಿಗಣಿಸಲಾಗುವುದು ಎಂಬ ಎಚ್ಚರಿಕೆಯನ್ನೂ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ರವಾನಿಸಿದೆ.

ಸಾಮಾಜಿಕ ಜಾಲತಾಣದಲ್ಲಿ ಹುಸಿ ಸಂದೇಶ ಹರಿಬಿಟ್ಟವರ ಮೇಲೆ ರಾಷ್ಟ್ರೀಯ ಭದ್ರತೆ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲು ಉತ್ತರ ಪ್ರದೇಶ ಸರ್ಕಾರ ಇತ್ತೀಚೆಗೆ ನಿರ್ಧರಿಸಿತ್ತು.

ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನವು ಮಹತ್ವ ಪಡೆದಿದೆ.

ಕೋವಿಡ್–19 ನಿರ್ವಹಣೆಗೆ ರಾಷ್ಟ್ರೀಯ ನೀತಿ ರೂಪಿಸಬೇಕು ಎಂಬ ವಿಚಾರವನ್ನು ಪೀಠವು ಸ್ವಯಂಪ್ರೇರಣೆಯಿಂದ ಕೈಗೆತ್ತಿಕೊಂಡು ವಿಚಾರಣೆ ನಡೆಸುತ್ತಿದೆ. ವೈದ್ಯಕೀಯ ಆಮ್ಲಜನಕಕ್ಕೆ ಹೆಚ್ಚಿದ ಬೇಡಿಕೆ, ಅತಿ ಹೆಚ್ಚು ಬಾಧಿತ ರಾಜ್ಯಗಳಿಗೆ ಹೆಚ್ಚಿನ ಹಂಚಿಕೆ, ಪೂರೈಕೆ ವ್ಯವಸ್ಥೆ ಮೇಲೆ ನಿಗಾದಂತಹ ವಿಷಯಗಳು ವಿಚಾರಣೆಗೆ ಒಳಪಟ್ಟಿವೆ. ಇಂತಹ ವಿಚಾರಗಳಲ್ಲಿ ಸರ್ಕಾರಕ್ಕೆ ಕಠಿಣವಾದ ಹಲವು ಪ್ರಶ್ನೆಗಳನ್ನು ಪೀಠವು ಕೇಳಿದೆ.

ವೈದ್ಯರು ಮತ್ತು ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಕೂಡ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗದ ಪರಿಸ್ಥಿತಿ ಇದೆ. 70 ವರ್ಷಗಳಿಂದ ಕಟ್ಟಿರುವ ಆರೋಗ್ಯ ರಕ್ಷಣಾ ವ್ಯವಸ್ಥೆ ಈಗ ಸಾಲದಾಗಿದೆ, ಪರಿಸ್ಥಿತಿ ಕರಾಳವಾಗಿದೆ ಎಂದೂ ಪೀಠವು ಅಭಿಪ್ರಾಯಪಟ್ಟಿದೆ.

ರಾಷ್ಟ್ರ ರಾಜಧಾನಿಯ ಕೋವಿಡ್ ಸ್ಥಿತಿಗೆ ಸಂಬಂಧಿಸಿ ದೆಹಲಿ ಸರ್ಕಾರವನ್ನು ಪೀಠವು ತರಾಟೆಗೆ ತೆಗೆದುಕೊಂಡಿದೆ. ರಾಜಕೀಯ ಕಚ್ಚಾಟ ಬಿಟ್ಟು ಕೇಂದ್ರದ ಜತೆಗೆ ಸಹಕರಿಸಿ ಎಂದು ಹೇಳಿದೆ. 'ರಾಜಕೀಯವು ಚುನಾವಣೆಗೆ ಸೀಮಿತವಾಗಲಿ. ಈಗಿನದ್ದು ಮಾನವೀಯ ಬಿಕ್ಕಟ್ಟು. ಪ್ರತಿಯೊಬ್ಬರ ಜೀವದ ಬಗ್ಗೆಯೂ ಗಮನ ಹರಿಸಬೇಕಿದೆ. ನಮ್ಮ ಈ ಸಂದೇಶವನ್ನು ಅತ್ಯುನ್ನತ ಮಟ್ಟದಲ್ಲಿ ಇರುವವರಿಗೆ ತಲುಪಿಸಿ, ಅವರು ರಾಜಕೀಯ ಬಿಟ್ಟು ಕೇಂದ್ರದ ಜತೆಗೆ ಮಾತಾಡಲಿ' ಎಂದು ಪೀಠ ತಿಳಿಸಿತು.

## ಪೀಠ ಹೇಳಿದ್ದೇನು?



- ಹಾಸ್ಟೆಲ್‌ಗಳು, ದೇವಾಲಯಗಳು, ಚರ್ಚ್ ಮತ್ತು ಇಂತಹ ಇತರ ಪ್ರದೇಶಗಳನ್ನು ಕೋವಿಡ್ ಆರೈಕೆ ಕೇಂದ್ರಗಳಾಗಿಸಿ
- ಆರೋಗ್ಯ ಕ್ಷೇತ್ರವು ಕುಸಿಯುವ ಹಂತಕ್ಕೆ ಬಂದಿದೆ. ನಿವೃತ್ತ ವೈದ್ಯರು ಮತ್ತು ಅಧಿಕಾರಿಗಳನ್ನು ಮತ್ತೆ ಕರ್ತವ್ಯಕ್ಕೆ ಬಳಸಿಕೊಳ್ಳಿ
- ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸುವ ವಿಷಯದಲ್ಲಿ ಮಾರ್ಗಸೂಚಿಯನ್ನು ರೂಪಿಸಲಾಗಿದೆಯೇ?
- ರೆಮ್‌ಡಿಸಿವಿರ್ ಸೇರಿದಂತೆ ಅಗತ್ಯ ಔಷಧಗಳ ತಯಾರಿಕೆಗೆ ಹಲವು ತಯಾರಕರಿಗೆ ಪರವಾನಗಿ ನೀಡಿ
- ವಿವರವಾದ ಆದೇಶ ಶನಿವಾರ ಪ್ರಕಟವಾಗಲಿದೆ

## 'ಎಲ್ಲರಿಗೂ ಉಚಿತ ಲಸಿಕೆ ಕೊಡಿ'

ಶೇಕಡ ನೂರರಷ್ಟು ಲಸಿಕೆಗಳನ್ನು ಕೇಂದ್ರ ಸರ್ಕಾರವೇ ಖರೀದಿಸಿ, ರಾಜ್ಯಗಳಿಗೆ ಸಮಾನವಾಗಿ ಹಂಚಿಲ್ಲ ಏಕೆ ಎಂದು ಪೀಠವು ಪ್ರಶ್ನಿಸಿದೆ. ಬಡ ಜನರು ಹಣ ಕೊಟ್ಟು ಲಸಿಕೆ ಖರೀದಿಸಲು ಕಷ್ಟವಾಗಬಹುದು. ಹಾಗಾಗಿ, ಕೇಂದ್ರ ಸರ್ಕಾರವು ರಾಷ್ಟ್ರೀಯ ಲಸಿಕಾ ಕಾರ್ಯಕ್ರಮ ಮಾದರಿಯಲ್ಲಿ ಲಸಿಕೆ ಅಭಿಯಾನ ನಡೆಸಬೇಕು ಎಂದು ಪೀಠವು ಹೇಳಿದೆ. ಪರಿಶಿಷ್ಟ ಜಾತಿ, ಪಂಗಡಗಳ ಜನರು, ಬಡವರು ಏನು ಮಾಡಬೇಕು? ಅವರು ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಬೇಕೇ ಎಂದು ಪ್ರಶ್ನಿಸಿದೆ. ಲಸಿಕೆಯನ್ನು ಎಲ್ಲರಿಗೂ ಉಚಿತವಾಗಿ ನೀಡುವ ದಿಸೆಯಲ್ಲಿ ಸರ್ಕಾರ ಯೋಚಿಸಬೇಕು ಎಂಬ ಸಲಹೆಯನ್ನೂ ಕೊಟ್ಟಿದೆ.

### 'ಲಸಿಕೆಗೆ ಭಿನ್ನ ದರವೇಕೆ?'

ಕೇಂದ್ರ ಮತ್ತು ರಾಜ್ಯಗಳಿಗೆ ಲಸಿಕೆಗೆ ಪ್ರತ್ಯೇಕ ದರ ನಿಗದಿ ಮಾಡಿರುವುದು ಏಕೆ ಎಂದು ಪೀಠವು ಪ್ರಶ್ನಿಸಿದೆ. ಲಸಿಕೆ ತಯಾರಿಸುವ ಕಂಪನಿಗಳಿಗೆ ಕೇಂದ್ರವು ನೀಡಿದ ಹಣ ಎಷ್ಟು ಎಂಬುದನ್ನು ತಿಳಿಸುವಂತೆಯೂ ಪೀಠ ಹೇಳಿದೆ. 'ಎಲ್ಲ ವಿಚಾರಗಳನ್ನೂ ತಯಾರಕರಿಗೆ ಬಿಟ್ಟುಬಿಡಬೇಡಿ. ನಿಮ್ಮ ಅಧಿಕಾರ ಬಳಸಿ. ಲಸಿಕೆ ತಯಾರಿಕೆಗೆ ಹೆಚ್ಚುವರಿ ಸೌಲಭ್ಯ ಸೃಷ್ಟಿಸಿ' ಎಂದು ಪೀಠವು ಸೂಚನೆ ನೀಡಿದೆ.

## ಮೌಖಿಕ ಅಭಿಪ್ರಾಯ ಪ್ರಸಾರಕ್ಕೆ ತಡೆ ಸಾಧ್ಯವಿಲ್ಲ: ಮದ್ರಾಸ್ ಹೈಕೋರ್ಟ್

ಚೆನ್ನೈ (ಪಿಟಿಐ): ನ್ಯಾಯಮೂರ್ತಿಗಳು ವಿಚಾರಣೆ ಸಂದರ್ಭದಲ್ಲಿ ತನ್ನ ವಿರುದ್ಧ ವ್ಯಕ್ತಪಡಿಸುವ ಮೌಖಿಕ ಅಭಿಪ್ರಾಯಗಳು ಮಾಧ್ಯಮದಲ್ಲಿ ವರದಿ ಆಗುವುದಕ್ಕೆ ತಡೆ ಕೊಡಬೇಕು ಎಂಬ ಚುನಾವಣಾ ಆಯೋಗದ ಕೋರಿಕೆಯನ್ನು ಮದ್ರಾಸ್ ಹೈಕೋರ್ಟ್ ತಳ್ಳಿ ಹಾಕಿದೆ.

ದೇಶದಲ್ಲಿ ಕೋವಿಡ್–19ರ ಎರಡನೇ ಅಲೆಯು ಈ ಪ್ರಮಾಣದಲ್ಲಿ ಹರಡಲು ಚುನಾವಣಾ ಆಯೋಗವೇ ಕಾರಣ. ಆಯೋಗದ ಅಧಿಕಾರಿಗಳ ವಿರುದ್ಧ ಕೊಲೆ ಪ್ರಕರಣ ದಾಖಲಿಸಬಹುದು ಎಂದು ಮದ್ರಾಸ್ ಹೈಕೋರ್ಟ್ ಕೆಲ ದಿನಗಳ ಹಿಂದೆ ಹೇಳಿತ್ತು. ಈ ಅಭಿಪ್ರಾಯಕ್ಕೆ ಮಾಧ್ಯಮದ ಮೂಲಕ ವ್ಯಾಪಕ ಪ್ರಚಾರ ಸಿಕ್ಕಿದೆ. ಅದು ಆಯೋಗದ ವರ್ಚಸ್ಸು ಕುಂದಿಸಿದೆ ಎಂದು ಆಯೋಗದ ಪರವಾಗಿ ವಾದಿಸಿದ ವಕೀಲರು ಹೇಳಿದರು.

ಮುದ್ರಣ ಮಾಧ್ಯಮ ಮತ್ತು ಸುದ್ದಿ ವಾಹಿನಿಗಳು ಮೌಖಿಕ ಅಭಿಪ್ರಾಯಗಳನ್ನು ಪ್ರಸಾರ ಮಾಡುವುದಕ್ಕೆ ತಡೆ ಕೊಡಲು ಸಾಧ್ಯವಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಬ್ಯಾನರ್ಜಿ ಮತ್ತು ನ್ಯಾಯಮೂರ್ತಿ ಸೆಂಥಿಲ್‌ಕುಮಾರ್ ರಾಮಮೂರ್ತಿ ಅವರ ಪೀಠವು ಹೇಳಿತು.

ಕೋವಿಡ್–19 ತಡೆ ಲಸಿಕೆ, ಆಸ್ಪತ್ರೆಗಳಲ್ಲಿ ಹಾಸಿಗೆ, ವೆಂಟಿಲೇಟರ್ ಲಭ್ಯತೆ ಮತ್ತು ಆಮ್ಲಜನಕ ಸಿಲಿಂಡರ್‌ಗಳನ್ನು ಬೇರೆ ರಾಜ್ಯಗಳಿಗೆ ವರ್ಗಾಯಿಸಿದ ವಿಷಯದ ವಿಚಾರಣೆ ಸಂದರ್ಭದಲ್ಲಿ ಆಯೋಗದ ವಕೀಲರು ವಿಷಯ ಪ್ರಸ್ತಾಪಿಸಿದರು.

'ಈ ವಿಷಯದ (ಮೌಖಿಕ ಅಭಿಪ್ರಾಯ ಪ್ರಸಾರಕ್ಕೆ ತಡೆ) ಬಗ್ಗೆ ಮುಂದೆ ಯೋಚನೆ ಮಾಡಬಹುದು. ಈಗ, ತುರ್ತಾಗಿ ಗಮನಿಸಬೇಕಾದ ವಿಷಯಗಳಿವೆ' ಎಂದು ಪೀಠವು ಹೇಳಿತು.

ನ್ಯಾಯಾಲಯದ ಅಭಿಪ್ರಾಯದ ಆಧಾರದಲ್ಲಿ ಆಯೋಗದ ವಿರುದ್ಧ ದೂರು ದಾಖಲಿಸಲು ಹಲವು ಮಂದಿ ಪೊಲೀಸ್ ಠಾಣೆಯನ್ನು ಸಂಪರ್ಕಿಸಿದ್ದಾರೆ. ಎಫ್‌ಐಆರ್ ಕೂಡ ದಾಖಲಾಗಿದೆ ಎಂದು ವಕೀಲರು ಹೇಳಿದರು.

## 4.01 ಲಕ್ಷ ಪ್ರಕರಣ

ನವದೆಹಲಿ: ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 4,01,911 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 3,521 ಮಂದಿ ಮೃತಪಟ್ಟಿದ್ದಾರೆ.

**ಲಸಿಕೆಗೆ ಸಾಲು** ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಬೆಂಗಳೂರಿನ ದಾಸಪ್ಪ ಆಸ್ಪತ್ರೆಯ ಆವರಣದಲ್ಲಿ ಶುಕ್ರವಾರ ಜನರು ಸರದಿಯಲ್ಲಿ ನಿಂತಿದ್ದರು ಪ್ರಜಾವಾಣಿ ಚಿತ್ರ/ ರಂಜು ಪಿ.

ರಾಜ್ಯಗಳಿಗೆ ಪೂರೈಕೆಯಾಗದ ಕೋವಿಡ್ ಲಸಿಕೆ

# 3ನೇ ಹಂತ ಆರಂಭಕ್ಕೆ ವಿಘ್ನ

ನವದೆಹಲಿ (ಪಿಟಿಐ): ದೇಶದಾದ್ಯಂತ ಕೋವಿಡ್ ಲಸಿಕೆಯ ಮೂರನೇ ಹಂತದ ಅಭಿಯಾನ ಮೇ 1ರಿಂದ ಆರಂಭವಾಗಲಿದೆ ಎಂದು ಕೇಂದ್ರ ಸರ್ಕಾರ ಘೋಷಿಸಿತ್ತು. ಆದರೆ ಲಸಿಕೆ ಕೊರತೆ ಇರುವ ಕಾರಣ ದೆಹಲಿ ಸೇರಿ 12 ರಾಜ್ಯಗಳು ಮೂರನೇ ಹಂತದ ಲಸಿಕಾ ಕಾರ್ಯಕ್ರಮವನ್ನು ಮುಂದೂಡಿವೆ.

ಮೂರನೇ ಹಂತದ ಕಾರ್ಯಕ್ರಮದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಗುರುವಾರ ಸಂಜೆವರೆಗೆ 2.45 ಕೋಟಿ ಜನರು ನೋಂದಣಿ ಮಾಡಿಕೊಂಡಿದ್ದಾರೆ. ಆದರೆ ಕೆಲವು ರಾಜ್ಯಗಳು ಮಾತ್ರ ಲಸಿಕೆ ಕಾರ್ಯಕ್ರಮವನ್ನು ಆರಂಭಿಸುವುದಾಗಿ ಘೋಷಿಸಿವೆ.

ಮೂರನೇ ಹಂತದ ಲಸಿಕೆ ಕಾರ್ಯಕ್ರಮಕ್ಕೆ ಅಗತ್ಯವಿರುವ ಲಸಿಕೆಗಳನ್ನು ರಾಜ್ಯ ಸರ್ಕಾರಗಳು, ತಮ್ಮದೇ ವೆಚ್ಚದಲ್ಲಿ ಮುಕ್ತ ಮಾರುಕಟ್ಟೆಯಿಂದ ಖರೀದಿಸಬೇಕಿತ್ತು. ದೇಶದ ಮಾರುಕಟ್ಟೆಯಲ್ಲಿ ಲಭ್ಯವಿರುವ ಸೀರಂ ಕಂಪನಿಯ ಕೋವಿಶೀಲ್ಡ್ ಮತ್ತು ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್ ಲಸಿಕೆ ಖರೀದಿಗೆ ಹಲವು ರಾಜ್ಯ ಸರ್ಕಾರಗಳು ಬೇಡಿಕೆ ಸಲ್ಲಿಸಿವೆ. ಆದರೆ ಯಾವ ರಾಜ್ಯಕ್ಕೂ ಲಸಿಕೆ ಪೂರೈಕೆಯಾಗಿಲ್ಲ.

3B ಪುಟ ನೋಡಿ

## ಉತ್ತರ ಪ್ರದೇಶ, ಗುಜರಾತ್‌ನಲ್ಲಿ ಆರಂಭ

ಉತ್ತರ ಪ್ರದೇಶ ಮತ್ತು ಗುಜರಾತ್ ಸರ್ಕಾರಗಳು ಮಾತ್ರ ಶನಿವಾರದಿಂದ ಮೂರನೇ ಹಂತದ ಲಸಿಕೆ ಕಾರ್ಯಕ್ರಮ ಆರಂಭಿಸುವುದಾಗಿ ಘೋಷಿಸಿವೆ. ಉತ್ತರ ಪ್ರದೇಶದ ಏಳು ಜಿಲ್ಲೆಗಳಲ್ಲಿ ಮತ್ತು ಗುಜರಾತ್‌ನ 10 ಜಿಲ್ಲೆಗಳಲ್ಲಿ ಲಸಿಕೆ ಕಾರ್ಯಕ್ರಮ ಆರಂಭಿಸಲಾಗುತ್ತದೆ. ಆದರೆ ಉತ್ತರಾಖಂಡ, ಬಿಹಾರ, ಹಿಮಾಚಲ ಪ್ರದೇಶ, ಹರಿಯಾಣ, ಒಡಿಶಾ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳು ಮೂರನೇ ಹಂತದ ಲಸಿಕೆ ಕಾರ್ಯಕ್ರಮ ಆರಂಭದ ಬಗ್ಗೆ ಯಾವುದೇ ಅಧಿಕೃತ ಪ್ರಕಟಣೆ ಹೊರಡಿಸಿಲ್ಲ. ಪಶ್ಚಿಮ ಬಂಗಾಳ ಸರ್ಕಾರ ಮಾತ್ರ ಗುರುವಾರ ಸಂಜೆ, 'ಮೂರನೇ ಹಂತದ ಕಾರ್ಯಕ್ರಮ ಆರಂಭಿಸಲು ಲಸಿಕೆಯ 3 ಕೋಟಿ ಡೋಸ್ ಅಗತ್ಯವಿದೆ. ಲಸಿಕೆ ಪೂರೈಕೆಯಾದರೆ ಮಾತ್ರ 18-45 ವರ್ಷದವರಿಗೆ ಲಸಿಕೆ ನೀಡಬಹುದು' ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿತ್ತು.

## '18 ಮೇಲ್ಪಟ್ಟವರಿಗೆ ಲಸಿಕೆ ಸದ್ಯಕ್ಕಿಲ್ಲ'

ಬೆಂಗಳೂರು: 'ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಒಂದು ಕೋಟಿ ಡೋಸ್ ಲಸಿಕೆಯನ್ನು ರಾಜ್ಯ ಸರ್ಕಾರಕ್ಕೆ ಇನ್ನೂ ಪೂರೈಕೆ ಮಾಡಿಲ್ಲ. ಹಾಗಾಗಿ, ಮೇ 1 ರಿಂದ 18 ವರ್ಷ ಮೇಲ್ಪಟ್ಟವರಿಗೆ ಆ ಲಸಿಕೆ ವಿತರಣೆ ನಡೆಯುವುದಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು. ಸುದ್ದಿಗಾರರ ಜತೆಗೆ ಶುಕ್ರವಾರ ಮಾತನಾಡಿದ ಅವರು, 'ರಾಜ್ಯದಲ್ಲಿ 18 ರಿಂದ 44 ವರ್ಷದವರು ಸುಮಾರು 3.5 ಕೋಟಿ ಜನರಿದ್ದಾರೆ. ಲಸಿಕೆ ರಾಜ್ಯಕ್ಕೆ ಬಂದ ಬಳಿಕ ವಿತರಣೆಯ ದಿನಾಂಕವನ್ನು ತಿಳಿಸಲಾಗುವುದು. ಹೆಸರು ನೋಂದಾಯಿಸಿದವರು ಲಸಿಕೆಗಾಗಿ ಆರೋಗ್ಯ ಕೇಂದ್ರಗಳಿಗೆ ತೆರಳಬಾರದು' ಎಂದರು. 'ನಮ್ಮ ಬಳಿ ಇನ್ನು 6 ಲಕ್ಷ ಡೋಸ್ ಲಸಿಕೆ ಲಭ್ಯವಿದೆ. ಈವರೆಗೆ ಶೇ 1.4ರಷ್ಟು ಮಾತ್ರ ಲಸಿಕೆ ವ್ಯರ್ಥವಾಗಿದೆ. 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಣೆ ಸಮಸ್ಯೆಯಾಗುವುದಿಲ್ಲ' ಎಂದರು.

ಇನ್ನೊಂದು ಸುದ್ದಿ 9

ಬಿಎಸ್‌ವೈ ತವರು ಜಿಲ್ಲೆಯಲ್ಲೂ ಕೈ ಮೇಲುಗೈ

# 'ಕೈ'ಗೆ ವರ, ಬಿಜೆಪಿಗೆ ಮುಖಭಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅತಿ ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಆಡಳಿತಾರೂಢ ಬಿಜೆಪಿ ಮುಖಭಂಗ ಅನುಭವಿಸಿದೆ.

ಒಟ್ಟು 10 ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ 6, ಜೆಡಿಎಸ್ 2 ಮತ್ತು ಬಿಜೆಪಿ 1 ರಲ್ಲಿ ಆಡಳಿತ ಚುಕ್ಕಾಣಿ ಹಿಡಿಯಲಿವೆ. ಬಳ್ಳಾರಿ ಮಹಾನಗರ ಪಾಲಿಕೆಯನ್ನು ಕಾಂಗ್ರೆಸ್ ಉಳಿಸಿಕೊಂಡಿದೆ. ಆದರೆ, ಬೀದರ್ ನಗರಸಭೆಯಲ್ಲಿ ಯಾವುದೇ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಕ್ಕಿಲ್ಲ.

ಕೋವಿಡ್ ಎರಡನೇ ಅಲೆಯ ಮಧ್ಯೆಯೂ ವಿವಿಧ ಪಕ್ಷಗಳು ಬಿರುಸಿನ ಪ್ರಚಾರ ನಡೆಸಿದ್ದವು. ಕಾಂಗ್ರೆಸ್ ಅತ್ಯಧಿಕ ಸ್ಥಳೀಯ ಸಂಸ್ಥೆಗಳನ್ನು ಗೆದ್ದಿರುವುದರಿಂದ ಅದರ ವಿಶ್ವಾಸ ಇಮ್ಮಡಿಯಾಗಿದೆ. ಸ್ಥಳೀಯ ಮಟ್ಟದಲ್ಲಿ ಬಿಜೆಪಿ ಸಂಘಟನಾತ್ಮಕವಾಗಿ ಬಲಹೀನವಾಗಿದೆ ಎಂಬ ವಿಶ್ಲೇಷಣೆಗೆ ಶುಕ್ರವಾರ ಪ್ರಕಟಗೊಂಡ ಫಲಿತಾಂಶ ಇಂಬು ಕೊಟ್ಟಿದೆ.

ಜೆಡಿಎಸ್ ತನ್ನ ಭದ್ರಕೋಟೆಯಾದ ಚನ್ನಪಟ್ಟಣ ನಗರಸಭೆ ಮತ್ತು ಇತ್ತೀಚಿನ ವರ್ಷಗಳಲ್ಲೇ ಮೊದಲ ಬಾರಿಗೆ ದೇವನಹಳ್ಳಿ ತಾಲ್ಲೂಕು ವಿಜಯಪುರ ಪುರಸಭೆಗಳಲ್ಲಿ ಗೆಲುವು ಸಾಧಿಸಿದೆ.

ಮಡಿಕೇರಿ ನಗರಸಭೆ ಅಧಿಕಾರ ಹಿಡಿಯುವಲ್ಲಿ ಮಾತ್ರ ಬಿಜೆಪಿ ಯಶಸ್ಸು ಸಾಧಿಸಿದೆ. ಇಲ್ಲಿ 5 ಸ್ಥಾನಗಳನ್ನು ಗೆದ್ದಿರುವ ಎಸ್‌ಡಿಪಿಐ ವಿರೋಧ ಪಕ್ಷವಾಗಿ ಹೊರ ಹೊಮ್ಮಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ತಲಾ ಒಂದು ಸ್ಥಾನಗಳಿಗೆ ಕುಸಿದಿವೆ. ಬೀದರ್ ನಗರಸಭೆಯಲ್ಲಿ ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂನ ಇಬ್ಬರು, ಆಮ್ ಆದ್ಮಿ ಪಕ್ಷದ ಒಬ್ಬರು ಗೆಲುವು ಸಾಧಿಸಿದ್ದಾರೆ.

ಮುಖ್ಯಮಂತ್ರಿ ಯಡಿಯೂರಪ್ಪನವರ ತವರು ಜಿಲ್ಲೆಯ ಭದ್ರಾವತಿ ನಗರಸಭೆಗೆ ಚುನಾವಣೆ ಘೋಷಣೆಗೂ ಮೊದಲು ನಡೆದಿದ್ದ ಕಬಡ್ಡಿ ಪಂದ್ಯಾವಳಿಯ ಗಲಾಟೆ ರಾಜಕೀಯವಾಗಿ ಸಂಚಲನ ಸೃಷ್ಟಿಸಿತ್ತು. ಇದರಿಂದ ಬಿಜೆಪಿಗೆ ಅನುಕೂಲ ಆಗಬಹುದು ಎಂದು ಭಾವಿಸಲಾಗಿತ್ತು.

4ನೇ ಪುಟ ನೋಡಿ

**ಯಾವ ಸ್ಥಳೀಯ ಸಂಸ್ಥೆ ಯಾರ ಮಡಿಲಿಗೆ**

| | ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ | ಪಕ್ಷೇತರರು |
|---|---|---|---|---|
| ಬಳ್ಳಾರಿ ಮ.ನ.ಪಾ(39) | 21 | 13 | - | 5 |
| ಬೀದರ್ ನಗರಸಭೆ(33) | 15 | 9 | 7 | 2 |
| ರಾಮನಗರ ನಗರಸಭೆ(31) | 19 | 0 | 11 | 1 |
| ಚನ್ನಪಟ್ಟಣ ನಗರಸಭೆ(31) | 7 | 7 | 16 | 1 |
| ಭದ್ರಾವತಿ ನಗರಸಭೆ(34) | 18 | 4 | 11 | 1 |
| ಮಡಿಕೇರಿ ನಗರಸಭೆ(23) | 1 | 16 | 1 | ಎಸ್‌ಡಿಪಿಐ 5 |
| ಬೇಲೂರು ಪುರಸಭೆ(23) | 17 | 1 | 5 | - |
| ವಿಜಯಪುರ ಪುರಸಭೆ(23) | 7 | 1 | 13 | ಪಕ್ಷೇತರರು 2 |
| ತೀರ್ಥಹಳ್ಳಿ ಪ.ಪಂಚಾಯಿತಿ(15) | 9 | 6 | - | - |
| ಗುಡಿಬಂಡೆ ಪ.ಪಂಚಾಯಿತಿ(11) | 6 | - | 2 | 3 |

> ಬಿಜೆಪಿ ಜನರ ವಿಶ್ವಾಸ ಕಳೆದುಕೊಂಡಿದೆ. ಕೊರೊನಾ ವೇಳೆ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿರುವುದರಿಂದ ತಕ್ಕ ಪಾಠ ಕಲಿಸಿದ್ದಾರೆ
>
> **ಸಿದ್ದರಾಮಯ್ಯ**, ವಿರೋಧ ಪಕ್ಷದ ನಾಯಕ

> ಬಿಜೆಪಿ, ಕಾಂಗ್ರೆಸ್ ಪಕ್ಷಗಳ ಹಣದ ಅಬ್ಬರ, ಅಪಪ್ರಚಾರಗಳ ನಡುವೆಯೂ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಜನತೆ ಪಕ್ಷದ ಕೈ ಹಿಡಿದಿದ್ದಾರೆ
>
> **ಎಚ್.ಡಿ.ಕುಮಾರಸ್ವಾಮಿ**, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## 24 ಗಂಟೆ: ರಾಜ್ಯದಲ್ಲಿ 48,296 ಮಂದಿಗೆ ಕೋವಿಡ್

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ ದೃಢಪಟ್ಟ ಕೋವಿಡ್ ಪ್ರಕರಣಗಳ ಸಂಖ್ಯೆ 50 ಸಾವಿರದ ಗಡಿ (48,296) ಸಮೀಪಿಸಿದೆ. ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಶೇ 25.44ಕ್ಕೆ ಏರಿಕೆಯಾಗಿದೆ.

ರಾಜ್ಯದ 20 ಜಿಲ್ಲೆಗಳಲ್ಲಿ 500ಕ್ಕೂ ಅಧಿಕ ಹೊಸ ಪ್ರಕರಣಗಳು ದೃಢಪಟ್ಟಿವೆ. ಈ ತಿಂಗಳು 30 ದಿನಗಳಲ್ಲಿಯೇ 5.30 ಲಕ್ಷ ಮಂದಿ ಸೋಂಕಿತರಾಗಿದ್ದಾರೆ. ಇದರಿಂದಾಗಿ ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 15.23 ಲಕ್ಷ ದಾಟಿದೆ. ಇದರಲ್ಲಿ ಬೆಂಗಳೂರಿನಲ್ಲಿಯೇ ಸುಮಾರು ಅರ್ಧದಷ್ಟು (7.56 ಲಕ್ಷ) ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರು, ಮೈಸೂರು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಅಧಿಕ ಪ್ರಕರಣಗಳು ವರದಿಯಾಗುತ್ತಿರುವ ಪರಿಣಾಮ ಸಕ್ರಿಯ ಪ್ರಕರಣಗಳ ಸಂಖ್ಯೆ 3.82 ಲಕ್ಷಕ್ಕೆ ಏರಿಕೆಯಾಗಿದೆ.

ರಾಜ್ಯದ 7 ಜಿಲ್ಲೆಗಳಲ್ಲಿ ಸಾವಿರಕ್ಕೂ ಅಧಿಕ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರಿನಲ್ಲಿ ಹೊಸದಾಗಿ 26,756 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಮೈಸೂರು (3,500), ತುಮಕೂರು (1,801), ಮಂಡ್ಯ (1,348), ಬಳ್ಳಾರಿ (1,282), ಕಲಬುರ್ಗಿ (1,256), ದಕ್ಷಿಣ ಕನ್ನಡ (1,205) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 93 ಮಂದಿ ಸೇರಿದಂತೆ ರಾಜ್ಯದಲ್ಲಿ 217 ಮಂದಿ ಸಾವಿಗೀಡಾಗಿದ್ದಾರೆ. ಹಾಸನದಲ್ಲಿ 19 ಮಂದಿ, ಮೈಸೂರಿನಲ್ಲಿ 13 ಮಂದಿ, ಬಳ್ಳಾರಿಯಲ್ಲಿ 11 ಮಂದಿ, ಧಾರವಾಡದಲ್ಲಿ 7 ಮಂದಿ, ಚಾಮರಾಜನಗರ, ಬೀದರ್, ದಾವಣಗೆರೆ, ಕಲಬುರ್ಗಿ, ಶಿವಮೊಗ್ಗ ಹಾಗೂ ತುಮಕೂರಿನಲ್ಲಿ ತಲಾ 6 ಮಂದಿ ಮೃತಪಟ್ಟಿದ್ದಾರೆ. ಮರಣ ಹೊಂದಿದವರಲ್ಲಿ ಬಹುತೇಕರು ಉಸಿರಾಟದ ಸಮಸ್ಯೆ ಎದುರಿಸಿದ್ದಾರೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಸಂಖ್ಯೆ 15,523ಕ್ಕೆ ಏರಿಕೆಯಾಗಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಏರಿಕೆ ಮಾಡಲಾಗಿದೆ. ಒಂದು ದಿನದ ಅವಧಿಯಲ್ಲಿ 1.89 ಲಕ್ಷ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಸೋಂಕಿತರಲ್ಲಿ 14,884 ಮಂದಿ ಗುಣಮುಖರಾಗಿದ್ದಾರೆ. ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 11.24 ಲಕ್ಷ ದಾಟಿದೆ.

ಇನ್ನಷ್ಟು ಸುದ್ದಿಗಳು 2, 3, 3A, 3B

## ಅನುದಾನಿತ ಶಾಲಾ ಶಿಕ್ಷಕರಿಗೂ ಕೋವಿಡ್ ಪರಿಹಾರ

ಬೆಂಗಳೂರು: ಕೋವಿಡ್ ನಿಯಂತ್ರಣ ಸಂಬಂಧ ಕರ್ತವ್ಯದಲ್ಲಿ ಪಾಲ್ಗೊಂಡು ಸೋಂಕು ತಗುಲಿ ಮೃತರಾಗುವ ಅನುದಾನಿತ ಶಾಲಾ ಶಿಕ್ಷಕರ ಕುಟುಂಬಗಳಿಗೂ ತಲಾ ₹ 30 ಲಕ್ಷ ಮೊತ್ತದ ಪರಿಹಾರ ವಿತರಿಸುವ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ಒಪ್ಪಿಗೆ ಸೂಚಿಸಿದೆ.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮತ್ತು ಸರ್ಕಾರದ ಎಲ್ಲ ಇಲಾಖೆಗಳ ನೌಕರರು ಕೋವಿಡ್ ನಿಯಂತ್ರಣ ಕರ್ತವ್ಯದಲ್ಲಿ ಭಾಗಿಯಾಗಿ ಮೃತರಾದರೆ ಅವರ ಕುಟುಂಬಗಳಿಗೆ ತಲಾ ₹ 30 ಲಕ್ಷ ಪರಿಹಾರ ವಿತರಿಸುವ ಸಂಬಂಧ 2020ರ ಆಗಸ್ಟ್ 7ರಂದು ಆದೇಶ ಹೊರಡಿಸಲಾಗಿತ್ತು. ಈ ಸೌಲಭ್ಯವನ್ನು ಅನುದಾನಿತ ಶಾಲಾ ಶಿಕ್ಷಕರಿಗೂ ವಿಸ್ತರಿಸಿ ಗುರುವಾರ ಆದೇಶ ಹೊರಡಿಸಲಾಗಿದೆ.

ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿ ಅಥವಾ ಬಿಬಿಎಂಪಿ ಆಯುಕ್ತರು ಅನುದಾನಿತ ಶಾಲಾ ಶಿಕ್ಷಕರನ್ನು ಕೋವಿಡ್ ನಿಯಂತ್ರಣ ಸಂಬಂಧಿ ಕರ್ತವ್ಯಕ್ಕೆ ನಿಯೋಜಿಸಿದ ಆದೇಶದ ಪ್ರತಿ ಇದ್ದರೆ ಪರಿಹಾರ ವಿತರಣೆಗೆ ಪರಿಗಣಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ರಾಜ್ಯ ಕೋವಿಡ್ ಅಂಕಿ–ಅಂಶ

| | |
|---|---|
| ಒಟ್ಟು ಸೋಂಕಿತರು | 15,23,142 ▲ (14,74,846 ನಿನ್ನೆಯ ವಿವರ) |
| ಸಕ್ರಿಯ ಪ್ರಕರಣಗಳು | 3,82,690 ▲ |
| ಗುಣಮುಖರಾದವರು | 11,24,909 ▲ |
| ಒಟ್ಟು ಸಾವು | 15,523 ▲ |

**ದಿನದ ಏರಿಕೆ**

| | |
|---|---|
| ಹೊಸ ಪ್ರಕರಣ | 48,296 ▲ |
| ಗುಣಮುಖ | 14,884 ▲ |
| ಸಾವು | 217 ▼ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

## ಒಳ ಪುಟಗಳು

ಸ್ಯಾನಿಟೈಸ್, ಔಷಧ ಸಾಗಣೆಗೆ ಡ್ರೋನ್ 9
ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಶೀಘ್ರ 3B
ಮಣಿಪಾಲ್ ತೆಕ್ಕೆಗೆ ಸೇರಿದ ಕೊಲಂಬಿಯಾ ಏಷ್ಯಾ 8

**ಇಂದಿನ ಪಾಡ್‌ಕಾಸ್ಟ್ ವಿಶೇಷ**
**ವಚನವಾಣಿ**
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

## ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ


**ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ನಿ.,**

ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104.
ದೂ. 23300497 41159606 , ಫ್ಯಾಕ್ಸ್ : 23359600 ಇ-ಮೇಲ್ : vjn@jscbl.com

**ಸ್ವಾಧೀನ ಸೂಚನೆ** ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

ಶ್ರೀ ರೋಹಿತ್ ಯಾದವ್ ಎಸ್

ಶ್ರೀಮತಿ ಪ್ರಭಾವತಿ ಎ ಬಿ

ಕೆಳಸಹಿದಾರರು **ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.1,53,94,011/-** (ರೂಪಾಯಿ ಒಂದು ಕೋಟಿ ಐವತ್ತಮೂರು ಲಕ್ಷದ ತೊಂಭತ್ತನಾಲ್ಕು ಸಾವಿರದ ಹನ್ನೊಂದು ಮಾತ್ರ) ದಿನಾಂಕ **19.02.2021** ರಂದು ಇದ್ದಂತೆ ಪಾವತಿ ಮಾಡಲು **ಸಾಲಗಾರರಾದ: 1) ಶ್ರೀ ರೋಹಿತ್ ಯಾದವ್ ಎಸ್**. ಬಿನ್ ಶ್ರೀ ಬಿ ಶ್ರೀನಿವಾಸ್ **2. ಶ್ರೀಮತಿ ಪ್ರಭಾವತಿ ಎ ಬಿ** ಕೋಂ ಬಿ ಶ್ರೀನಿವಾಸ್ ಇವರಿಬ್ಬರ ವಿಳಾಸ ನಂ.22, 2ನೇ ಮಹಡಿ, 3ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಎನ್.ಎಸ್. ಪಾಳ್ಯ, ಬಿಟಿಎಂ 2ನೇ ಹಂತ, ಬೆಂಗಳೂರು -560076 **ಜಾಮೀನುದಾರರು 1. ಶ್ರೀ ಶ್ರೀನಿವಾಸ್ ಬಿ 2. ಶ್ರೀಮತಿ. ಸೌಮ್ಯಾ ಎಸ್** D/o ಶ್ರೀನಿವಾಸ್ ಬಿ ನಂ.22, 2ನೇ ಮಹಡಿ, 3ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಎನ್ ಎಸ್ ಪಾಳ್ಯ, ಬಿಟಿಎಂ 2ನೇ ಹಂತ, ಬೆಂಗಳೂರು -560076. ಇವರಿಗೆ ದಿನಾಂಕ: **19.02.2021** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(8) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 26.04.2021** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ., ಮೂಡಲಪಾಳ್ಯ ಶಾಖೆ, ಬೆಂಗಳೂರು** ಇವರಿಗೆ ಸಂದಾಯವಾಗತಕ್ಕ ಮೊಬಲಗು **ಸಾಲದ ಖಾತೆ ಸಂಖ್ಯೆ BL/184, ರೂ.1,56,14,630/-** (ರೂಪಾಯಿ ಒಂದು ಕೋಟಿ ಐವತ್ತಾರು ಲಕ್ಷದ ಹದಿನಾಲ್ಕು ಸಾವಿರದ ಆರು ನೂರ ಮೂವತ್ತು ಮಾತ್ರ) ದಿನಾಂಕ **26.04.2021** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

**ಹೈಪೋಥೆಕೇಟೆಡ್ ಸ್ವತ್ತುಗಳ ವಿವರಗಳು ಮತ್ತು ಸಾಲಗಾರನ ಅಡಮಾನದ ಆಸ್ತಿಗಳ ವಿವರಗಳು**

**ಪ್ರಭಾವತಿ ಎ ಬಿ ರವರಿಗೆ ಸೇರಿದ ಆಸ್ತಿ :** ಸ್ಥಿರಾಸ್ತಿಯ ಮನೆ ನಂ.22 (ಹಳೇ ನಂ.44 & 44-ಎ) ಪಿಐಡಿ ನಂ.65-375-22, ಬಿಬಿಎಂಪಿ ವಾರ್ಡ್ ನಂ. 65 ಬಿ.ಟಿ.ಎಂ. ಬಡಾವಣೆ, 3ನೇ ಮುಖ್ಯರಸ್ತೆ, ಎನ್ ಎಸ್ ಪಾಳ್ಯ, ರಾಷ್ಟ್ರಕವಿ ಕುವೆಂಪು ನಗರ, ಬೆಂಗಳೂರು ನೀತಪ್ಪಶೆಟ್ಟಿ ಪಾಳ್ಯ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ, ಉತ್ತರಕ್ಕೆ 53 ಅಡಿ ಮತ್ತು ದಕ್ಷಿಣಕ್ಕೆ 46 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 59 ಅಡಿಗಳು ಒಟ್ಟು ವಿಸ್ತೀರ್ಣ 2920.5 ಚದರ ಅಡಿ ಮತ್ತು ಇದರ ಚಕ್ಕುಬಂದಿ : ಪೂರ್ವಕ್ಕೆ: ಬಿ ನಾರಾಯಣಸ್ವಾಮಿರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಉತ್ತರ ಭಾಗದ ನಿವೇಶನದ ನಂ.22, ಹೊಸ ಮುನಿಸಿಪಲ್ ನಂ.22/1 ಎ ಬಿ ಸುಜಾತರವರಿಗೆ ಸೇರಿದೆ. ದಕ್ಷಿಣಕ್ಕೆ: ರಸ್ತೆ.

ದಿನಾಂಕ : 26.04.2021
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,


ಕೋವಿಡ್: ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಕಿವಿಮಾತು

# ವರ್ಷಾಂತ್ಯದವರೆಗೂ ಮುನ್ನೆಚ್ಚರಿಕೆ ಅಗತ್ಯ

ಪ್ರಜಾವಾಣಿ ವಾರ್ತೆ

ಡಾ.ಸಿ.ಎನ್. ಮಂಜುನಾಥ್

**ಬೆಂಗಳೂರು:** 'ಕೋವಿಡ್ ಎರಡನೇ ಅಲೆಯಲ್ಲಿ ವೈರಾಣು ವೇಗವಾಗಿ ವ್ಯಾಪಿಸಿಕೊಳ್ಳುತ್ತಿದ್ದು, ಪ್ರತಿ ಐವರಲ್ಲಿ ಒಬ್ಬರು ಸೋಂಕಿತರಾಗುತ್ತಿದ್ದಾರೆ. ಜೂನ್ ಮೊದಲ ವಾರದಲ್ಲಿ ಸೋಂಕು ಇಳಿಕೆಯಾಗುವ ಸಾಧ್ಯತೆಯಿದ್ದು, ವರ್ಷಾಂತ್ಯದವರೆಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು' ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು 'ಕೋವಿಡ್ ಸಂದರ್ಭದಲ್ಲಿ ಪತ್ರಕರ್ತರಿಗಿರಬೇಕಾದ ಮುನ್ನೆಚ್ಚರಿಕೆ' ಎಂಬ ಕುರಿತು ಶುಕ್ರವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಒಂದೂವರೆಯಿಂದ ಎರಡು ಕೋಟಿ ಮಂದಿ ಈಗಾಗಲೇ ಸೋಂಕಿತರಾಗಿದ್ದಾರೆ ಎನ್ನುವ ಮಾಹಿತಿಯಿದೆ. ಈ ಸಂದರ್ಭದಲ್ಲಿ ಕಾಯಿಲೆಯಿಂದ ರಕ್ಷಿಸಿಕೊಳ್ಳಲು ಫಲಾನುಭವಿಗಳು ಆದಷ್ಟು ಬೇಗ ಲಸಿಕೆ ಪಡೆದುಕೊಳ್ಳಬೇಕು. ಜ್ವರ, ಕೆಮ್ಮು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದರು.

'ಪತ್ರಿಕೋದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ತಮ್ಮನ್ನೇ ತಾವು ಸ್ಪರ್ಧೆಗೆ ಒಡ್ಡಿಕೊಳ್ಳುವ ಅನಿವಾರ್ಯತೆ ಎದುರಿಸುತ್ತಿರುತ್ತಾರೆ. ಇಂತಹ ಸ್ಪರ್ಧಾತ್ಮಕ ಹಾಗೂ ಒತ್ತಡದ ಕೆಲಸಗಳು ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡದಂತೆ ಮಾಡುತ್ತದೆ. ಇದರಿಂದ ತಮ್ಮನ್ನೇ ತಾವು ಅಪಾಯಕ್ಕೆ ದೂಡಿಕೊಳ್ಳುವ ಸಾಧ್ಯತೆ ಇರುತ್ತದೆ. ಬಹುತೇಕ ಯುವಕರೇ ಇಂತಹ ಅಪಾಯದ ಸ್ಥಿತಿಯಲ್ಲಿ ಕೆಲಸ ಮಾಡುವ ಕಾರಣ ಬಹಳ ಬೇಗ ಸೋಂಕಿಗೆ ಒಳಗಾಗುತ್ತಾರೆ' ಎಂದು ಹೇಳಿದರು.

ನಗರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಶುಕ್ರವಾರ ಕೋವಿಡ್ ರೋಗಿಯೊಬ್ಬರನ್ನು ಆಕ್ಸಿಜನ್ ಸೌಲಭ್ಯ ಹೊಂದಿರುವ ಐಸಿಯು ವಾರ್ಡ್‌ಗೆ ಸ್ಥಳಾಂತರಗೊಳಿಸಲಾಯಿತು –ಪ್ರಜಾವಾಣಿ ಚಿತ್ರ

## ಕೋವಿಡ್ ಆರೈಕೆ ಕೇಂದ್ರ ಸ್ಥಾಪನೆಗೆ ಅನುಮತಿ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಂಕು ಪ್ರಕರಣಗಳು ಹೆಚ್ಚುತ್ತಿರುವುದರಿಂದ ಕೋವಿಡ್ ಆರೈಕೆ ಕೇಂದ್ರಗಳನ್ನು (ಸಿಸಿಸಿ) ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಬೇಕಾಗಿದೆ.

ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘ, ಕಂಪನಿ ಹಾಗೂ ಸರ್ಕಾರೇತರ ಸಂಸ್ಥೆಗಳು ಅವರದೇ ಆವರಣದಲ್ಲಿ ಇಂಥ ಕೇಂದ್ರತೆರೆಯಲು ಆಸಕ್ತಿ ವಹಿಸುತ್ತಿವೆ. 'ಕೇಂದ್ರ ತೆರೆಯುವವರು ಆಯಾ ವಲಯ ಆಯುಕ್ತರ ಅನುಮತಿ ಪಡೆಯಬೇಕು. ಸಿಸಿಸಿ, ಕೋವಿಡ್ ಮಾರ್ಗಸೂಚಿಗಳನ್ವಯ ಕೇಂದ್ರಗಳನ್ನು ನಿರ್ವಹಿಸಬೇಕು' ಎಂದು ಬಿಬಿಎಂಪಿ ಹೇಳಿದೆ.


**ನೈಋತ್ಯ ರೈಲ್ವೆ**

ಮುಕ್ತ ಟೆಂಡರ್ ನೋಟೀಸ್
ನಂ.ಬಿ/ಇ/29/2021-22/ಒಟಿ/01

ಕೆಳಸಹಿದಾರರು ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿ ವಿವರ | ಅಂದಾಜು ಮೌಲ್ಯ |
|---|---|---|
| 1 | ಎಸ್‌ಜಿಟಿ (ವಿದ್ಯುತ್ ವ್ಯವಸ್ಥೆ) ಯಲ್ಲಿ ಬಿಎಲ್‌ಸಿ ಕಂಟೇನರ್ ವ್ಯಾಗನ್‌ಗಳ ನಿರ್ವಹಣೆಗೆ ಅಗತ್ಯವಾದ ಮೂಲಸೌಕರ್ಯ ಸೌಲಭ್ಯಗಳು | ರೂ.1,82,31,030/- |

ಬಿಡ್ ಸಲ್ಲಿಸಲು ಕಡೆಯ ದಿನ: 27.05.2021 ರ 11.00 ಗಂಟೆ.

ವಿವರಗಳಿಗೆ www.ireps.gov.inಗೆ ಲಾಗ್‌ಆನ್ ಮಾಡಿ

ಡಿವಿಜನಲ್ ರೈಲ್ವೇ ಮ್ಯಾನೇಜರ್(ಎಲೆಕ್ಟ್ರಿಕಲ್), ಬೆಂಗಳೂರು

ಪಿಯುಬಿ/10/ಎಎಎಲ್/ಪಿಆರ್‌ಬಿ/ಎಸ್‌ಬಿಸಿ/2021-22


ಆಕ್ಷೇಪಣೆ ಸಲ್ಲಿಕೆಗೆ 10 ದಿನ ಕಾಲಾವಕಾಶ ನೀಡಿರುವ ಬಿಬಿಎಂಪಿ

# 'ಮೆಟ್ರೊ ಮಾರ್ಗಕ್ಕೆ ಸಾವಿರ ಮರ ತೆರವು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಮ್ಮ ಮೆಟ್ರೊ ಎರಡನೇ ಹಂತದ ಸಿಲ್ಕ್ ಬೋರ್ಡ್ ಹಾಗೂ ಕೆ.ಆರ್. ಪುರ (ರೀಚ್ 2ಎ) ನಡುವಿನ ಮೆಟ್ರೊ ರೈಲು ಮಾರ್ಗ ನಿರ್ಮಾಣಕ್ಕೆ 1,026 ಮರಗಳಿಗೆ ಕೊಡಲಿಯೇಟು ಬೀಳಲಿದೆ. ಬಿಎಂಆರ್‌ಸಿಎಲ್‌ನ ಈ ನಡೆಗೆ ಪರಿಸರ ಪ್ರೇಮಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಮರಗಳನ್ನು ತೆರವುಗೊಳಿಸಲು ಅನುಮತಿ ನೀಡಬೇಕು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಿತ್ತು. ಇದಕ್ಕೆ ಬಿಬಿಎಂಪಿ ಅನುಮತಿ ನೀಡಿದೆ. ಆದಾಗ್ಯೂ, ಈ ಮರಗಳ ತೆರವಿಗೆ ಸಂಬಂಧಿಸಿದ ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರಿಗೆ ಹತ್ತು ದಿನ ಕಾಲಾವಕಾಶ ನೀಡಲಾಗಿದೆ ಎಂದು ಪಾಲಿಕೆ ಶುಕ್ರವಾರ ತಿಳಿಸಿದೆ.

ಈ ರೀಚ್‌ನ ಒಟ್ಟು ಉದ್ದ 19.63 ಕಿ.ಮೀ. ಈ ಪೈಕಿ ಕಾಡುಬೀಸನಹಳ್ಳಿಯಿಂದ ಬೈಯಪ್ಪನಹಳ್ಳಿ ಡಿಪೊವರೆಗಿನ 9.5 ಕಿ.ಮೀ. ವರೆಗಿನ ಮಾರ್ಗದಲ್ಲಿ ಈ ಮರಗಳನ್ನು ತೆರವುಗೊಳಿಸಬೇಕಾಗಿದೆ. ಬಹುತೇಕ ಮರಗಳು ರಸ್ತೆಯ ಬದಿಯಲ್ಲಿಯೇ ಇದ್ದು, ಈ ಮಾರ್ಗದಲ್ಲಿ ನಿಲ್ದಾಣಗಳ ನಿರ್ಮಾಣ ಮಾಡಲು ಮರಗಳನ್ನು ತೆರವು ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಹೇಳಿದೆ.

'ಕೋವಿಡ್ ಹರಡುತ್ತಿರುವ ಈ ಸಂದರ್ಭದಲ್ಲಿ ಪರಿಸರದ ಮೇಲೆ ಹಾನಿಯುಂಟು ಮಾಡಲು ನಿಗಮ ಮುಂದಾಗಿದೆ. ಈಗಾಗಲೇ ಆಕ್ಸಿಜನ್ ಇಲ್ಲದೆ ಜನ ನರಳುತ್ತಿದ್ದಾರೆ. ಈ ಮರಗಳನ್ನು ಕಡಿಯುವ ಬದಲು ಸ್ಥಳಾಂತರ ಮಾಡುವ ನಿಟ್ಟಿನಲ್ಲಿ ನಿಗಮ ಯೋಚನೆ ಮಾಡಬೇಕು' ಎಂದು ರಚ್ಚು ಎಂಬುವರು ಟ್ವೀಟ್ ಮಾಡಿದ್ದಾರೆ.

ಜಯನಗರದ ಪರಿಸರ ಕಾರ್ಯಕರ್ತೆ ರಜನಿ ಸಂತೋಷ್, 'ಸಾಂಕ್ರಾಮಿಕ ರೋಗ ಹರಡುತ್ತಿರುವ ಈ ಸಂದರ್ಭದಲ್ಲಿ, ಮೆಟ್ರೊ ಮಾರ್ಗ ನಿರ್ಮಾಣ ನಮ್ಮ ಆದ್ಯತೆಯಾಗಬಾರದು' ಎಂದು ಹೇಳಿದರು.

ಪರಿಸರ ಕಾರ್ಯಕರ್ತ ದತ್ತಾತ್ರೇಯ ದೇವರೆ, 'ಸರ್ಕಾರ ಕೋವಿಡ್ ಕರ್ಫ್ಯೂ ಜಾರಿ ಮಾಡಿದೆ. ಈ ಸಂದರ್ಭದಲ್ಲಿ ಮರಗಳ ತೆರವಿಗೆ ಅನುಮತಿ ನೀಡಿ, ಆಕ್ಷೇಪಣೆ ಸಲ್ಲಿಸಲು ಕೇವಲ 10 ದಿನಗಳ ಕಾಲಾವಕಾಶ ನೀಡಲಾಗಿದೆ. ಕರ್ಫ್ಯೂ, ಲಾಕ್‌ಡೌನ್‌ನಂತಹ ನಿರ್ಬಂಧಗಳು ಮುಗಿದ ನಂತರ ಈ ಎಲ್ಲ ಪ್ರಕ್ರಿಯೆ ನಡೆಸಬೇಕು. ಆಕ್ಷೇಪಣೆ ಸಲ್ಲಿಸುವ ಕಾಲಾವಕಾಶವನ್ನು ವಿಸ್ತರಿಸಬೇಕು' ಎಂದು ಒತ್ತಾಯಿಸಿದರು.

ಈ ಹಿಂದೆ ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ನಡೆದಿದ್ದ ಮೆಟ್ರೊ ಕಾಮಗಾರಿಯ ವೇಳೆ ಮರಗಳನ್ನು ಕತ್ತರಿಸಿದ್ದ ದೃಶ್ಯ –ಪ್ರಜಾವಾಣಿ ಸಂಗ್ರಹ ಚಿತ್ರ

## ಬಜಾಜ್ ಆಟೊ: ನೀರಜ್ ಬಜಾಜ್ ಹೊಸ ಅಧ್ಯಕ್ಷ

**ನವದೆಹಲಿ (ಪಿಟಿಐ):** ದೇಶದ ಅತ್ಯಂತ ಯಶಸ್ವಿ ಉದ್ಯಮಿಗಳಲ್ಲಿ ಒಬ್ಬರು ಎಂಬ ಹೆಗ್ಗಳಿಕೆ ಹೊತ್ತಿರುವ ರಾಹುಲ್ ಬಜಾಜ್ ಅವರು ಬಜಾಜ್ ಆಟೊ ಕಂಪನಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಮೇ 1ರಿಂದ ಅನ್ವಯ ಆಗುವಂತೆ ನೀರಜ್ ಬಜಾಜ್ ಅವರು ಕಂಪನಿಯ ಅಧ್ಯಕ್ಷರಾಗಲಿದ್ದಾರೆ ಎಂದು ಕಂಪನಿಯು ಷೇರು ಮಾರುಕಟ್ಟೆಗೆ ತಿಳಿಸಿದೆ.

ರಾಹುಲ್ ಬಜಾಜ್ ಅವರು ಕಂಪನಿ ಗೌರವಾಧ್ಯಕ್ಷ ಸ್ಥಾನವನ್ನು ಮುಂದಿನ ಐದು ವರ್ಷಗಳ ಅವಧಿಗೆ ವಹಿಸಿಕೊಳ್ಳಲಿದ್ದಾರೆ ಎಂದೂ ಕಂಪನಿಯ ಮೂಲಗಳು ತಿಳಿಸಿವೆ.

# ಬಿಬಿಎಂಪಿ: ಆಸ್ತಿ ತೆರಿಗೆ ರಿಬೇಟ್ ಅವಧಿ ಮೇ ಅಂತ್ಯದವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

**ಬೆಂಗಳೂರು:** ಬಿಬಿಎಂಪಿಯು 2021-22 ನೇ ಸಾಲಿನ ಪೂರ್ತಿ ಆಸ್ತಿ ತೆರಿಗೆಯನ್ನು ಒಮ್ಮೆಲೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಿದೆ.

ಪ್ರತಿ ಆರ್ಥಿಕ ವರ್ಷದಲ್ಲೂ ಆ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣಪ್ರಮಾಣದಲ್ಲಿ ಏ 30ರ ಒಳಗೆ ಪಾವತಿ ಮಾಡಿದವರಿಗೆ ಬಿಬಿಎಂಪಿ ಶೇ 5 ರಷ್ಟು ರಿಯಾಯಿತಿ ನೀಡುತ್ತದೆ. ಕೊರೋನಾ ಸೋಂಕು ನಿಯಂತ್ರಣಕ್ಕಾಗಿ ರಾಜ್ಯದಲ್ಲಿ ಇದೇ 27ರಿಂದ 14 ದಿನಗಳ ಕಾಲ ಕರ್ಫ್ಯೂ ಜಾರಿಗೊಳಿಸಲಾಗಿದೆ. ಈ ಅವಧಿಯಲ್ಲಿ ತೆರಿಗೆದಾರರು ಬ್ಯಾಂಕ್‌ಗಳಿಗೆ ಭೇಟಿ ನೀಡಿ ಆಸ್ತಿತೆರಿಗೆ ಪಾವತಿಸುವುದು ಕಷ್ಟಸಾಧ್ಯ. ಹಾಗಾಗಿ ರಿಯಾಯಿತಿ ನೀಡುವ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

'ಬಿಬಿಎಂಪಿ ವ್ಯಾಪ್ತಿಯ ಆಸ್ತಿ ಮಾಲೀಕರು ಮೇ 31ರವರೆಗೆ ನೀಡುವ ರಿಯಾಯಿತಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು. ತೆರಿಗೆ ಕಟ್ಟುವ ಮೂಲಕ ನಗರದ ಅಭಿವೃದ್ಧಿಗೆ ಸಹಕರಿಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಆನ್‌ಲೈನ್ ಮೂಲಕವೂ ತೆರಿಗೆ ಪಾವತಿಸಬಹುದು. ಎಲ್ಲ ನಾಗರಿಕರಿಗೂ ಆನ್‌ಲೈನ್‌ನಲ್ಲಿ ತೆರಿಗೆ ಪಾವತಿ ಸಾಧ್ಯವಾಗದು. ಅಂತಹವರು ಅವಕಾಶ ವಂಚಿತರಾಗಬಾರದು ಎಂಬ ಕಾರಣಕ್ಕೆ ಈಗ ಅವಧಿಯನ್ನು ವಿಸ್ತರಿಸಿದ್ದೇವೆ. ಈ ಅವಕಾಶವನ್ನು ಬಳಸಿಕೊಳ್ಳಬೇಕು' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಎಸ್. ಬಸವರಾಜು ಹೇಳಿದರು.

ಕೋವಿಡ್ ಲಾಕ್‌ಡೌನ್ ಜಾರಿಯಲ್ಲಿದ್ದ ಕಾರಣ 2020-21ನೇ ಸಾಲಿನಲ್ಲೂ ಬಿಬಿಎಂಪಿಯು ಆಸ್ತಿ ತೆರಿಗೆ ಪಾವತಿದಾರರಿಗೆ ನೀಡುವ ಶೇ 5ರಷ್ಟು ರಿಯಾಯಿತಿಯನ್ನು 2020ರ ಮೇ 31ರವರೆಗೆ ವಿಸ್ತರಿಸಿತ್ತು.

## ಬಿಇಎಲ್‌ನಿಂದ ಪಿಎಂ ಕೇರ್ಸ್‌ಗೆ ದೇಣಿಗೆ

**ಬೆಂಗಳೂರು:** ಕೇಂದ್ರ ಸರ್ಕಾರದ ಮಾಲೀಕತ್ವದ 'ನವರತ್ನ' ಕಂಪನಿಗಳಲ್ಲಿ ಒಂದಾಗಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಕಂಪನಿಯು ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಿಂದ ಪಿಎಂ ಕೇರ್ಸ್ ನಿಧಿಗೆ ₹ 5.45 ಕೋಟಿ ದೇಣಿಗೆ ನೀಡಿದೆ.

ಸಿಎಸ್‌ಆರ್ ನಿಧಿಯಲ್ಲಿ ಇರುವ ₹ 4 ಕೋಟಿಯನ್ನು ಬಿಇಎಲ್, ಆರು ರಾಜ್ಯಗಳಲ್ಲಿನ 12 ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಆರಂಭಿಸಲು ವಿನಿಯೋಗಿಸಲಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

**ಸಂಕ್ಷಿಪ್ತ ಸುದ್ದಿ**

### ಮೇ 5ಕ್ಕೆ ರಕ್ತದಾನ ಶಿಬಿರ

**ಬೆಂಗಳೂರು:** ಶ್ರೀಸುಬ್ರಹ್ಮಣ್ಯ ಮಠ, ಸಂತೋಷಕುಮಾರ್ ರಾವ್ ಚಾರಿಟಬಲ್ ಟ್ರಸ್ಟ್ ಹಾಗೂ ನಾರಾಯಣ ಹೃದಯಾಲಯದ ಸಹಯೋಗದಲ್ಲಿ ಮೇ 5ರಂದು ಬೆಳಿಗ್ಗೆ 9ರಿಂದ 12 ಗಂಟೆಯವರೆಗೆ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಕೋವಿಡ್ ಬಿಕ್ಕಟ್ಟಿನಿಂದ ರಕ್ತನಿಧಿಗಳಲ್ಲೂ ಅಗತ್ಯ ಪ್ರಮಾಣದ ರಕ್ತ ಲಭ್ಯವಾಗುತ್ತಿಲ್ಲ. ಸಾರ್ವಜನಿಕರು ಸ್ವಯಂಪ್ರೇರಿತವಾಗಿ ಶಿಬಿರದಲ್ಲಿ ರಕ್ತ ದಾನ ಮಾಡುವುದರಿಂದ ಹಲವು ಜನರ ಜೀವ ಉಳಿಯಲಿದೆ. ಶಿಬಿರ ಆಯೋಜಿಸಲು ಎಲ್ಲ ಸುರಕ್ಷಾ ಕ್ರಮ ಕೈಗೊಳ್ಳಲಾಗಿದ್ದು, 18 ರಿಂದ 60 ವಯೋಮಾನದವರು ಶಿಬಿರದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸ್ಥಳ-ಶ್ರೀಸುಬ್ರಹ್ಮಣ್ಯ ಮಠ, ಅಕ್ಷಯನಗರ ಪಶ್ಚಿಮ. ಸಂಪರ್ಕ:98866 89820

### ಮನೆ ಕೆಲಸದವರಿಗೆ ಪ್ರವೇಶ ಬೇಡ

**ಬೆಂಗಳೂರು:** ಕೋವಿಡ್ ಬಿಗಡಾಯಿಸಿರುವ ಈ ಪರಿಸ್ಥಿತಿಯಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಮನೆ ಕೆಲಸದವರು, ಅಡುಗೆಯವರು ಹಾಗೂ ಸಂದರ್ಶಕರ ಪ್ರವೇಶಕ್ಕೆ ಅನುಮತಿ ನೀಡಬಾರದು ಎಂದು ಬೆಂಗಳೂರು ನವನಿರ್ಮಾಣ ಪಕ್ಷದ (ಬಿಎನ್‌ಪಿ) ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ಸಲಹೆ ನೀಡಿದ್ದಾರೆ.

'ಅಪಾರ್ಟ್‌ಮೆಂಟ್ ಸಮುಚ್ಚಯಗಳ ವ್ಯವಸ್ಥಾಪಕ ಸಮಿತಿಗಳು, ನಿವಾಸಿಗಳು, ನೌಕರರು ಸೇರಿದಂತೆ ಜನರ ಚಲನವಲನಕ್ಕೆ ಕಠಿಣ ನಿರ್ಬಂಧಗಳನ್ನು ವಿಧಿಸಬೇಕಿದೆ. ಹೊರಗಿನವರ ಪ್ರವೇಶದಿಂದ ಸೋಂಕು ಹರಡುವ ಸಾಧ್ಯತೆ ಎದುರಾಗಬಹುದು. ಕೋವಿಡ್ ನಿಯಂತ್ರಣಕ್ಕೆ ಎಲ್ಲರೂ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸೋಣ' ಎಂದೂ ಹೇಳಿದ್ದಾರೆ.

### ರೈತರಿಗೆ ಸಹಾಯವಾಣಿ

**ಬೆಂಗಳೂರು:** ಕೊರೊನಾ ಕರ್ಫ್ಯೂ ಇರುವುದರಿಂದ ರೈತರಿಗೆ ಅಗತ್ಯ ಮಾಹಿತಿ ಹಾಗೂ ನೆರವು ನೀಡುವ ಉದ್ದೇಶದಿಂದ ರಾಜ್ಯ ತೋಟಗಾರಿಕೆ ಇಲಾಖೆಯು ಸಹಾಯವಾಣಿ ಆರಂಭಿಸಿದೆ.

ರೈತರು ಬೆಳಿಗ್ಗೆ 8ರಿಂದ ರಾತ್ರಿ 7 ಗಂಟೆಯವರೆಗೆ ಸಹಾಯವಾಣಿ ಕೇಂದ್ರಕ್ಕೆ ಕರೆ ಮಾಡಿ, ಮಾಹಿತಿ ಪಡೆಯಬಹುದು. ಸಹಾಯವಾಣಿ ಸಂಖ್ಯೆ:080-2657 7997, 080-26577304.

## ಬಾಕಿ ಅರ್ಜಿ ಅಪ್ಲೋಡ್‌ಗೆ ಸೂಚನೆ

**ಬೆಂಗಳೂರು:** ರಾಜ್ಯದಲ್ಲಿ ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ನಮೂನೆ 57ರಡಿ ಸ್ವೀಕರಿಸಿದ್ದ ಅರ್ಜಿಗಳ ಪೈಕಿ ಬಾಕಿ ಇರುವ 4.83 ಲಕ್ಷ ಅರ್ಜಿಗಳನ್ನು ತಂತ್ರಾಂಶದಲ್ಲಿ ಅಪ್ಲೋಡ್ ಮಾಡುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಲ್ಲ ಜಿಲ್ಲಾಧಿಕಾರಿಗಳಿಗೂ ಶುಕ್ರವಾರ ಸೂಚನೆ ನೀಡಿದ್ದಾರೆ.

2018ರ ಮಾರ್ಚ್ 17ರಿಂದ 2019ರ ಮಾರ್ಚ್ 16ರವರೆಗೆನಮೂನೆ 57ರ ಅಡಿ ಒಟ್ಟು 8.57 ಲಕ್ಷ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು.

ಈ ಪೈಕಿ 3.74 ಲಕ್ಷ ಅರ್ಜಿಗಳನ್ನು ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲಾಗಿತ್ತು. ಅದೇ ಸಮಯದಲ್ಲಿ ಲೋಕಸಭಾ ಚುನಾವಣೆ ಘೋಷಣೆಯಾದ ಕಾರಣದಿಂದ 4.83 ಲಕ್ಷ ಅರ್ಜಿಗಳನ್ನು ತಂತ್ರಾಂಶಕ್ಕೆ ಅಪ್ಲೋಡ್ ಮಾಡಲು ಸಾಧ್ಯವಾಗಿರಲಿಲ್ಲ.

ಹಾಗಾಗಿ, ಬಾಕಿ ಇರುವ 4.83 ಲಕ್ಷ ಅರ್ಜಿ ಗಳನ್ನು ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲು ಮೇ 1ರಿಂದ ಜುಲೈ 31ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತಿಳಿಸಿದ್ದಾರೆ.

## ಮಂತ್ರಾಲಯದಲ್ಲಿ ದರ್ಶನ ಸ್ಥಗಿತ

**ರಾಯಚೂರು:** ಕೊರೊನಾ ಸೋಂಕು ಎಲ್ಲೆಡೆ ವ್ಯಾಪಿಸುತ್ತಿರುವ ಕಾರಣ ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿ ಮಠದಲ್ಲಿ ಮೇ 1 ರಿಂದ ಭಕ್ತರ ದರ್ಶನ ಸ್ಥಗಿತಗೊಳಿಸಲಾಗಿದೆ. ಸ್ಥಳೀಯವಾಗಿ ಲಾಕ್‌ಡೌನ್ ವಿಧಿಸಿರುವುದರಿಂದ ಮುಂದಿನ ಆದೇಶದವರೆಗೂ ಭಕ್ತರಿಗೆ ದರ್ಶನಕ್ಕೆ ಅವಕಾಶ ಇರುವುದಿಲ್ಲ ಎಂದು ಮಠದ ವ್ಯವಸ್ಥಾಪಕ ವೆಂಕಟೇಶ ಜೋಶಿ ತಿಳಿಸಿದ್ದಾರೆ. ಆದರೆ, ಮಠದಲ್ಲಿ ಪೂಜಾ ಕಾರ್ಯಗಳು ಎಂದಿನಂತೆ ನಡೆಯುತ್ತವೆ. ಪಂಚಾಮೃತ, ರಥೋತ್ಸವ ಸೇವೆಗಳಿರುತ್ತವೆ. ಆನ್‌ಲೈನ್ ಮೂಲಕ ಸೇವೆಗಳಲ್ಲಿ ಪಾಲ್ಗೊಳ್ಳಬಹುದು ಎಂದು ತಿಳಿಸಿದ್ದಾರೆ.


**ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್**
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ
ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009

ಕೆಆರ್‌ಐಡಿಎಲ್ ಸಂಸ್ಥೆಯು ಸಾರ್ವಜನಿಕ ವಲಯದ ಬ್ಯಾಂಕ್ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಖಾಸಗಿ ವಲಯದ ಬ್ಯಾಂಕ್‌ಗಳಿಂದ ಒಂದು ವರ್ಷದ ಅವಧಿಗೆ **ರೂ.400.00 ಕೋಟಿಗಳನ್ನು** ನಿಶ್ಚಿತ ಠೇವಣಿಯಲ್ಲಿ ಹೂಡಲು ಇ-ಬಿಡ್ ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in** ರಲ್ಲಿ 30-04-2021 ರಿಂದ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು



**ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ**

ಚಿಕ್ಕಬಳ್ಳಾಪುರದ ಜಿಲ್ಲಾ ಆಸ್ಪತ್ರೆಯ ನೂತನ ಕಟ್ಟಡದ ಆವರಣದಲ್ಲಿ ಸಾರ್ವಜನಿಕರು ನಿಲ್ಲಿಸುವ ವಾಹನಗಳಿಗೆ ನಿಲುಗಡೆ ಶುಲ್ಕವನ್ನು ಸಂಗ್ರಹಿಸುವ ಗುತ್ತಿಗೆಯನ್ನು ನೀಡುವ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:27.05.2021 ಸಂಜೆ 4.00 ಗಂಟೆ.** ಹೆಚ್ಚಿನ ವಿವರಗಳಿಗೆ ಜಿಲ್ಲಾ ಶಸ್ತ್ರಚಿಕಿತ್ಸಕರು ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರರವರನ್ನು ಸಂಪರ್ಕಿಸಬಹುದು. ದೂರವಾಣಿ ಸಂ: 08156-272388

ಸಹಿ/- ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಎಂಸಿಎ/ಆರ್.ಓ.ಸಂಖ್ಯೆ:21/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**RENTAL PROPERTIES**

**Accommodation Available**

**Commercial**

Commercial Accommodation, 3 Floors, GF+2, 1400 Square Feet Each+ Mezanine. Strong Room 300 Square Feet, 100 Square Feet Atm, Adequate Power Supply, 2 Wheeler Parking, In 5th Cross ,Malleswaram. Suitable For Banks, Offices, Showrooms Etc. For Immediate Occupation. Owner Contact: 9945282653

**Flats**

**J.P.NAGAR FOR** rent 2BHK apartment semifurnished, covered carpark, lift 24hrs cauvery, bore water and Security, behind Kalayani Magnum, near to Bannergatta Appolo hospital. Contact 9845522122.

**NEXT TO** JP Nagar Metro station, GR Pinnacle Apartment 2BHK furnished apartment for rent. Call:7248647494

**House**

**2500 SQFT** building just behind Head Post office, Basaveshwara nagar available for rent suitable for Guest house/ Office /PG/Godown Contact: 8088535399

**FOR RENT,** Jalahalli Cross, 3 BHK Independent, Carpark, Garden, 2 sitouts, all facilities. Contact: 9448879852

**BUILDERS ESSENTIAL**

**Water Proofing Materials**

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

**REAL ESTATE BUYING**

**Farm House/ Land/ Resorts**

**Mysore**

**FOR BUYING** and Selling MUDA Sites, Houses, Apartments, Commercials, Alienated lands and Agriculture lands in Mysore Contact: Vishwanath Gowda Mysore Estates 9590911111

**Sites**

**Arkavathy Layout**

BDA SITES WANTED ARKAVATHI (1-22 Blocks), Kempegowda, Any BDA Layout. Genuine Customers Contact: SAPTHAGIRI. 9900268073, 9448068073.

**Vishweshwariah Layout**

**WANTED BDA** Sites 20x30,30x40,40x60,50x80 at Vishveshwaraiah Layout & Banashankari 6th Stage. Immediate settlement-7676900174,9945569909

**REAL ESTATE SELLING**

**Agricultural Land**

**Kanakapura Road**

RS.299/- SQ.FT,AGRICULTURE Farm land for sale in Maralvadi, near harohalli at Kanakapura road,Gated community. starting from 6,534Sqft cont: 9108910278 /7892005063

**Commercial Building**

**Hosur Road**

"COMMERCIAL BUILDING SALE: 2Cr to 5Cr, Rental income 4 Lakhs, Electronic City, HSR, Bommanahalli. 9880080388"

**Commercial Land**

**Mysore**

**COMMERCIAL LAND** 2 Acres is Available for Joint Venture. Developer can avail loan on Property. Contact 7676770503

**Out-Station**

GUBBI TOWN, DC Converted 16 Gunta Land For Sale, Near Bus-Stand & 11.5 Gunta Behind Police Station 9880419865.

**Flat**

**Uttarahalli**

3-BHK/ 2-BHK- Flat For Lease/ Sale. Uttarahalli Busstand. Well-developed nearby Hospitals & Schools.Contact Owner:- 9449599961.

**House**

**Banashankari**

BSK 6TH stage Pavamanapura Layout Newly constructed 30x40 fully furnished residential building G+2 floors for sale contact- 9731056376

**Peenya**

**SALE: HOUSE-** 3-Floors on 30x55- Gruhalakshmi layout, Nellagadranahalli, Nagasandra Post Bangalore-73. East Door-(S/F)- Ground & First-2BHK, 2nd- 1-BR, Carpark. 'B'-Khata. Price 1.75Crs (Negotiable). Contact: 89518-80703/ 98802-70482.

**PROPERTY CORNER**

RERA Registered Project: PRM/KA/RERA/1251/309/PR/191025/002967

POSSESSION BY JUNE 2021
SAI SHAKTHI shreya blessed life
BBMP APPROVED
off MAGADI ROAD, Behind Andhra Bank, Andrahalli Main Road, that's reachable to everything...
2/3 BHK Apartments Starting 42 Lacs* Onwards

ಸಾಯಿ ಶಕ್ತಿ ಡೆವಲಪರ್ಸ್
SAI SHAKTHI Developers
Simple . Honest . Different
Approved by leading Financial Institutions
SBI Canara Bank HDFC
*T&C apply
Classy homes at Herohalli, Andrahalli Main Road, Magadi Road, Behind Peenya 2nd Stage, Bengaluru.
Dr. V. Subba Reddy/Kokila www.saishakthidevelopers.com 99455 39673

**Sites**

**Arkavathi Layout**

ARKAVATHI LAYOUT BDA Site 40x60 North, Sale. 3rd Block, HegdeNagara, Good Location. Owner: SHANKAR 9844093855.

**Airport Road**

BSNL HOUSING SOCIETY PREMIUM RESIDENTIAL/COMMERCIAL SITES NEAR BLORE INTL AIRPORT, ON 6LANE 300ft RING ROAD, 4 INSTALLMENTS. OPEN FOR GENERAL PUBLIC. CALL 9071534000

**Banashankari**

BANASHANKARI 6TH Stage, Anjanapura, Vishweswaraiah, Pavamanapura, WANTED/ SELLING, BDA/'A' Katha Sites, Immediate Settlement. Genuine Owners Call: SHIVARAJU: 9845390290, 9591369367.

**BSK 6TH** STAGE- 11th Block No.432(E) East Facing, Measuring 20x30, PRICE: 50 Lakhs, Contact: 98802-70482

**Devanahalli**

**GATED COMMUNITY** Plots for Sale. 1500sqft plot in Chikkaballapur. 1200sqft plot in Jangammakote. Contact 9972528503.

**BUSINESS**

**Business Offers**

**Finance**

NRI'S INVESTMENT And Finance Available On LowInterestAgainst Properties,Land & Buildings,Sites,Flats Converted&Agricultural Lands Call:7411265189

**General**

**GET 30-LAKHS** Assured return from India's No.1 Company TATA. Just 5000/-PM. 7829975577/ 9986375577

**SOCIAL SERVICES**

**Old Age Home**

**SUKHSHANTHI LUXURY** Retirement Home. Furnished Accommodation with 3 meals, 24x7 Nurse, Ambulance, Library. Rent Rs. 18,890/- pm. Near Sarjapur, Bangalore. Call: 88847-10009/ 080 26629422

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SATURDAY & GET 50% OFF ON SUNDAY AD
For more information contact:
9880856233
9731810277 | 9901641752
9845114560 | 9886213331
*condition apply

ನಗರದ 50 ಆಸ್ಪತ್ರೆಗಳಲ್ಲಿ ಸಹಾಯ ಕೇಂದ್ರ ಶೀಘ್ರ • ಆರೈಕೆ ಕೇಂದ್ರಗಳಲ್ಲಿ ಶೇ 20ರಷ್ಟು ಆಕ್ಸಿಜನ್ ಹಾಸಿಗೆ ವ್ಯವಸ್ಥೆ

# 11 ಆಸ್ಪತ್ರೆಗಳಲ್ಲಿ 'ಆಕ್ಸಿಜನ್ ಪೂರೈಕೆ ಕೇಂದ್ರ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಬಿಎಂಪಿಯ 11 ಹೆರಿಗೆ ಆಸ್ಪತ್ರೆಗಳನ್ನು ಆಮ್ಲಜನಕ ಪೂರೈಕೆ ಕೇಂದ್ರ (ಆಕ್ಸಿಜನ್ ಟ್ರಾನ್ಸಿಟ್ ಸೆಂಟರ್) ಗಳನ್ನಾಗಿ ಮಾಡಲಾಗುತ್ತಿದೆ. ಜೊತೆಗೆ, 50 ಆಸ್ಪತ್ರೆಗಳಲ್ಲಿ ಸಹಾಯ ಕೇಂದ್ರ (ಹೆಲ್ಪ್ ಡೆಸ್ಕ್) ತೆರೆಯಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಾರಿಗಾದರೂ ಆಕ್ಸಿಜನ್ ಸಮಸ್ಯೆ ಇದ್ದರೆ ಈ ಕೇಂದ್ರಗಳಿಗೆ ಭೇಟಿ ನೀಡಬಹುದು. ರೋಗಿಗಳಿಗೆ ಆಕ್ಸಿಜನ್ ಅವಶ್ಯಕತೆಯಿದೆಯೇ ಇಲ್ಲವೇ ಎಂಬುದನ್ನು ವೈದ್ಯರು ಖಾತರಿ ಪಡಿಸಿಕೊಳ್ಳುತ್ತಾರೆ' ಎಂದರು.

'ಅವಶ್ಯಕತೆಯಿದ್ದರೆ ಆಸ್ಪತ್ರೆಗೆ ದಾಖಲಾಗಲು ವೈದ್ಯರು ಸೂಚಿಸುತ್ತಾರೆ' ಎಂದರು.

**ಹೆಲ್ಪ್ ಡೆಸ್ಕ್:** 'ಈಗಾಗಲೇ 25 ಆಸ್ಪತ್ರೆಗಳಲ್ಲಿ ಸಹಾಯ ಕೇಂದ್ರ ತೆರೆಯಲಾಗಿದೆ. ಇದನ್ನು 50ಕ್ಕೆ ಏರಿಸಲಾಗುವುದು. ಈ ಕೇಂದ್ರಗಳು 24 ಗಂಟೆಗಳ ಕಾಲ ಕಾರ್ಯನಿರ್ವಹಿಸಲಿವೆ. ಆಸ್ಪತ್ರೆಗೆ ಬಂದ ನಾಗರಿಕರು ಅಥವಾ ರೋಗಿಗಳು ಆಸ್ಪತ್ರೆಗಳ ಬಳಿ ಹೋದ ವೇಳೆ ಅವರ ಸಮಸ್ಯೆಗಳು ಹಾಗೂ ಅವರಲ್ಲಿರುವ ಗೊಂದಲಗಳು ಬಗೆಹರಿಸುವ ಕಾರ್ಯವನ್ನು ಸಿಬ್ಬಂದಿ ಮಾಡಲಿದ್ದಾರೆ' ಎಂದರು.

ಬಿಬಿಎಂಪಿಯಿಂದ ತೆರೆಯಲಾಗಿರುವ ಸಹಾಯ ಕೇಂದ್ರಗಳ ಕಾರ್ಯ ಪರಿಶೀಲಿಸಿದ ಗೌರವ್ ಗುಪ್ತ

'ಆಸ್ಪತ್ರೆ ಹಾಗೂ ನಾಗರಿಕರ ನಡುವೆ ಸಮನ್ವಯ ಕೊಂಡಿಯಾಗಿ ಈ ಕೇಂದ್ರಗಳು ಕಾರ್ಯನಿರ್ವಹಿಸಲಿವೆ' ಎಂದರು.

'ಅಪೊಲೊ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ 47 ಹಾಸಿಗೆಗಳನ್ನು ನೀಡಲಾಗಿದೆ' ಎಂದೂ ಅವರು ತಿಳಿಸಿದರು.

**800 ಹಾಸಿಗೆ ಭರ್ತಿ:** 'ಪಾಲಿಕೆ ವ್ಯಾಪ್ತಿಯ 12 ಕೋವಿಡ್ ಆರೈಕೆ ಕೇಂದ್ರಗಳಲ್ಲಿ 2,100 ಹಾಸಿಗೆಗಳಿದ್ದು, 800 ಹಾಸಿಗೆ ಭರ್ತಿಯಾಗಿವೆ. ಇನ್ನೂ 1,200 ಹಾಸಿಗೆಗಳು ಲಭ್ಯವಿದೆ. ಎಲ್ಲ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಶೇ 20 ರಷ್ಟು ಆಕ್ಸಿಜನ್ ಹಾಸಿಗೆ ವ್ಯವಸ್ಥೆ ಮಾಡಲಾಗುವುದು' ಎಂದರು.

ವಲಯ ಆಯುಕ್ತರಾದ ತುಳಸಿ ಮದ್ದಿನೇನಿ, ವಲಯ ಜಂಟಿ ಆಯುಕ್ತ ವೀರಭದ್ರಸ್ವಾಮಿ, ಆರೋಗ್ಯಾಧಿಕಾರಿ ಡಾ. ಶಿವಕುಮಾರ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಹೋಟೆಲ್‌ಗಳಲ್ಲಿ 'ಸ್ಟೆಪ್ ಡೌನ್' ಆಸ್ಪತ್ರೆ

ಕೋವಿಡ್ ಸೋಂಕಿತರಿಗೆ ತ್ವರಿತವಾಗಿ ಚಿಕಿತ್ಸೆ ನೀಡುವ ನಿಟ್ಟನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ಪತ್ರೆಗಳ ಜೊತೆಗೂಡಿ ಹೋಟೆಲ್‌ಗಳಲ್ಲಿ ಸ್ಟೆಪ್ ಡೌನ್ ಆಸ್ಪತ್ರೆಗಳನ್ನು ತೆರೆಯಲಾಗುತ್ತಿದೆ.

'ಅಪೊಲೊ ಆಸ್ಪತ್ರೆ ಸಹಯೋಗದಲ್ಲಿ ಈಗಾಗಲೇ ಹೋಟೆಲ್‌ನಲ್ಲಿ 39 ಹಾಸಿಗೆ ಸಾಮರ್ಥ್ಯದ ಸ್ಟೆಪ್ ಡೌನ್ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಕಾರ್ಯನಿರ್ವಹಿಸುವ ವೈದ್ಯರು ಮತ್ತು ಸಿಬ್ಬಂದಿಯು ಚಿಕಿತ್ಸೆ ಪಡೆಯುವವರ ಮೇಲೆ ನಿಗಾ ವಹಿಸಿರುತ್ತಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆಯ ಅವಶ್ಯಕತೆಯಿರುವವರಿಗೆ ಹೆಚ್ಚು ಅನುಕೂಲಕರವಾಗಲಿದೆ' ಎಂದು ಗೌರವ್ ಗುಪ್ತ ಹೇಳಿದರು.

## ಆಮ್ಲಜನಕ ಪೂರೈಕೆ ಕೇಂದ್ರಗಳು

ರಾಜಾಜಿನಗರ, ಕಾವೇರಿಪುರ, ಗವಿಪುರ ಗುಟ್ಟಹಳ್ಳಿ, ಆಜಾದ್ ನಗರ, ಪೊಬ್ಬತ್ತಿ, ಮಾಗಡಿ ರಸ್ತೆ, ಆಡುಗೋಡಿ, ತಾವರೆಕೆರೆ, ಹೊಸಕೆರೆಹಳ್ಳಿ, ಶಾಂತಿನಗರ, ವಿಲ್ಸನ್ ಗಾರ್ಡನ್‌ನಲ್ಲಿರುವ ಬಿಬಿಎಂಪಿ ಹೆರಿಗೆ ಆಸ್ಪತ್ರೆಗಳಲ್ಲಿ ಆಮ್ಲಜನಕ ಪೂರೈಕೆ ಕೇಂದ್ರಗಳನ್ನು ತೆರೆಯಲಾಗಿದೆ.



ಕೊರಿಯನ್ ಬ್ಯಾಂಡ್ ಹೊಸ ಹಾಡನ್ನು ಘೋಷಿಸಿದೆ- ಸಿಂಗಲ್ 'ಬಟರ್'

## ಉಪಕರಣಗಳ ತೀವ್ರ ಕೊರತೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆ ಮತ್ತು ಆರೈಕೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಕೊರತೆ ತೀವ್ರವಾಗಿದೆ.

ಹೀಗಾಗಿ ಈ ಉಪಕರಣಗಳನ್ನು ಕೇಳಿಕೊಂಡು ಸರ್ಜಿಕಲ್ ಸ್ಟೋರ್‌ಗಳಿಗೆ ಎಡ ತಾಕುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗಿದೆ. 'ಕೋವಿಡ್ ಎರಡನೇ ಅಲೆ ಆರಂಭವಾದ ಎರಡೇ ದಿನಗಳಲ್ಲಿ ಇದ್ದ ದಾಸ್ತಾನು ಮಾರಾಟವಾಗಿ ಹೋದವು. ಈಗ ಇವುಗಳನ್ನು ಕೇಳಿಕೊಂಡು ಬರುವವರ ಸಂಖ್ಯೆಯೂ ಹೆಚ್ಚಾಗಿದೆ. ಅದರ ಲಭ್ಯತೆ ಇಲ್ಲ' ಎನ್ನುತ್ತಾರೆ ಸರ್ಜಿಕಲ್ ಉಪಕರಣಗಳ ಮಾರಾಟಗಾರರು.

'ಸಣ್ಣ ಸಣ್ಣ ಆಕ್ಸಿಜನ್ ಸಿಲಿಂಡರ್‌ಗಳು, ಆಕ್ಸಿಜನ್ ಕಾನ್ಸಂಟ್ರೇಟರ್, ಪಲ್ಸ್ ಮೀಟರ್, ಆಕ್ಸಿ ಮೀಟರ್, ಸಿಪ್ಯಾಪ್ ಮುಂತಾದವುಗಳು ಸಿಗುತ್ತಿಲ್ಲ. ಇದ್ದ ಸ್ಟಾಕ್ ಖಾಲಿ ಆಗಿದೆ. ಜನರಿಂದ ಬೇಡಿಕೆ ಹೆಚ್ಚಾಗಿದೆ' ಎನ್ನುತ್ತಾರೆ ಸರ್ಜಿಕಲ್ ಉಪಕರಣಗಳ ಡೀಲರ್ ಶುಭಕರನ್.

'ಇಡೀ ದೇಶದಲ್ಲೇ ಕೊರತೆ ಉಂಟಾಗಿದೆ. ಕನಿಷ್ಠ 8 ರಿಂದ 15 ದಿನಗಳಲ್ಲಿ ಉಪಕರಣಗಳು ಬರುವ ಸಾಧ್ಯತೆ ಇದೆ. ಅಲ್ಲಿಯವರೆಗೆ ಕಾಯಬೇಕಾಗಿದೆ. ಸ್ಯಾನಿಟೈಸರ್, ಗ್ಲವ್ಸ್ ಮತ್ತು ಮಾಸ್ಕ್‌ಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತಿವೆ' ಎಂದರು.

'ಪಿಪಿಇ ಕಿಟ್‌ಗಳು, ಶವ ಮುಚ್ಚುವ ಕವರ್‌ಗಳಿಗೆ ಬೇಡಿಕೆ ಇದೆ. ಪೂರೈಕೆ ಸಾಕಷ್ಟು ಇರುವುದರಿಂದ ಅವುಗಳ ಕೊರತೆ ಇಲ್ಲ' ಎಂದರು.

# ಕೋವಿಡ್ ನಡುವೆಯೂ ಕರ್ತವ್ಯ: ಪೌರ ಕಾರ್ಮಿಕರಿಗೆ ಇಲ್ಲ ಸುರಕ್ಷತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಸೋಂಕು ವ್ಯಾಪಕವಾಗಿ ಹರಡುತ್ತಿದೆ. ಸೋಂಕಿತರು ಇರುವ ಮನೆಯವರು ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿಲ್ಲ. ಸೋಂಕಿತರು ಇರುವ ಮನೆಯ ಕಸವನ್ನೂ ಇತರ ಕಸದ ರೀತಿಯಲ್ಲೇ ಮನೆ ಮನೆಯಿಂದ ಕಸ ಸಂಗ್ರಹಿಸುವವರಿಗೆ ನೀಡಲಾಗುತ್ತಿದೆ. ಇದರಿಂದ ಪೌರಕಾರ್ಮಿಕರು ಸೋಂಕಿಗೆ ಒಳಗಾಗುವ ಆತಂಕ ಸೃಷ್ಟಿಯಾಗಿದೆ.

ರೋಗದ ಲಕ್ಷಣ ಇಲ್ಲದ ಶೇ 90ರಷ್ಟು ಕೋವಿಡ್ ಸೋಂಕಿತರು ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಂತಹ ಮನೆಗಳ ಕಸ ವಿಲೇವಾರಿಗೆ ಬಿಬಿಎಂಪಿ ಯಾವುದೇ ನಿರ್ದಿಷ್ಟ ಕ್ರಮ ಕೈಗೊಂಡಿಲ್ಲ. ಹಾಗಾಗಿ ಪೌರಕಾರ್ಮಿಕರು ಕೋವಿಡ್ ಮೊದಲ ಅಲೆಯ ಸಂದರ್ಭಕ್ಕಿಂತ ಈ ಬಾರಿ ಹೆಚ್ಚಿನ ಅಪಾಯ ಎದುರಿಸುತ್ತಿದ್ದಾರೆ.

'ಕೆಲವರು ಬಳಸಿದ ಮಾಸ್ಕ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡುತ್ತಿದ್ದಾರೆ. ಸೋಂಕಿತರಿರುವ ಮನೆ ಕಸವನ್ನೂ ಹೊರಗಿಡುತ್ತಿದ್ದಾರೆ. ಈ ಬಾರಿ ಕಂಟೇನ್‌ಮೆಂಟ್ ಮಾಡುತ್ತಿಲ್ಲ. ಯಾವ ಮನೆಯಲ್ಲಿ ಸೋಂಕಿತರು ಇದ್ದಾರೆ ಎಂಬುದೂ ತಿಳಿಯುವುದಿಲ್ಲ. ನಮ್ಮ ಸುರಕ್ಷತೆಯ ಬಗ್ಗೆಯೂ ಜನರು ಕಾಳಜಿ ವಹಿಸಬೇಕು.ಕಸವಿಲೇವಾರಿಕುರಿತುಬಿಬಿಎಂಪಿಯವರೂ ಸ್ಪಷ್ಟ ಆದೇಶ ಮಾಡಬೇಕು' ಎಂದು ಪೌರಕಾರ್ಮಿಕೆ ಕಮಲಮ್ಮ ವಿನಂತಿಸಿದರು.

'ಕೋವಿಡ್ ಸೋಂಕಿತರು ಇರುವ ಮನೆಯ ಕಸ ವಿಲೇವಾರಿ ಬಗ್ಗೆ ಈ ಹಿಂದೆಯೇ ಬಿಬಿಎಂಪಿ ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಬಗ್ಗೆ ಇನ್ನೊಮ್ಮೆ ಆದೇಶ ಹೊರಡಿಸುತ್ತೇವೆ. ಪೌರ ಕಾರ್ಮಿಕರ ಆರೋಗ್ಯದ ಬಗ್ಗೆಯೂ ಎಲ್ಲರೂ ಕಾಳಜಿ ವಹಿಸಬೇಕು. ಅವರು ಕರ್ತವ್ಯ ನಿರ್ವಹಿಸದಿದ್ದರೆ ನಗರವನ್ನು ಸ್ವಚ್ಛವಾಗಿಡುವುದು ಕಷ್ಟ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಇನ್ನೊಂದೆಡೆ ಬಿಬಿಎಂಪಿಯು ಎಲ್ಲ ಪೌರಕಾರ್ಮಿಕರಿಗೆ ಕೈಗವಸು, ಮಾಸ್ಕ್, ಸ್ಯಾನಿಟೈಸರ್‌ನಂತಹ ಸುರಕ್ಷತಾ ಸಾಮಗ್ರಿಗಳನ್ನು ಒದಗಿಸಿಲ್ಲ ಎಂಬ ದೂರೂ ಕೇಳಿಬಂದಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ವಿಶೇಷ ಆಯುಕ್ತ (ಕಸ ನಿರ್ವಹಣೆ) ಡಿ.ರಂದೀಪ್, 'ಪೌರಕಾರ್ಮಿಕರಿಗೆ ಈಗಾಗಲೇ ಸುರಕ್ಷತಾ ಸಾಮಗ್ರಿ ವಿತರಿಸಲು ಕ್ರಮ ಕೈಗೊಂಡಿದ್ದೇವೆ. ಅವರಿಗೆ ಮಾಸ್ಕ್, ಸ್ಯಾನಿಟೈಸರ್, ಮುಖ ಕವಚ ವಿತರಿಸುವ ಕಾರ್ಯಕ್ರಮಗಳು ಜಾರಿಯಲ್ಲಿವೆ. ಪ್ರತಿ ವಲಯ ಮಟ್ಟದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

## 'ಲಾಕ್‌ಡೌನ್ ವೇಳೆ ಬಸ್ ಸೌಕರ್ಯವಿಲ್ಲ'

ಕೋವಿಡ್ ಮೊದಲ ಅಲೆಯ ನಿಯಂತ್ರಣಕ್ಕೆ ಲಾಕ್‌ಡೌನ್ ಜಾರಿ ಮಾಡಿದ್ದಾಗ ಪೌರಕಾರ್ಮಿಕರು ಕೆಲಸದ ಸ್ಥಳವನ್ನು ತಲುಪಲು ಬಿಬಿಎಂಪಿಯ ಅಧಿಕಾರಿಗಳು ಬಿಎಂಟಿಸಿ ಅಧಿಕಾರಿಗಳ ಜೊತೆ ಮಾತನಾಡಿ ಬಸ್ ಸೌಕರ್ಯ ಕಲ್ಪಿಸಿದ್ದರು. ಈ ಬಾರಿ ಬಸ್ ಸೌಕರ್ಯ ಇಲ್ಲದ ಕಾರಣ ಪೌರಕಾರ್ಮಿಕರರು ಕೆಲಸದ ಸ್ಥಳ ತಲುಪಲು ಸಮಸ್ಯೆ ಎದುರಿಸುತ್ತಿದ್ದಾರೆ.

'ಈ ಸಮಸ್ಯೆ ಗಮನಕ್ಕೆ ಬಂದಿದೆ. ಪೌರಕಾರ್ಮಿಕರನ್ನು ಕರೆ ತರುವುದಕ್ಕಾಗಿ ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ ವ್ಯವಸ್ಥೆ ಮಾಡಿದಂತೆ ಈ ಬಾರಿಗೂ ಸಾರಿಗೆ ಸೌಕರ್ಯ ಕಲ್ಪಿಸಲಿದ್ದೇವೆ. ಇದರ ವೆಚ್ಚವನ್ನು ಬಿಬಿಎಂಪಿ ಭರಿಸಲಿದೆ. ಈ ಬಗ್ಗೆ ಈಗಾಗಲೇ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದೇವೆ. ಶೀಘ್ರವೇ ಸಮಸ್ಯೆ ಬಗೆಹರಿಯಲಿದೆ' ಎಂದು ಡಿ.ರಂದೀಪ್ 'ಪ್ರಜಾವಾಣಿ'ಗೆ ತಿಳಿಸಿದರು.

# 26 ಶವಗಳ ಸಾಮೂಹಿಕ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತಾವರೆಕೆರೆ ಬಳಿ ಹೊಸದಾಗಿ ಸಿದ್ಧಪಡಿಸಿರುವ ಚಿತಾಗಾರದಲ್ಲಿ ಈಗ ದೆಹಲಿ ಮಾದರಿಯಲ್ಲಿ ಸಾಮೂಹಿಕ ಅಂತ್ಯಸಂಸ್ಕಾರ ಆರಂಭವಾಗಿದೆ. ಶುಕ್ರವಾರ ಏಕಕಾಲಕ್ಕೆ 26 ಶವಗಳನ್ನು ಸಂಸ್ಕಾರ ಮಾಡಲಾಯಿತು.

ನಗರದಲ್ಲಿ ಕೋವಿಡ್ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ನಡುವೆಯೇ ರಾಜ್ಯ ಸರ್ಕಾರ ತಾವರೆಕೆರೆ ಬಳಿ ಹೊಸದಾಗಿ ಚಿತಾಗಾರ ಆರಂಭಿಸಿದೆ. ಈ ಚಿತಾಗಾರಕ್ಕೆ ಒಂದೇ ದಿನ 47 ಶವಗಳನ್ನು ಸುಡಲಾಗಿದೆ.

ಶುಕ್ರವಾರ ಇಲ್ಲಿ ಸಾಮೂಹಿಕ ಅಂತ್ಯಸಂಸ್ಕಾರ ಮಾಡುವ ಮೂಲಕ ಹೊರ ರಾಜ್ಯಗಳಲ್ಲಿ ನಡೆಯುತ್ತಿದ್ದ ಈ ರೀತಿಯ ಅಂತ್ಯಕ್ರಿಯೆ ಬೆಂಗಳೂರಿನಲ್ಲೂ ಆರಂಭವಾದಂತೆ ಆಗಿದೆ.

4 ಗಂಟೆ ನಂತರ ಶವಗಳನ್ನು ಕಳುಹಿಸದಿರಲು ಬಿಬಿಎಂಪಿ ಅಧಿಕಾರಿಗಳು ನಿರ್ಧರಿಸಿದರು. 'ದಿನಕ್ಕೆ 70ರಿಂದ 80 ಶವಗಳು ಅಂತ್ಯಕ್ರಿಯೆ ಮಾಡಲು ಉದ್ದೇಶಿಸಲಾಗಿತ್ತು. ಆದರೆ, ನಗರದಲ್ಲಿ ಕಳೆದ ಎರಡು ದಿನಗಳಿಂದ ಸಂಜೆ ಮಳೆಯಾಗುತ್ತಿರುವ ಕಾರಣ ಸಂಜೆ 4 ಗಂಟೆ ನಂತರ ಶವಗಳನ್ನು ಕಳುಹಿಸದಿರಲು ನಿರ್ಧರಿಸಿದ್ದೇವೆ' ಎಂದು ಅಧಿಕಾರಿಗಳು ತಿಳಿಸಿದರು.

ತಾವರೆಕೆರೆ ಗಿಡ್ಡೇನಹಳ್ಳಿ ಬಳಿ ಇನ್ನೂ ಒಂದು ಚಿತಾಗಾರ ಶುಕ್ರವಾರದಿಂದ ಕಾರ್ಯಾಚರಣೆ ಆರಂಭಿಸಿದೆ. ಮೊದಲೇ ದಿನ 25 ಶವಗಳ ಅಂತ್ಯಕ್ರಿಯೆ ಇಲ್ಲಿ ನಡೆದಿದೆ.

ಚಾಮರಾಜಪೇಟೆಯಲ್ಲಿ ಸಾಮೂಹಿಕ ಶವಸಂಸ್ಕಾರಕ್ಕೆ ಸಿದ್ಧತೆ ನಡೆಸಿರುವುದು –ಪ್ರಜಾವಾಣಿ ಚಿತ್ರ

## ಕಣ್ಣೀರ ಕೋಡಿ

ಚಿತಾಗಾರದ ಬಳಿ ಮೃತರ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ.

ಕುರುಬರಹಳ್ಳಿಯ ವ್ಯಕ್ತಿಯೊಬ್ಬರು ಚಿಕಿತ್ಸೆ ಸಿಗದೆ ಮೃತಪಟ್ಟಿದ್ದರು. ತಂದೆಯನ್ನು ಉಳಿಸಿಕೊಳ್ಳಲು ಆಗಲಿಲ್ಲ ಎಂಬ ಕಾರಣಕ್ಕೆ ಮಗ ಬಿಕ್ಕಿಬಿಕ್ಕಿ ಅಳುತ್ತಿದ್ದ ದೃಶ್ಯ ಕಲ್ಲು ಹೃದಯದವರನ್ನೂ ಘಾಸಿ ಮಾಡುವಂತಿದ್ದವು.

'ಹಾಸಿಗೆ ಒದಗಿಸಿ ಎಂದು ವೈದ್ಯರ ಕಾಲು ಹಿಡಿದುಕೊಂಡರೂ ಕೊಡಲಿಲ್ಲ. ಚಿಕಿತ್ಸೆ ಸಿಗದೆ ತಂದೆ ಮೃತಪಟ್ಟ ಬಳಿಕ ಬಿಬಿಎಂಪಿ ಅಧಿಕಾರಿಗಳು ಹಾಸಿಗೆ ಲಭ್ಯವಿದೆ ಎಂದು ಕರೆ ಮಾಡಿದರು. ಈಗ ಹಾಸಿಗೆ ತಗೆದುಕೊಂಡು ಏನು ಮಾಡಲಿ' ಎಂದು ಅವರು ಕಣ್ಣೀರಿಟ್ಟರು.

## ಅಂತ್ಯಕ್ರಿಯೆಗೆ ಹಾಜರಾಗಲು ಹಿಂದೇಟು

ನಿಯಮಗಳನ್ನು ಅನುಸರಿಸಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಸೋಂಕಿತರ ಕುಟುಂಬ ಸದಸ್ಯರು ಹಾಜರಾಗಲು ಅವಕಾಶ ನೀಡಿದ್ದರೂ, ಹಾಜರಾಗಲು ಕೆಲವರು ಹಿಂದೇಟು ಹಾಕುತ್ತಿದ್ದಾರೆ.

'ಕೋವಿಡ್ ಸೋಂಕಿಗೆ ಹೆದರಿ ಕುಟುಂಬ ಸದಸ್ಯರು ಶವ ಸಂಸ್ಕಾರಕ್ಕೆ ಹಾಜರಾಗುತ್ತಿಲ್ಲ. ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಲೂ ಹೆದರುತ್ತಿದ್ದಾರೆ. ಆಂಬುಲೆನ್ಸ್ ಚಾಲಕರಿಗೇ ಪ್ಯಾಕೇಜ್ ನೀಡಿ ಮರುದಿನ ಚಿತಾಭಸ್ಮ ಪಡೆಯುತ್ತಿದ್ದಾರೆ' ಎಂದು ಚಾಲಕರೊಬ್ಬರು ವಿವರಿಸಿದರು.



ಕರ್ಫ್ಯೂ ಜಾರಿಯಲ್ಲಿದ್ದರೂ ಸಾರ್ವಜನಿಕರ ಸಂಚಾರ • ಮಾಸ್ಕ್ ಧರಿಸದವರಿಂದ ₹ 2.57 ಕೋಟಿ ದಂಡ ಸಂಗ್ರಹ

# ಅನಗತ್ಯ ಓಡಾಟ: ಬೀದಿಗೆ ಇಳಿದ ಕಮಿಷನರ್

ಪ್ರಜಾವಾಣಿ ವಾರ್ತೆ

ನಗರದ ನೃಪತುಂಗ ರಸ್ತೆಯಲ್ಲಿ ಶುಕ್ರವಾರ ಲಾಕ್‌ಡೌನ್ ಉಲ್ಲಂಘಿಸಿ ರಸ್ತೆಗಿಳಿದ ವಾಹನಗಳನ್ನು ಪೊಲೀಸರು ತಡೆದು ತಪಾಸಣೆ ನಡೆಸಿದ್ದರಿಂದ ವಾಹನದಟ್ಟಣೆ ಉಂಟಾಗಿತ್ತು ಪ್ರಜಾವಾಣಿ ಚಿತ್ರ/ ರಂಜು ಪಿ.

**ಬೆಂಗಳೂರು:** ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಕರ್ಫ್ಯೂ ಜಾರಿ ಮಾಡಲಾಗಿದ್ದು, ಇದರ ನಡುವೆಯೂ ನಗರದಲ್ಲಿ ವಾಹನಗಳ ಸಂಚಾರ ಹೆಚ್ಚಾಗಿದೆ. ಪೊಲೀಸ್ ಆಯುಕ್ತ ಕಮಲ್ ಪಂತ್ ಸ್ವತಃ ಬೀದಿಗೇ ಇಳಿದು ಪರಿಶೀಲನೆ ನಡೆಸಿದ್ದಾರೆ. ಜೊತೆಗೆ, ಮಾಸ್ಕ್ ಧರಿಸಿದ ಹಾಗೂ ಅಂತರ ಕಾಯ್ದುಕೊಳ್ಳದವರಿಂದ ಪೊಲೀಸರು ಇದುವರೆಗೂ ₹ 2.57 ಕೋಟಿ ದಂಡ ಸಂಗ್ರಹಿಸಿದ್ದಾರೆ.

ಅಗತ್ಯ ವಸ್ತುಗಳ ಖರೀದಿ, ಕಟ್ಟಡ ನಿರ್ಮಾಣ, ಕೇಬಲ್, ದೂರವಾಣಿ, ವೈದ್ಯಕೀಯ ತುರ್ತು ಸೇವೆಗಳಿಗೆ ಅನುಮತಿ ನೀಡಲಾಗಿದೆ. ಇದರ ನೆಪದಲ್ಲಿ ಕೆಲವರು ಅನಗತ್ಯವಾಗಿ ಓಡಾಡುತ್ತಿದ್ದು, ಅಂಥವರಿಂದ ನಗರದ ಹಲವು ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಉಂಟಾಗುತ್ತಿದೆ.

ಯಶವಂತಪುರ, ಹೆಬ್ಬಾಳ, ಮೆಜೆಸ್ಟಿಕ್, ಕಾರ್ಪೊರೇಷನ್ ವೃತ್ತ, ಸ್ಯಾಟಲೈಟ್ ಬಸ್ ನಿಲ್ದಾಣ ಹಾಗೂ ಹಲವೆಡೆ ಶುಕ್ರವಾರ ಬೆಳಿಗ್ಗೆ 6ರಿಂದ ವಾಹನಗಳ ಸಂಚಾರ ಹೆಚ್ಚಿತ್ತು. ಬೆಳಿಗ್ಗೆ 10ರ ನಂತರ ಅಗತ್ಯ ವಸ್ತುಗಳ ಮಾರಾಟ ಅಂಗಡಿಗಳನ್ನು ಪೊಲೀಸರು ಮುಚ್ಚಿಸಿದರು. ಅದಾದ ಬಳಿಕವೂ ನಗರದಲ್ಲಿ ವಾಹನಗಳು ಓಡಾಡಿದವು.

**5,085 ವಾಹನಗಳ ಜಪ್ತಿ:** ಏಪ್ರಿಲ್ 10ರಿಂದ 30ರವರೆಗೆ ನಗರದಲ್ಲಿ ಅನಗತ್ಯವಾಗಿ ಓಡಾಡಿದ್ದವರ 5,085 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'ರಸ್ತೆಯಲ್ಲಿ ಪ್ರತಿಯೊಂದು ವಾಹನಗಳನ್ನು ಸಿಬ್ಬಂದಿ ಪರಿಶೀಲನೆ ಮಾಡುತ್ತಿದ್ದಾರೆ. 4,632 ದ್ವಿಚಕ್ರ ವಾಹನಗಳು, 205 ಆಟೊ ಹಾಗೂ 248 ಕಾರುಗಳನ್ನು ಜಪ್ತಿ ಮಾಡಲಾಗಿದೆ. ನ್ಯಾಯಾಲಯದ ಮೂಲಕ ಮಾಲೀಕರು ವಾಹನಗಳನ್ನು ಬಿಡಿಸಿಕೊಳ್ಳಬೇಕು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ರೈಲು ನಿಲ್ದಾಣದಲ್ಲೂ ಜನ; ಮೆಜೆಸ್ಟಿಕ್ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲೂ ಪ್ರಯಾಣಿಕರ ಸಂಖ್ಯೆ ಹೆಚ್ಚಿತ್ತು. ಕರ್ಫ್ಯೂ ಆರಂಭವಾದಾಗಿನಿಂದಲೂ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಹೋಗಲು ಪ್ರಯಾಣಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ರಾತ್ರಿ ನಿಲ್ದಾಣದಿಂದ ಹೊರಡುವ ರೈಲುಗಳಲ್ಲಿ ಸೀಟು ಕಾಯ್ದಿರಿಸಿರುವ ಪ್ರಯಾಣಿಕರು, ಬೆಳಿಗ್ಗೆಯೇ ನಿಲ್ದಾಣಕ್ಕೆ ಬಂದು ಕಾಯುತ್ತಿದ್ದಾರೆ. ಇದರಿಂದಾಗಿಯೇ ನಿಲ್ದಾಣದಲ್ಲಿ ಜನರ ಸಂಖ್ಯೆ ಹೆಚ್ಚಿದ್ದು, ಅಂತರವೂ ಇಲ್ಲದಂತಾಗಿದೆ. ಮಾಸ್ಕ್ ಧರಿಸದ ಹಲವರು, ನಿಲ್ದಾಣದ ಎಲ್ಲೆಂದರಲ್ಲಿ ಮಲಗುತ್ತಿರುವ ದೃಶ್ಯಗಳು ಕಂಡುಬರುತ್ತವೆ.

**ನಗರ ಸುತ್ತಾಡಿದ ಕಮಿಷನರ್:** 'ಕರ್ಫ್ಯೂ ನಿಯಮಗಳನ್ನು ಜನ ಪಾಲಿಸುತ್ತಿಲ್ಲ ಹಾಗೂ ವಾಹನಗಳ ಓಡಾಟ ಹೆಚ್ಚಾಗಿದೆ' ಎಂಬ ದೂರುಗಳು ಬಂದಿದ್ದರಿಂದ ಪೊಲೀಸ್ ಕಮಿಷನರ್ ಕಮಲ್ ಪಂತ್ ನಗರದಲ್ಲಿ ಶುಕ್ರವಾರ ಸುತ್ತಾಡಿದರು. ಕಾರ್ಪೊರೇಷನ್ ವೃತ್ತದಲ್ಲಿ ನಿಂತಿದ್ದ ಕಮಲ್ ಪಂತ್, ವಾಹನಗಳ ಪರಿಶೀಲನೆ ನಡೆಸಿದರು.

17,362 ಪ್ರಕರಣದಲ್ಲಿ ದಂಡ ಸಂಗ್ರಹ; 'ಮಾಸ್ಕ್ ಧರಿಸದ, ಅಂತರ ಕಾಯ್ದುಕೊಳ್ಳದವರ ವಿರುದ್ಧ ಏ. 1ರಿಂದ 29ರವರೆಗೆ 17,362 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಂದ ₹ 2.57 ಕೋಟಿ ದಂಡ ಸಂಗ್ರಹಿಸಲಾಗಿದೆ' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

'ಮಳಿಗೆ, ಹೋಟೆಲ್, ಶಾಪಿಂಗ್ ಮಾಲ್.. ಹೀಗೆ ಹಲವರ ವಿರುದ್ಧವೂ ಪ್ರಕರಣ ದಾಖಲಾಗಿದೆ' ಎಂದೂ ತಿಳಿಸಿದರು.

## '3 ಸಾವಿರ ಸೋಂಕಿತರು ನಾಪತ್ತೆ; ಮುಂದುವರೆದ ಹುಡುಕಾಟ'

'ಕೊರೊನಾ ಸೋಂಕು ತಗುಲಿದ್ದ 3 ಸಾವಿರಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿರುವ ಬಗ್ಗೆ ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಮಾಹಿತಿ ನೀಡಿದ್ದು, ಅಂಥವರಿಗಾಗಿ ಹುಡುಕಾಟ ನಡೆದಿದೆ' ಎಂದು ಪೊಲೀಸರು ಹೇಳಿದರು.

'ಸೋಂಕಿನ ಪರೀಕ್ಷೆ ಮಾಡಿಸಿಕೊಂಡಿದ್ದವರು, ವರದಿ ಬಂದ ನಂತರ ನಾಪತ್ತೆಯಾಗಿದ್ದಾರೆ. ಅವರು ನಗರದಲ್ಲಿ ಇದ್ದಾರೆಯೇ ಅಥವಾ ಬೇರೆ ಊರಿಗೆ ಹೋಗಿದ್ದಾರೆಯೇ? ಎಂಬುದನ್ನು ಪತ್ತೆ ಮಾಡುತ್ತಿದ್ದೇವೆ' ಎಂದೂ ತಿಳಿಸಿದರು.

### 735 ಪೊಲೀಸರಿಗೆ ಕೊರೊನಾ; 8 ಸಾವು

'ಎರಡನೇ ಅಲೆಯಲ್ಲಿ ನಗರದ 602 ಪೊಲೀಸರಿಗೆ ಕೊರೊನಾ ಸೋಂಕು ತಗುಲಿದ್ದು, ಆ ಪೈಕಿ 8 ಮಂದಿ ಸಾವನ್ನಪ್ಪಿದ್ದಾರೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಚಿಕಿತ್ಸೆಯಿಂದ 125 ಪೊಲೀಸರು ಗುಣಮುಖರಾಗಿದ್ದಾರೆ. 578 ಮಂದಿ ಹೋಮ್ ಐಸೋಲೇಷನ್‌ನಲ್ಲಿದ್ದಾರೆ. 24 ಮಂದಿ ಆಸ್ಪತ್ರೆ ಸಾಮಾನ್ಯ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪೊಲೀಸರ ಕುಟುಂಬದ 25 ಮಂದಿಯಲ್ಲೂ ಸೋಂಕು ಕಾಣಿಸಿಕೊಂಡಿದ್ದು, ಅವರಿಗೂ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದೂ ಹೇಳಿದರು.

## ಸುದ್ದಿ 2 ನಿಮಿಷ

### ಅಜಯ್ ಹಿಲೋರಿ ವಿರುದ್ಧ ತನಿಖೆ: ಸಿಬಿಐ, ಸರ್ಕಾರಕ್ಕೆ ನೋಟಿಸ್

**ಬೆಂಗಳೂರು:** : ಐ ಮಾನಿಟರಿ ಅಡ್ವೈಸರಿ (ಐಎಂಎ) ಹಗರಣದಲ್ಲಿ ತಮ್ಮ ವಿರುದ್ಧ ತನಿಖೆಗೆ ನೀಡಿರುವ ಅನುಮತಿ ಪ್ರಶ್ನಿಸಿ ಐಪಿಎಸ್ ಅಧಿಕಾರಿ ಅಜಯ್ ಹಿಲೋರಿ ಸಲ್ಲಿಸಿರುವ ರಿಟ್ ಅರ್ಜಿ ಆಧರಿಸಿ ರಾಜ್ಯ ಸರ್ಕಾರ ಮತ್ತು ಸಿಬಿಐಗೆ ಹೈಕೋರ್ಟ್ ನೋಟಿಸ್ ನೀಡಲು ಆದೇಶಿಸಿದೆ.

'ಈ ವಿಷಯದಲ್ಲಿ ಹೆಚ್ಚಿನ ವಿಚಾರಣೆ ಅಗತ್ಯವಿದೆ. ಅವರ ವಿರುದ್ಧದ ಎಲ್ಲ ಕ್ರಮಗಳು ರಿಟ್ ಅರ್ಜಿಯ ಫಲಿತಾಂಶಕ್ಕೆ ಒಳಪಟ್ಟಿರುತ್ತವೆ' ಎಂದು ತಿಳಿಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಪೀಠ, ಜೂ.4ಕ್ಕೆ ವಿಚಾರಣೆ ಮುಂದೂಡಿತು.

ಸಿಆರ್‌ಪಿಸಿ ಸೆಕ್ಷನ್ 197, ಕರ್ನಾಟಕ ಪೊಲೀಸ್ ಕಾಯ್ದೆ, ಭ್ರಷ್ಟಾಚಾರ ತಡೆ(ಪಿ.ಸಿ) ಕಾಯ್ದೆ, ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಕಾಯ್ದೆಯಡಿ ಕ್ರಮಕ್ಕೆ ಮುಂದಾಗಿರುವುದನ್ನು ಅಜಯ್ ಹಿಲೋರಿ ಪ್ರಶ್ನಿಸಿದ್ದಾರೆ. ಅಲ್ಲದೇ ಅವರ ವಿರುದ್ಧದ ಎಫ್‌ಐಆರ್ ಮತ್ತು ಸಿಬಿಐ ಸಲ್ಲಿಸಿರುವ ದೋಷಾರೋಪಣೆ ವಜಾಗೊಳಿಸಲು ಕೋರಿದ್ದಾರೆ.

'ನನ್ನ ವಿರುದ್ಧ ಕ್ರಮಕ್ಕೆ ಅನುಮತಿ ನೀಡುವಾಗ ಪಿ.ಸಿ ಕಾಯ್ದೆಯ ನಿಬಂಧನೆಯ ಉಲ್ಲಂಘನೆಯಾಗಿದೆ. ನಮ್ಮ ಮನೆ ಮತ್ತು ಕಚೇರಿಗಳಲ್ಲಿ ಶೋಧ ನಡೆಸಿದಾಗ ಆರೋಪಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಆದರೂ, ಪಿ.ಸಿ ಕಾಯ್ದೆಯಡಿ ತನಿಖೆ ನಡೆಸಲು 2020ರ ಜ.7ರಂದು ಅನುಮತಿ ನೀಡಲಾಗಿದೆ' ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

'ಎಫ್‌ಐಆರ್ ಮತ್ತು ದೋಷಾರೋಪ ಪಟ್ಟಿಯಲ್ಲಿ ಕ್ರಿಮಿನಲ್ ಕಾನೂನನ್ನು ಜಾರಿಗೊಳಿಸುವ ಉದ್ದೇಶ ಇಲ್ಲ. ರಾಜಕೀಯ ಇದರಲ್ಲಿ ತೂರಿದೆ' ಎಂದು ಅವರು ದೂರಿದ್ದಾರೆ.

ಐಎಂಎ ನಡೆಸುತ್ತಿದ್ದ ವ್ಯವಹಾರದ ಬಗ್ಗೆ ಅನುಮಾನಿಸಿ ರಿಸರ್ವ್ ಬ್ಯಾಂಕ್ ಬರೆದ ಪತ್ರ ಆಧರಿಸಿ ಐಎಂಎ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂಬುದು ಹಿಲೋರಿ ಮೇಲಿರುವ ಆರೋಪ.

### ಸಿಗದ ವಿದ್ಯಾರ್ಥಿ ವೇತನ: ಆತ್ಮಹತ್ಯೆ

**ಬೆಂಗಳೂರು:** ವಿದೇಶದಲ್ಲಿ ಅಧ್ಯಯನ ನಡೆಸಲು ವಿದ್ಯಾರ್ಥಿ ವೇತನ ಸಿಗಲಿಲ್ಲವೆಂದು ನೊಂದಿದ್ದರು ಎನ್ನಲಾದ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ವಿದ್ಯಾರ್ಥಿ ರೋಹನ್ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ನಗರದ ವಸಂತಪುರದ ರೋಹನ್, ಐಐಎಸ್ಸಿಯ ಬಿ.ಎಸ್ಸಿ ಮೂರನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಸಂಸ್ಥೆಯ ವಸತಿ ನಿಲಯದ ಕೊಠಡಿಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಸದಾಶಿವನಗರ ಪೊಲೀಸರು ಹೇಳಿದರು.

'ಬಿ.ಎಸ್ಸಿ ಪದವಿ ಮುಗಿಯುತ್ತಿದ್ದಂತೆ ವಿದೇಶಕ್ಕೆ ಹೋಗಿ ಸ್ನಾತಕೋತ್ತರ ಅಧ್ಯಯನ ನಡೆಸಲು ರೋಹನ್ ಯೋಚಿಸಿದ್ದರು. ಅದಕ್ಕಾಗಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ, ವೇತನ ಸಿಕ್ಕಿರಲಿಲ್ಲ. ಇದರಿಂದಾಗಿ ಅವರು ಮಾನಸಿಕವಾಗಿ ನೊಂದಿದ್ದರು ಎಂಬುದು ಗೊತ್ತಾಗಿದೆ' ಎಂದೂ ತಿಳಿಸಿದರು.

'ವಿದ್ಯಾರ್ಥಿ ತಂದೆ ಉದ್ಯಮಿಯಾಗಿದ್ದು, ಅವರಿಂದಲೇ ಹೇಳಿಕೆ ಪಡೆಯಲಾಗಿದೆ. ಕೊಠಡಿಯಲ್ಲಿದ್ದ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ಪೊಲೀಸರು ಹೇಳಿದರು.

## 'ಶೇ 30ರಷ್ಟು ಮಹಿಳೆಯರಿಗೆ ಮಾನಸಿಕ ಒತ್ತಡ'

**ಬೆಂಗಳೂರು:**'ಮಹಿಳೆಯರಲ್ಲಿ ಮಾನಸಿಕ ಒತ್ತಡ ಸಮಸ್ಯೆ ಹೆಚ್ಚಾಗುತ್ತಿದೆ. ಶೇ 30ರಷ್ಟು ಮಹಿಳೆಯರು ಶಾರೀರಿಕ ನೋವು ಇಲ್ಲದಿದ್ದರೂ ಆಸ್ಪತ್ರೆಗೆ ಭೇಟಿ ನೀಡುತ್ತಾರೆ. ಇದಕ್ಕೆಲ್ಲ ಮಾನಸಿಕ ಒತ್ತಡವೇ ಕಾರಣ' ಎಂದು ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘವು ಆನ್‌ಲೈನ್ ಮೂಲಕ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಮಹಿಳೆಯರಲ್ಲಿ ಮಾನಸಿಕ ಒತ್ತಡ ನಿರ್ವಹಣೆ' ಕುರಿತು ಉಪನ್ಯಾಸ ನೀಡಿದರು.

'ಪುರುಷನಿಗಿಂತ ಮಹಿಳೆಯರು ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಮನೆಯ ಒಳಗೆ ಹಾಗೂ ಹೊರಗಿನ ಜೀವನಶೈಲಿಗಳಿಂದ ಒತ್ತಡ ಅನುಭವಿಸುತ್ತಾರೆ. ಮನೆಯ ಒಳಗೆ ಅತ್ತೆ-ಸೊಸೆಯರ ನಡುವಿನ ಮನಸ್ತಾಪಗಳು, ಕೌಟುಂಬಿಕ ನೆಲೆಗಟ್ಟಿನಲ್ಲಿ ನಿರ್ವಹಿಸಬೇಕಾದ ಒತ್ತಡಗಳಿಂದ ಮಾನಸಿಕ ಹಾಗೂ ಶಾರೀರಿಕ ನೋವುಗಳಿಂದ ಬಳಲುತ್ತಾರೆ' ಎಂದು ವಿವರಿಸಿದರು.

'ಆಸ್ಪತ್ರೆಗಳಿಗೆ ಬರುವ ಮಹಿಳೆಯರ ನೋವಿಗೆ ಆರೋಗ್ಯ ಸಮಸ್ಯೆಗಳು ಕಾರಣವಾಗಿರುವುದಿಲ್ಲ. ಎಲ್ಲವೂ ಸರಿಯಾಗಿ ಇರುತ್ತವೆ. ಇಂತಹ ನೋವುಗಳಿಗೆ ಒತ್ತಡವೇ ಕಾರಣ. ಕುಟುಂಬದವರ ಜೊತೆ ತನ್ನ ಕೆಲಸಗಳನ್ನು ಹಂಚಿಕೊಳ್ಳುವ ಮೂಲಕ ಒತ್ತಡ ಕಡಿಮೆ ಮಾಡಿಕೊಳ್ಳಬಹುದು. ಒಂಟಿತನ, ಆರ್ಥಿಕ ಸಮಸ್ಯೆ, ಆತಂಕಗಳಿಂದ ಸಾಧ್ಯವಾದಷ್ಟು ದೂರವಿರಿ. ವಿವೇಚನೆಯಿಂದ ಹಣವನ್ನು ಮಿತವಾಗಿ ಬಳಸುವುದನ್ನು ರೂಢಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಕಾವೇರಿ 5ನೇ ಹಂತದ ಯೋಜನೆ • ಶೇ 10 ಹೆಚ್ಚು ಪ್ರಗತಿ

## ₹530 ಕೋಟಿವರೆಗಿನ ಕಾಮಗಾರಿ ಪೂರ್ಣ

ಪ್ರಜಾವಾಣಿ ವಾರ್ತೆ

ಕಾವೇರಿ ಐದನೇ ಹಂತದ ಕಾಮಗಾರಿಯ ನೋಟ

**ಬೆಂಗಳೂರು:** ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಕಾವೇರಿ ಐದನೇ ಹಂತದ ಯೋಜನೆಯಡಿ ₹530 ಕೋಟಿಯವರೆಗಿನ ಕಾಮಗಾರಿ ಪೂರ್ಣಗೊಂಡಿದೆ ಎಂದು ಜಲಮಂಡಳಿ ಹೇಳಿದೆ.

ಕಾಮಗಾರಿ ಅನುಷ್ಠಾನ ವಿಳಂಬವಾಗುತ್ತಿದೆ, ಎಲ್ಲೆಂದರಲ್ಲಿ ರಸ್ತೆಯನ್ನು ಅಗೆಯಲಾಗಿದ್ದು, ಸಂಚಾರಕ್ಕೂ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದರು.

'ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ (ಜೈಕಾ) ಸಹಯೋಗದೊಂದಿಗೆ ₹5,550 ಕೋಟಿ ಮೊತ್ತದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಾರ್ಚ್ ವೇಳೆಗೆ ₹450 ಕೋಟಿ ಮೊತ್ತದವರೆಗಿನ ಕಾಮಗಾರಿ ಪೂರ್ಣಗೊಂಡಿರಬೇಕು ಎಂದು ಜೈಕಾ ಗಡುವು ನೀಡಿತ್ತು. ಆದರೆ, ಕಾಮಗಾರಿಯಲ್ಲಿ ಅವರು ಹೇಳಿದ್ದಕ್ಕಿಂತ ಶೇ 10ರಷ್ಟು ಹೆಚ್ಚು ಪ್ರಮಾಣದಲ್ಲಿ ಕಾಮಗಾರಿ ಪೂರ್ಣಗೊಂಡಿದೆ. ₹530 ಕೋಟಿಯವರೆಗಿನ ಕಾಮಗಾರಿ ನಡೆದಿದೆ' ಎಂದು ಮಂಡಳಿಯ ಅಧ್ಯಕ್ಷ ಎನ್. ಜಯರಾಂ 'ಪ್ರಜಾವಾಣಿ'ಗೆ ತಿಳಿಸಿದರು.

'ಸುಮಾರು 50 ಲಕ್ಷ ನಿವಾಸಿಗಳಿಗೆ ದಿನಕ್ಕೆ 7.55 ಕೋಟಿ ಲೀಟರ್ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಈ ಯೋಜನೆ ಜಾರಿಗೊಳಿಸಲಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿಯೂ ಕಾಮಗಾರಿಯಲ್ಲಿ ನಿಗದಿಗಿಂತ ಹೆಚ್ಚು ಪ್ರಗತಿ ಸಾಧಿಸಲಾಗಿದೆ' ಎಂದರು.

'2020ರ ಜನವರಿಯಿಂದ ನವೆಂಬರ್ ನಡುವೆ ಎಲ್ಲ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ. 2023ರ ಆಗಸ್ಟ್ ವೇಳೆಗೆ ಯೋಜನೆ ಪೂರ್ಣಗೊಳಿಸುವಂತೆ ಜೈಕಾ ಗಡುವು ನೀಡಿದೆ. ಆ ಅವಧಿಯೊಳಗೇ ಯೋಜನೆ ಅನುಷ್ಠಾನಗೊಳಿಸಲಾಗುವುದು' ಎಂದು ಕಾವೇರಿ 5ನೇ ಹಂತದ ಯೋಜನೆಯ ಮುಖ್ಯ ಎಂಜಿನಿಯರ್ ಎಸ್.ವಿ. ರಮೇಶ್ ತಿಳಿಸಿದರು.

'ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಂಬಂಧಿಸಿದ ಎಲ್ಲ ಇಲಾಖೆಗಳ ಮುಖ್ಯಸ್ಥರನ್ನು ಒಳಗೊಂಡ ಸಮನ್ವಯ ಸಮಿತಿಯನ್ನು ರಚಿಸಲಾಗಿದೆ. ಯೋಜನೆಯನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಎಲ್ಲ ಇಲಾಖೆಗಳ ಅನುಮೋದನೆ ಮತ್ತು ಅನುಮತಿ ಪಡೆಯಲಾಗಿದೆ' ಎಂದೂ ಹೇಳಿದರು.

## ಬಿಡಿಎ ಆಯುಕ್ತರಾಗಿ ಎಂ.ಬಿ.ರಾಜೇಗೌಡ ನೇಮಕ

**ಬೆಂಗಳೂರು:** ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎಂ.ಬಿ. ರಾಜೇಗೌಡ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತರನ್ನಾಗಿ ನೇಮಿಸಲಾಗಿದೆ.

ಈವರೆಗೆ ಆಯುಕ್ತರಾಗಿದ್ದ ಎಚ್. ಆರ್.ಮಹದೇವ್ ಅವರು ಶುಕ್ರವಾರ ಸೇವೆಯಿಂದ ನಿವೃತ್ತಿ ಹೊಂದಿದರು. ಅದರಿಂದ ತೆರವಾದ ಸ್ಥಾನಕ್ಕೆ ರಾಜೇಗೌಡ ನೇಮಕಗೊಂಡಿದ್ದು, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾಗಿಯೂ ಮುಂದುವರಿಯಲಿದ್ದಾರೆ.

ಮಹದೇವ್ ಅವರು ಈ ಹುದ್ದೆಯಲ್ಲಿ ಇನ್ನೂ ಒಂದು ವರ್ಷ ಮುಂದುವರಿಯಲು ಪ್ರಯತ್ನ ನಡೆಸಿದ್ದರು. ತಮ್ಮ ಜನ್ಮ ದಿನಾಂಕ ದಾಖಲೆಗಳಲ್ಲಿ ತಪ್ಪಾಗಿದೆ. ಅದನ್ನು ವಂಶವೃಕ್ಷದ ಪ್ರಕಾರ ಸರಿಪಡಿಸಿ ಸೇವಾವಧಿಯನ್ನು ವಿಸ್ತರಣೆ ಮಾಡುವಂತೆ ಮಹದೇವ್ ಅವರು ಕೇಂದ್ರ ಆಡಳಿತ ನ್ಯಾಯ ಮಂಡಳಿಗೆ (ಸಿಎಟಿ) ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ನ್ಯಾಯಮಂಡಳಿ, ಅರ್ಜಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿತ್ತು.

ಇದನ್ನು ಮುಂದಿಟ್ಟುಕೊಂಡು ಮಹದೇವ್ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದ್ದರು. ಜನ್ಮ ದಿನಾಂಕದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅವರು ಮುಖ್ಯಕಾರ್ಯದರ್ಶಿಗೆ ಸೂಚನೆ ನೀಡಿ ಸಹಿಯನ್ನೂ ಹಾಕಿದ್ದರು. ಆದರೆ, ಆಡಳಿತ ಮತ್ತು ಸಿಬ್ಬಂದಿ ಇಲಾಖೆ ಈ ಪ್ರಸ್ತಾವನೆಯನ್ನು ತಳ್ಳಿ ಹಾಕಿತು.

ರಾಜ್ಯ ಸರ್ಕಾರ ತಮ್ಮ ಮನವಿ ಪರಿಗಣಿಸದಿರುವ ಕಾರಣ ಮಹದೇವ್ ಅವರು ನೇರವಾಗಿ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದು ಸೇವಾವಧಿ ವಿಸ್ತರಣೆ ಮಾಡುವಂತೆ ಮನವಿ ಮಾಡಿದ್ದರು. ಕಾರ್ಯದರ್ಶಿ ಅವರೂ ಮನವಿಯನ್ನು ತಳ್ಳಿಹಾಕಿದರು.

## ಪೊಲೀಸರಿಗಾಗಿ 50 ಹಾಸಿಗೆಯ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಕೋವಿಡ್ ಆರೈಕೆ ಕೇಂದ್ರದಲ್ಲಿರುವ ವ್ಯವಸ್ಥೆಯನ್ನು ಕಮಿಷನರ್ ಕಮಲ್ ಪಂತ್ ವೀಕ್ಷಿಸಿದರು

**ಕೆ.ಆರ್.ಪುರ:** ಕೊರೊನಾ ಸೋಂಕಿತರಾಗುವ ಪೊಲೀಸರು ಹಾಗೂ ಅವರ ಕುಟುಂಬದವರಿಗೆ ಚಿಕಿತ್ಸೆ ಒದಗಿಸಲು ವೈಟ್‌ಫೀಲ್ಡ್‌ನಲ್ಲಿ ಪ್ರತ್ಯೇಕ 'ಕೋವಿಡ್ ಆರೈಕೆ ಕೇಂದ್ರ' ತೆರೆಯಲಾಗಿದೆ.

ಆಧುನಿಕ ವೈದ್ಯಕೀಯ ಸೌಲಭ್ಯವುಳ್ಳ 50 ಹಾಸಿಗೆಯ ಕೇಂದ್ರವನ್ನು ಪೊಲೀಸ್ ಕಮಿಷನರ್ ಕಮಲ್ ಪಂತ್ ಶುಕ್ರವಾರ ಉದ್ಘಾಟಿಸಿದರು. ಡಿಸಿಪಿ ದೇವರಾಜ್ ನೇತೃತ್ವದಲ್ಲಿ ಕೇಂದ್ರವನ್ನು ನಿರ್ಮಿಸಲಾಗಿದ್ದು, ಇದಕ್ಕೆ ಕಮಲ್ ಪಂತ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪೂರ್ವ ವಿಭಾಗದ ಹೆಚ್ಚುವರಿ ಕಮಿಷನರ್ ಎಸ್.ಮುರುಗನ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹಾಜರಿದ್ದರು.

ಕೇಂದ್ರದ ಬಗ್ಗೆ ಮಾಹಿತಿ ನೀಡಿದ ದೇವರಾಜ್, 'ವೈದೇಹಿ ಹಾಗೂ ಮಣಿಪಾಲ್ ಆಸ್ಪತ್ರೆ ಜೊತೆಯಾಗಿ ಕೇಂದ್ರ ತೆರೆಯಲಾಗಿದೆ. ಐಸಿಎಂಆರ್ ಮಾರ್ಗಸೂಚಿ ಅನ್ವಯ ವೈದ್ಯಕೀಯ ಸೌಲಭ್ಯಗಳು ಕೇಂದ್ರದಲ್ಲಿವೆ. ದಿನದ 24 ಗಂಟೆಯೂ ವೈದ್ಯರು ಇರಲಿದ್ದಾರೆ. ಆಹಾರ, ಸ್ವಚ್ಛತೆ ಹಾಗೂ ಚಿಕಿತ್ಸೆಗೆ ಒತ್ತು ನೀಡಲಾಗಿದೆ' ಎಂದರು.

'ಒಬ್ಬ ಪೊಲೀಸ್‌ಗೆ ಸೋಂಕು ತಗುಲಿದರೆ ಇಡೀ ಇಲಾಖೆಯ ಆತ್ಮಸ್ಥೈರ್ಯ ಕುಗ್ಗುತ್ತದೆ. ಹೀಗಾಗಿ, ಸಿಬ್ಬಂದಿ ಸುರಕ್ಷತೆಗೆ ಗಮನ ಹರಿಸಲಾಗಿದೆ. ನಮ್ಮ ವಿಭಾಗದ ಪೊಲೀಸರು ಮತ್ತು ಅವರ ಕುಟುಂಬದ ರಕ್ಷಣೆ ಕೇಂದ್ರದ ಮೂಲಕ ಆಗಲಿದೆ' ಎಂದೂ ಹೇಳಿದರು.

'ಉದ್ಯಮಿ ಕಿರಣ್ ಮಜುಂದಾರ್ ಶಾ ಅವರು ₹ 1 ಕೋಟಿ ನೀಡಿ ಕೇಂದ್ರ ತೆರೆಯಲು ಸಹಕರಿಸಿದ್ದಾರೆ. ಸದ್ಯ ಪೊಲೀಸರಿಗೆ ಮಾತ್ರ ಕೇಂದ್ರದಲ್ಲಿ ಚಿಕಿತ್ಸೆ ದೊರೆಯಲಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೂ ಸೇವೆ ಒದಗಿಸಲಾಗುತ್ತದೆ' ಎಂದೂ ದೇವರಾಜ್ ತಿಳಿಸಿದರು.

## ಮಾಹಿತಿ ನೀಡದ ತಹಶೀಲ್ದಾರ್‌ಗೆ ದಂಡ

**ಬೆಂಗಳೂರು:** ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ಮಾಹಿತಿ ನೀಡಲು ವಿಫಲವಾದ ಉತ್ತರ ತಾಲ್ಲೂಕಿನ ತಹಶೀಲ್ದಾರ್ ಅವರಿಗೆ ವಿಧಿಸಲಾಗಿದ್ದ ₹5 ಸಾವಿರ ದಂಡವನ್ನು ಹೈಕೋರ್ಟ್ ₹25 ಸಾವಿರಕ್ಕೆ ಹೆಚ್ಚಿಸಿದೆ.

ಮಾಹಿತಿ ಒದಗಿಸುವುದಷ್ಟೇ ಈ ಕಾಯ್ದೆಯ ಉದ್ದೇಶ ಅಲ್ಲ. ಸಮಯಕ್ಕೆ ತಕ್ಕಂತೆ ಒದಗಿಸಬೇಕು ಎಂದು ನ್ಯಾಯಾಲಯ ಹೇಳಿದೆ. ಬೆಂಗಳೂರಿನ ನಿವಾಸಿ ಎಂ. ಕಿಶೋರ್ ರಾವ್ ಅವರು 2016ರ ಡಿಸೆಂಬರ್‌ನಲ್ಲಿ ಜಮೀನಿಗೆ ಸಂಬಂಧಿಸಿದ ಮಾಹಿತಿ ಕೋರಿದ್ದರು. ಮಾಹಿತಿ ನೀಡದ ಕಾರಣಕ್ಕೆ ಮೊದಲ ಮತ್ತು ಎರಡನೇ ಮೇಲ್ಮನವಿಯನ್ನು ಅವರು ಸಲ್ಲಿಸಿದ್ದರು.

2018ರ ಮೇ 8ರಂದು ಮಾಹಿತಿ ನೀಡುವಂತೆ ತಿಳಿಸಿ ಅರ್ಜಿಯನ್ನು ಆಯೋಗ ವಿಲೇವಾರಿ ಮಾಡಿತ್ತು. ಆದರೂ, ಮಾಹಿತಿ ಒದಗಿಸದಿದ್ದಾಗ ₹5 ಸಾವಿರ ದಂಡವನ್ನು ಆಯೋಗ ವಿಧಿಸಿತ್ತು. ಮಾಹಿತಿ ನೀಡದ ತಹಶೀಲ್ದಾರ್, ದಂಡ ಪಾವತಿಸಿದ್ದರು. ದಂಡದ ಮೊತ್ತ ಕಡಿಮೆ ನಿಗದಿ ಮಾಡಿರುವುದನ್ನು ಪ್ರಶ್ನಿಸಿ ಕಿಶೋರ್ ರಾವ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ದಿನಕ್ಕೆ ₹250 ಅಥವಾ ಗರಿಷ್ಠ ₹25 ಸಾವಿರ ವಿಧಿಸಬೇಕು ಎಂದು ಕೋರಿದ್ದರು.

'ಐದು ದಿನಗಳ ಅವಧಿಯಲ್ಲಿ ವಿಲೇವಾರಿ ಆಗಬೇಕಿದ್ದ ಅರ್ಜಿಯನ್ನು 17 ತಿಂಗಳ ನಂತರ ವರ್ಗಾಯಿಸಿ ವಿಳಂಬ ಮಾಡಿದ್ದಾರೆ. ಅನಗತ್ಯ ವಿಳಂಬವನ್ನು ಕ್ಷಮಿಸಲಾಗದು' ಎಂದು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠ ಹೇಳಿತು.

ಮಾಹಿತಿ ಆಯೋಗದ ಆದೇಶವನ್ನು ಮಾರ್ಪಡಿಸಿದ ಪೀಠ, ₹25 ಸಾವಿರಕ್ಕೆ ದಂಡದ ಮೊತ್ತ ಹೆಚ್ಚಿಸಿತು. ತಹಶೀಲ್ದಾರ್ ತನ್ನ ಸ್ವಂತ ಗಳಿಕೆಯ ಹಣದಿಂದ ಈ ದಂಡ ಪಾವತಿಸಬೇಕು ಎಂದು ಆದೇಶಿಸಿತು.

## 'ಮೆಡ್‌ಸೋಲ್ ಆಸ್ಪತ್ರೆ ಆರಂಭಕ್ಕೆ ಚಿಂತನೆ'

ಪ್ರಜಾವಾಣಿ ವಾರ್ತೆ

ಆಸ್ಪತ್ರೆಗೆ ಸಚಿವ ಸೋಮಶೇಖರ್ ಭೇಟಿ ನೀಡಿ ಪರಿಶೀಲಿಸಿದರು.

**ಬೆಂಗಳೂರು:** 'ಉಲ್ಲಾಳ ವಾರ್ಡ್‌ನಲ್ಲಿರುವ ಮೆಡ್‌ಸೋಲ್ ಆಸ್ಪತ್ರೆ ಪುನರಾರಂಭಿಸುವ ಬಗ್ಗೆ ಚಿಂತಿಸುತ್ತಿದ್ದೇವೆ. ಆಮ್ಲಜನಕ ಹಾಗೂ ಐಸಿಯು ವ್ಯವಸ್ಥೆಯನ್ನೊಳಗೊಂಡ ತಲಾ 50 ಹಾಸಿಗೆಗಳು ಸೇರಿದಂತೆ ಒಟ್ಟು 200 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ ಇದನ್ನು ಉನ್ನತೀಕರಿಸಲು ನಿರ್ಧರಿಸಿದ್ದೇವೆ. ಈ ಸಂಬಂಧ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಶುಕ್ರವಾರ ಆಸ್ಪತ್ರೆಗೆ ಭೇಟಿ ನೀಡಿದ್ದ ಅವರು ವೈದ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದರು.

'ಹನಿವೆಲ್ ಸಂಸ್ಥೆಯ ಸಿಎಸ್‌ಆರ್ ನಿಧಿ ಹಾಗೂ ಸರ್ಕಾರದ ಅನುದಾನದಲ್ಲಿ ಈ ಆಸ್ಪತ್ರೆಗೆ ಅಗತ್ಯ ಸಲಕರಣೆಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಕೋವಿಡ್‌ನಿಂದಾಗಿ ಆಸ್ಪತ್ರೆಗೆ ದಾಖಲಾಗಿರುವವರು ಹಾಗೂ ಮನೆ ಆರೈಕೆಯಲ್ಲಿರುವವರಿಗೆ ಅಗತ್ಯ ನೆರವು ನೀಡಲಾಗುವುದು' ಎಂದರು.

ಇದಕ್ಕೂ ಮುನ್ನ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೋವಿಡ್ ನಿರ್ವಹಣೆ ಬಗ್ಗೆ ಕ್ಷೇತ್ರದ ಬಿಜೆಪಿ ಮುಖಂಡರು, ವಿವಿಧ ಮೋರ್ಚಾಗಳ ಅಧ್ಯಕ್ಷರ ಜೊತೆ ಸಭೆ ನಡೆಸಿದ ಅವರು ಹೊಸದಾಗಿ ಆರಂಭಿಸಲಾಗಿರುವ ಚಿತಾಗಾರ, ಲಸಿಕೆ ಸಮಸ್ಯೆ, ಔಷಧ ಪೂರೈಕೆಯಲ್ಲಾಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

ಕೆಪಿಟಿಸಿಎಲ್ ನೌಕರರ ಸಂಘಗಳ ಒಕ್ಕೂಟದ ವತಿಯಿಂದ ಕೆಪಿಟಿಸಿಎಲ್ ಕೋವಿಡ್ ಪರಿಹಾರ ನಿಧಿಗೆ ₹15 ಲಕ್ಷ ಮೊತ್ತದ ಚೆಕ್ ಅನ್ನು ಒಕ್ಕೂಟದ ಅಧ್ಯಕ್ಷ ಟಿ.ಆರ್. ರಾಮಕೃಷ್ಣಯ್ಯ ಅವರು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್.ಮಂಜುಳಾ ಅವರಿಗೆ ಶುಕ್ರವಾರ ಹಸ್ತಾಂತರಿಸಿದರು. ನಿರ್ದೇಶಕ ಜಿ.ಎಂ.ಗಂಗಾಧರಸ್ವಾಮಿ, ಟಿ.ಎಂ.ಶಿವಪ್ರಕಾಶ್ ಹಾಗೂ ರಾಜಾನಾಯಕ್ ಇದ್ದಾರೆ.

## ಸರ್ಕಾರ ಜನಬೆಂಬಲ ಕಳೆದುಕೊಂಡಿದ್ದು ಸಾಬೀತು

ಸಿದ್ದರಾಮಯ್ಯ

ಶಿವಕುಮಾರ್

**ಬೆಂಗಳೂರು:** ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ ಜನಬೆಂಬಲ ಕಳೆದುಕೊಂಡಿರುವುದು ಹತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶದಿಂದ ಸಾಬೀತಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

'ಕೋವಿಡ್ ಸಂದರ್ಭದಲ್ಲಿ ಸರ್ಕಾರ ಜನರ ಜೀವದ ಜತೆ ಚೆಲ್ಲಾಟ ಆಡುತ್ತಿದೆ. ಈ ಕಾರಣದಿಂದ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸುವ ಮೂಲಕ ತಮ್ಮ ಆಕ್ರೋಶ ಹೊರಹಾಕಿದ್ದಾರೆ. ಜನರ ಕೆಂಗಣ್ಣಿಗೆ ಗುರಿಯಾಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸರ್ಕಾರವನ್ನು ವಿಸರ್ಜಿಸಿ ಚುನಾವಣೆಗೆ ಹೋಗುವುದು ಉತ್ತಮ' ಎಂದು ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

**ಮತದಾರ ಬದಲಾವಣೆ ಬಯಸಿದ್ದಾನೆ:** ಚುನಾವಣಾ ಫಲಿತಾಂಶದ ಬಳಿಕ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಚುನಾವಣೆ ನಡೆದ ಹತ್ತು ನಗರ ಸ್ಥಳೀಯ ಸಂಸ್ಥೆಗಳ ಪೈಕಿ ಹೆಚ್ಚು ಸಂಸ್ಥೆಗಳಲ್ಲಿ ಕಾಂಗ್ರೆಸ್ ಗೆಲುವು ದಾಖಲಿಸಿದೆ. ರಾಜ್ಯದಲ್ಲಿ ಬದಲಾವಣೆ ಬಯಸಿ ಮತದಾರರು ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾರೆ' ಎಂದರು.

ಗ್ರಾಮ ಪಂಚಾಯಿತಿ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷದ ಬೆಂಬಲಿತರು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದರು. ಆಗ ಪಕ್ಷದ ಚಿಹ್ನೆ ಇಲ್ಲ ಎಂದು ಕೆಲವು ಹೇಳಿದ್ದರು. ಈಗ ಚುನಾವಣೆ ನಡೆದ 266 ವಾರ್ಡ್‌ಗಳ ಪೈಕಿ 119 ಸ್ಥಾನಗಳನ್ನು ಕಾಂಗ್ರೆಸ್ ಪಡೆದಿದೆ. ಗೆಲುವು ಸಾಧಿಸಿರುವ 14 ಮಂದಿ ಪಕ್ಷೇತರ ಅಭ್ಯರ್ಥಿಗಳಲ್ಲಿ 11 ಜನರು ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಗಳು ಎಂದು ಹೇಳಿದರು.

## ಕಾಲೇಜು ಆವರಣ: ಆರೈಕೆ ಕೇಂದ್ರ

**ಬೆಂಗಳೂರು:** ಸೇಂಟ್ ಜೋಸೆಫ್ ಕಾಲೇಜು ಆವರಣದಲ್ಲಿ ಶೀಘ್ರವೇ 100 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ನಿರ್ಮಾಣವಾಗಲಿದೆ. ಕ್ರೈಸ್ತ ಶಿಕ್ಷಣ ಸಮೂಹ, ಕೆಲ ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಸಮಾಜಮುಖಿ ಸಂಘಟನೆಗಳ ಸಹಯೋಗದಲ್ಲಿ ಸ್ಥಾಪಿತವಾಗುತ್ತಿರುವ ಈ ಕೇಂದ್ರಕ್ಕೆ ಬಿಬಿಎಂಪಿ ಒಪ್ಪಿಗೆಯೂ ಸಿಕ್ಕಿದೆ.

'ಕರ್ನಾಟಕ ಕೋವಿಡ್ ಜೀವನ್ ಅನ್ಮೋಲ್ (ಕೆಸಿಜೆಎ)' ಹೆಸರಿನ ಅಡಿಯಲ್ಲಿ ಶಾಂತಿನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಕಾಲೇಜು ಆವರಣದಲ್ಲಿ ಕೇಂದ್ರ ತಲೆ ಎತ್ತಲಿದೆ.

'ಲಕ್ಷಣ ರಹಿತ ಹಾಗೂ ಸೌಮ್ಯ ಲಕ್ಷಣ ಹೊಂದಿರುವ ರೋಗಿಗಳಿಗೆ ಇಲ್ಲಿ ಆರೈಕೆ ಮಾಡಲಾಗುತ್ತದೆ. ವೈದ್ಯಕೀಯ ಆಮ್ಲಜನಕದ ವ್ಯವಸ್ಥೆಯೂ ಇರಲಿದೆ. ಐದು ದಿನಗಳಲ್ಲಿ ಈ ಕೇಂದ್ರ ಬಳಕೆಗೆ ಲಭ್ಯವಾಗಲಿದೆ. ಬಡವರಿಗೆ ಈ ಕೇಂದ್ರದಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ' ಎಂದು ಕೆಸಿಜೆಎಯ ರುದ್ರ ಶಂಕರ್ ರಾಯ್ ತಿಳಿಸಿದರು.

## ಸುಳ್ಳು ನೆಗಟಿವ್ ವರದಿ; ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬಂಧಿತ ಆರೋಪಿಗಳಾದ ಮುಖೇಶ್ ಹಾಗೂ ನಾಗರಾಜ್

ಅಪರಾಧ ಸುದ್ದಿ

**ಬೆಂಗಳೂರು:** ಕೊರೊನಾ ಸೋಂಕು ಪರೀಕ್ಷೆಗೆ ಮಾದರಿ ಸಂಗ್ರಹಿಸದೇ ಹಣ ಪಡೆದು ನೆಗಟಿವ್ ವರದಿ ನೀಡುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಹೊಸಹಳ್ಳಿಯ ನಾಗರಾಜ ಅಲಿಯಾಸ್ ಓಂ ಶಕ್ತಿ (39), ಚೋಡದೇನಹಳ್ಳಿಯ ಮುಖೇಶ್ ಸಿಂಗ್ (25), ಭಾಗ್ಯ ಹಾಗೂ ಅನಿಲ್‌ಕುಮಾರ್ ಬಂಧಿತರು. ನೆಗಟಿವ್ ವರದಿಗಳ ಐದು ಪ್ರತಿಗಳು, ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ರಾಜಸ್ಥಾನದ ಮುಖೇಶ್ ಸಿಂಗ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ಸೇರಿದ್ದ. ನಾಗರಾಜ್ ಜೊತೆ ಸೇರಿ ಕೃತ್ಯ ಎಸಗುತ್ತಿದ್ದ. ಕೃತ್ಯಕ್ಕೆ ಲ್ಯಾಬ್ ಟೆಕ್ನಿಷಿಯನ್‌ಗಳಾದ ಭಾಗ್ಯ ಹಾಗೂ ಅನಿಲ್‌ಕುಮಾರ್ ಸಹಾಯ ಮಾಡುತ್ತಿದ್ದರು' ಎಂದೂ ತಿಳಿಸಿದರು.

'ದೊಮ್ಮಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಯಾವುದೇ ಮಾದರಿಯನ್ನೂ ಸಂಗ್ರಹಿಸದ ಆರೋಪಿಗಳು, ಹಣ ಪಡೆದು ನೆಗಟಿವ್ ವರದಿ ನೀಡುತ್ತಿದ್ದರು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಸಾರ್ವಜನಿಕರ ಸೋಗಿನಲ್ಲೇ ಕಾರ್ಯಾಚರಣೆ ನಡೆಸಿ ಸರ್ಜಾಪುರ ಮುಖ್ಯರಸ್ತೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ.'

'ಸಾರ್ವಜನಿಕರ ಆಧಾರ್ ಕಾರ್ಡ್ ಮಾತ್ರ ಪಡೆಯುತ್ತಿದ್ದ ಆರೋಪಿಗಳು, ಗಂಟಲು ಅಥವಾ ಮೂಗಿನ ದ್ರವವನ್ನೇ ಸಂಗ್ರಹಿಸುತ್ತಿರಲಿಲ್ಲ. ತಲಾ ₹ 700 ಪಡೆದು ನೆಗೆಟಿವ್ ಎಂದು ನಮೂದಿಸಿ ಸುಳ್ಳು ವರದಿ ನೀಡುತ್ತಿದ್ದರು. ಇವರ ವಿರುದ್ಧ ವರ್ತೂರು ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದರು.

## ಉದಕಮಂಡಲ ರೇಸ್

### 'ರಾಯಲ್ ಚೀಫ್ಟನ್' ಗೆಲ್ಲುವ ನಿರೀಕ್ಷೆ

'ಎಂಪರರ್ ಆಫ್ ರೋಮ್ ಹ್ಯಾಂಡಿಕ್ಯಾಪ್ (ಡಿವಿಶನ್-2)' ಶನಿವಾರದ ಉದಕಮಂಡಲ ರೇಸ್‌ನಲ್ಲಿ ಪ್ರಧಾನ ಆಕರ್ಷಣೆಯಾಗಿದ್ದು 'ರಾಯಲ್ ಚೀಫ್ಟನ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ವಂಡರ್ಫುಲ್ ಎರಾ 4, ಲೇಡಿ ಬ್ಲೇಜರ್ 3, ವಿಕ್ಟೋರಿಯಾಸ್ ಸೀಕ್ರೆಟ್ 2
2ನೇ ರೇಸ್: ಗ್ಲೋರಿಯಸ್ ಸಿಂಫೋನಿ 7, ಬೊಹೆಮಿಯನ್ ಗ್ರಾಂಡ್ಯೂರ್ 6, ವಿಸಲ್ ಪೋಡು 3
3ನೇ ರೇಸ್: ಸ್ಟಾರ್ಲೈಟ್ 2, ಡಿಸಿಸಿವ್ 7, ಬ್ರಾಂಕ 9
4ನೇ ರೇಸ್: ಪ್ರೈಸ್‌ಲೆಸ್ ರೂಲರ್ 1, ಸಸಕ್ವ 8, ಬ್ರೇಕಿಂಗ್ ಬೌಂಡ್ಸ್ 3
5ನೇ ರೇಸ್: ರಾಯಲ್ ಚೀಫ್ಟನ್ 3, ಜಿಲಿಕಾಜಿ 4, ಟ್ರೆಶರ ಡಿಲೈಟ್ 2
6ನೇ ರೇಸ್: ಕ್ವೀನ್ ಆಫ್ ಗಿಬ್ರಾಲ್ಟರ್ 3, ರಾಯಲ್ ಪರ್ಲ್ 5, ಫೇರ್ವೆಲ್ 2.

**ಅತ್ಯುತ್ತಮ ಬೆಟ್: ಕ್ವೀನ್ ಆಫ್ ಗಿಬ್ರಾಲ್ಟರ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 2,3,4,5,6 | 1,2,3 | 4,5,6 |

## ಸಿನಿಮಾದಲ್ಲಿ ಖಳ; ಬಡವರ ಪಾಲಿಗೆ 'ನಾಯಕ'

# 'ಆಂಬುಲೆನ್ಸ್ ಚಾಲಕ'ನಾದ ನಟ

• ಮನೋಹರ್ ಎಂ.

ಉಚಿತ ಸೇವೆ ನೀಡುವ ಆಂಬುಲೆನ್ಸ್‌ನೊಂದಿಗೆ ನಟ ಅರ್ಜುನ್ ಗೌಡ

**ಬೆಂಗಳೂರು:** ಕೋವಿಡ್ ರೋಗಿಗಳ ಪರದಾಟಕ್ಕೆ ಮಿಡಿದ ಕನ್ನಡ ಚಿತ್ರರಂಗದ ಯುವ ನಟ ಅರ್ಜುನ್ ಗೌಡ, ಆಸ್ಪತ್ರೆಗಳಿಗೆ ರೋಗಿಗಳ ರವಾನೆ, ಚಿತಾಗಾರಕ್ಕೆ ಸೋಂಕಿತ ಮೃತದೇಹಗಳ ಸ್ಥಳಾಂತರ ಹಾಗೂ ತುರ್ತು ಅಗತ್ಯ ಇರುವೆಡೆಗೆ ಆಮ್ಲಜನಕ ಪೂರೈಸುವ ಮೂಲಕ 'ಆಂಬುಲೆನ್ಸ್ ಚಾಲಕ'ನಾಗಿ ಉಚಿತ ಸೇವೆ ನೀಡುತ್ತಿದ್ದಾರೆ.

'ರುಸ್ತುಂ', 'ಒಡೆಯ', 'ಏಕ್ ಲವ್‌ಯಾ' ಹಾಗೂ ಇತ್ತೀಚೆಗೆ ತೆರೆಕಂಡ 'ಯುವರತ್ನ' ಸೇರಿದಂತೆ ಹಲವು ಚಿತ್ರಗಳಲ್ಲಿ ಅವರು ಅಭಿನಯಿಸಿದ್ದಾರೆ. ಬಹುತೇಕ ಚಿತ್ರಗಳಲ್ಲಿ ಖಳನಟನ ಪಾತ್ರ. ಆದರೆ, ಈಗ ಕೋವಿಡ್ ಸೇವೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಬಹಳಷ್ಟು ರೋಗಿಗಳ ಪಾಲಿಗೆ ನಿಜಜೀವನದ ಹೀರೊ ಆಗಿದ್ದಾರೆ.

'ನಾನು ಮೊದಲಿಗೆ ಎಲ್ಲರಂತೆ ಕೋವಿಡ್ ಬಗ್ಗೆ ಹೆಚ್ಚಾಗಿ ತಲೆಕೆಡಿಸಿಕೊಂಡಿರಲಿಲ್ಲ. ಆದರೆ, ಒಂದು ಘಟನೆ ನನ್ನನ್ನು ಆಂಬುಲೆನ್ಸ್ ಚಾಲಕನನ್ನಾಗಿ ಮಾಡಿತು' ಎನ್ನುತ್ತಾರೆ ನಟ ಅರ್ಜುನ್ ಗೌಡ.

'ನಮ್ಮ ಮನೆಗೆ ಅಜ್ಜಿಯೊಬ್ಬರು ಪ್ರತಿದಿನ ಹಾಲು ಪೂರೈಸುತ್ತಿದ್ದರು. ಹತ್ತು ದಿನಗಳ ಹಿಂದೆ ಅವರು ಕೋವಿಡ್‌ನಿಂದ ಮೃತಪಟ್ಟ ವಿಚಾರ ತಿಳಿಯಿತು. ನನಗೆ ಪರಿಚಿತನಾಗಿದ್ದ ಅವರ ಮೊಮ್ಮಗ ಸಹಾಯ ಕೋರಿ ಕರೆ ಮಾಡಿದ. ಆಂಬುಲೆನ್ಸ್‌ಗೆ ನೀಡಲು ತುರ್ತಾಗಿ ಹಣ ಬೇಕು ಎಂದ. ಎಷ್ಟು ಎಂದು ಕೇಳಿದ್ದಕ್ಕೆ ₹12 ಸಾವಿರ ಎಂದ. ಇದನ್ನು ಕೇಳಿ ಆಘಾತಗೊಂಡೆ. ಮೃತದೇಹವನ್ನು ಚಿತಾಗಾರಕ್ಕೆ ಸಾಗಿಸಲು ಇಷ್ಟು ದೊಡ್ಡ ಮೊತ್ತದ ಬೇಡಿಕೆ ಇಡುವ ಸ್ಥಿತಿ ಕಂಡು ನೋವಾಯಿತು. ಹಾಗಾಗಿ, ಉಚಿತವಾಗಿ ಆಂಬುಲೆನ್ಸ್ ಸೇವೆ ನೀಡಬೇಕೆಂದು ನಿರ್ಧರಿಸಿದೆ' ಎಂದು ಅರ್ಜುನ್ ಆ ಘಟನೆಯನ್ನು ವಿವರಿಸಿದರು.

'ಚಂದ್ರಾ ಬಡಾವಣೆಯಲ್ಲಿ ನನ್ನದೊಂದು ಜಿಮ್ ಇದೆ. ಸದ್ಯಕ್ಕೆ ಚಿತ್ರರಂಗ ತಟಸ್ಥ, ಜಿಮ್‌ಗೂ ನಿರ್ಬಂಧ. ಆಂಬುಲೆನ್ಸ್ ಚಾಲಕನಾಗಿ ಸೇವೆ ಸಲ್ಲಿಸಲು ಇದನ್ನೇ ಅವಕಾಶ ಮಾಡಿಕೊಂಡು, 'ಪ್ರಾಜೆಕ್ಟ್ ಸ್ಮೈಲ್ ಟ್ರಸ್ಟ್'ನ ಮೊರೆಹೋದೆ. ಅವರಲ್ಲಿದ್ದ ಆಂಬುಲೆನ್ಸ್‌ವೊಂದನ್ನು ಪಡೆದು, ಅದರ ನಿರ್ವಹಣೆ ಹಾಗೂ ಚಾಲನೆ ಕುರಿತು ಎರಡು ದಿನ ತರಬೇತಿ ಪಡೆದೆ. ಒಂದು ವಾರದಿಂದ ಹಲವು ರೋಗಿಗಳನ್ನು ಆಸ್ಪತ್ರೆಗೆ ತಲುಪಿಸಿದ್ದೇನೆ. ಮೃತದೇಹಗಳನ್ನು ಚಿತಾಗಾರಕ್ಕೆ ಸಾಗಿಸಿದ್ದೇನೆ. ಕೊರತೆ ಇರುವ ಕಡೆಗೆ ಆಮ್ಲಜನಕ ಪೂರೈಸುತ್ತಿದ್ದೇನೆ. ಜನರ ಕಷ್ಟಕ್ಕೆ ಸ್ಪಂದಿಸುತ್ತಿರುವ ತೃಪ್ತಿ ಇದೆ' ಎಂದು ಹೇಳಿದರು.

'ಆಂಬುಲೆನ್ಸ್ ಚಾಲಕನಾದ ಬಳಿಕ ಪರಿಸ್ಥಿತಿಯ ನೈಜ ಚಿತ್ರಣ ಕಾಣಿಸಿತು. ಕಾಶಿಯ ಘಾಟ್‌ವೊಂದರಲ್ಲಿ ಮೃತರ ಅಂತ್ಯಕ್ರಿಯೆ ನಡೆಯುವುದನ್ನು ನೋಡಿದ್ದೆ. ಈಗ ಬೆಂಗಳೂರಿನಲ್ಲೇ ಆ ದೃಶ್ಯಗಳು ಕಂಡುಬರುತ್ತಿವೆ' ಎಂದರು.

'ಮುನ್ನೆಚ್ಚರಿಕೆ ಕ್ರಮವಾಗಿ ಬೇರೆ ಊರಿಗೆ ತೆರಳಿರುವ ಸ್ನೇಹಿತನ ಮನೆಯಲ್ಲಿ ಒಬ್ಬನೇ ಉಳಿದುಕೊಂಡಿದ್ದೇನೆ. ಕುಟುಂಬವನ್ನು ಸದ್ಯಕ್ಕೆ ದೂರವೇ ಇಟ್ಟಿದ್ದೇನೆ. ಆಂಬುಲೆನ್ಸ್ ಉಸ್ತುವಾರಿಯನ್ನು ಸಂಸ್ಥೆಯೇ ನಿರ್ವಹಿಸುತ್ತಿದೆ. ಉಚಿತ ಸೇವೆಗಾಗಿ ಕೈಲಾದ ಆರ್ಥಿಕ ಸಹಾಯ ಮಾಡುತ್ತಿದ್ದೇನೆ. ಆಗಾಗ ಡೀಸೆಲ್ ವೆಚ್ಚ ಭರಿಸಲು ಸಮಸ್ಯೆಯಾಗುತ್ತಿದೆ' ಎಂದೂ ಹೇಳಿದರು.

ಪ್ರಜಾವಾಣಿ ವಿಶೇಷ

### 'ಬೆಡ್ ಸಾಧ್ಯವಾಗಲಿಲ್ಲ, ಕ್ಷಮಿಸಿ'

'ಎರಡು ದಿನಗಳ ಹಿಂದೆ ರೋಗಿಯೊಬ್ಬರನ್ನು ಆಂಬುಲೆನ್ಸ್‌ನಲ್ಲಿ ಕರೆದುಕೊಂಡು ನಗರದ ಖಾಸಗಿ ಆಸ್ಪತ್ರೆಯೊಂದಕ್ಕೆ ಹೋಗಿದ್ದೆ. ಅಲ್ಲಿ ಕ್ಯಾಬ್ ಚಾಲಕರೊಬ್ಬರು ಕೋವಿಡ್ ಸೋಂಕು ತಗುಲಿರುವ ಪೋಷಕರೊಂದಿಗೆ ಒಂದು ದಿನದಿಂದ ಹಾಸಿಗೆಗಾಗಿ ಕಾಯುತ್ತಿದ್ದರು. ನನ್ನ ಬಳಿ ಬಂದು ಹೇಗಾದರೂ ಒಂದು ಹಾಸಿಗೆ ವ್ಯವಸ್ಥೆ ಮಾಡುವಂತೆ ಅಳುತ್ತಾ ಕೇಳಿಕೊಂಡರು. ಗೊತ್ತಿರುವ ಆಸ್ಪತ್ರೆಗಳಲ್ಲಿ ಸಂಜೆವರೆಗೂ ಪ್ರಯತ್ನಿಸಿದೆ. ಆದರೂ ಹಾಸಿಗೆ ಸಿಗಲೇ ಇಲ್ಲ. ಅವರ ಕಷ್ಟಕ್ಕೆ ನನ್ನಿಂದ ಏನೂ ಮಾಡಲಾರದೆ, ಅಸಹಾಯಕನಾಗಿ ಅಲ್ಲಿಂದ ಹೊರಟೆ. ಆ ನೋವು ಈಗಲೂ ಇದೆ. ಅವರಲ್ಲಿ ಕ್ಷಮೆಯಾಚಿಸುತ್ತೇನೆ' ಎಂದು ಮರುಗಿದ ಅರ್ಜುನ್, ತುರ್ತು ಅಗತ್ಯವಿದ್ದವರು ಪ್ರಾಜೆಕ್ಟ್ ಸ್ಮೈಲ್ ಟ್ರಸ್ಟ್‌ನ 9845010140 ಸಂಖ್ಯೆಗೆ ಸಂಪರ್ಕಿಸಬಹುದು' ಎಂದರು.

## ಆರೈಕೆ ಕೇಂದ್ರಕ್ಕೆ ಅಶೋಕ ಭೇಟಿ

**ಬೆಂಗಳೂರು:** 'ಕೋವಿಡ್‌ಗೆ ಕಡಿವಾಣ ಹಾಕಲು ಹಾಗೂ ಸೋಂಕಿತರಿಗೆ ಅಗತ್ಯ ಚಿಕಿತ್ಸೆ ನೀಡಲು ಸರ್ಕಾರ ಬದ್ಧವಾಗಿದ್ದು, ಈ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡಿದೆ' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಹಜ್ ಭವನದಲ್ಲಿ ನಿರ್ಮಿಸಲಾಗುತ್ತಿರುವ ಕೋವಿಡ್ ಆರೈಕೆ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿದ್ದ ಅವರು ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು.

ಬಳಿಕ ಮಾತನಾಡಿದ ಅವರು, 'ಅಂದಾಜು ₹1 ಕೋಟಿ ವೆಚ್ಚದಲ್ಲಿ ಈ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ ಆಮ್ಲಜನಕ ವ್ಯವಸ್ಥೆಯನ್ನೊಳಗೊಂಡ 147 ಹಾಗೂ ಐಸಿಯು ಹೊಂದಿರುವ 10 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ' ಎಂದರು.

ಬಳಿಕ ಮಾವಳ್ಳಿಪುರಕ್ಕೆ ಭೇಟಿ ನೀಡಿದ ಅವರು ಅಲ್ಲಿ ಸ್ಮಶಾನ ನಿರ್ಮಾಣಕ್ಕೆ ಗುರುತಿಸಿರುವ ಸ್ಥಳ ಪರಿಶೀಲಿಸಿದರು.

**ಅಂತರ ಮರೆತ ಜನ**

ಹೊಸೂರು ರಸ್ತೆಯಲ್ಲಿ ಸ್ವಯಂಸೇವಕರು ವಿತರಿಸುತ್ತಿದ್ದ ತರಕಾರಿಗಳನ್ನು ತೆಗೆದುಕೊಳ್ಳಲು ಶುಕ್ರವಾರ ಜನರು ಅಂತರ ಮರೆತು ಮುಗಿಬಿದ್ದಿದ್ದರು. ಬಳಿಕ ಪೊಲೀಸರು ಗುಂಪು ಚದುರಿಸಿದರು – ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

## ನೋಡಲ್ ಅಧಿಕಾರಿಯಾಗಿ ಡಾ.ಪಿ.ಎಸ್. ಹರ್ಷ

**ಬೆಂಗಳೂರು:** ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಬಿಬಿಎಂಪಿಯ ಎಲ್ಲ ಎಂಟು ವಲಯಗಳಲ್ಲಿ ತಲಾ 500 ಐಸಿಯು ಹಾಸಿಗೆಗಳ ವಿಶೇಷ ಆಸ್ಪತ್ರೆಗಳನ್ನು ತುರ್ತಾಗಿ ನಿರ್ಮಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಈ ಯೋಜನೆ ಅನುಷ್ಠಾನಕ್ಕೆ ನೋಡಲ್ ಅಧಿಕಾರಿಯನ್ನಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿರುವ ಐಪಿಎಸ್ ಅಧಿಕಾರಿ ಡಾ.ಪಿ.ಎಸ್. ಹರ್ಷ ಅವರನ್ನು ನೇಮಿಸಿದೆ.

ತ್ವರಿತವಾಗಿ ಐಸಿಯು ಹಾಸಿಗೆಗಳ ಆಸ್ಪತ್ರೆಗಳನ್ನು ನಿರ್ಮಿಸಲು ತಕ್ಷಣದಿಂದಲೇ ಜಾರಿಗೆ ಬರುವಂತೆ ಹರ್ಷ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ವಿಪತ್ತು ನಿರ್ವಹಣಾ ಕಾಯ್ದೆಯ ಸೆಕ್ಷನ್ 24ರ ಅಡಿಯಲ್ಲಿ ಆದೇಶ ಹೊರಡಿಸಲಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆಗಿರುವ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

# ಕೋವಿಡ್–19: ಸಂಕಷ್ಟಕ್ಕೆ ಸ್ಪಂದಿಸುವ 'ಮರ್ಸಿ ಮಿಷನ್'

• ಜಿ.ಶಿವಕುಮಾರ

ಒಳ್ಳೆ ಸುದ್ದಿ

**ಬೆಂಗಳೂರು:** ಇಲ್ಲೊಂದು ತಂಡ ನೊಂದವರ ನೋವಿಗೆ ಮಿಡಿಯುತ್ತಿದೆ. ಹಸಿದವರಿಗೆ ಆಹಾರ ಒದಗಿಸುತ್ತಿದೆ. ಅಶಕ್ತರಿಗೆ ವೈದ್ಯಕೀಯ ಆಮ್ಲಜನಕ ಒದಗಿಸುವ ಜೊತೆಗೆ ಸತ್ತವರ ಶವಸಂಸ್ಕಾರಕ್ಕೂ ನೆರವಾಗುತ್ತಿದೆ. ಅದರ ಹೆಸರು 'ಮರ್ಸಿ ಮಿಷನ್'.

ಕಳೆದ ವರ್ಷ ಮಾರ್ಚ್‌ನಲ್ಲಿ ತಲೆ ಎತ್ತಿದ ಈ ತಂಡ ಅಂದಿನಿಂದಲೂ ಸೇವೆ ಮಾಡುತ್ತಾ ಬಂದಿದೆ. ಸಮಾನ ಮನಸ್ಕ ಸಂಘಟನೆಗಳನ್ನು ಒಂದೇ ಸೂರಿನಡಿ ತಂದು ತನ್ನ ಕಾರ್ಯಜಾಲ ವಿಸ್ತರಿಸಿಕೊಂಡಿದೆ. ಆ ಮೂಲಕ ಕಷ್ಟದಲ್ಲಿರುವವರ ಕಣ್ಣೊರೆಸುವ ಕಾಯಕದಲ್ಲಿ ತೊಡಗಿಕೊಂಡಿದೆ.

ಹೋದ ವರ್ಷ ಸಮರೋಪಾದಿಯಲ್ಲಿ ಕೆಲಸ ಮಾಡಿದ್ದ ಈ ತಂಡ ಒಂದು ಲಕ್ಷಕ್ಕೂ ಅಧಿಕ ಜನರನ್ನು ತಲುಪಿತ್ತು. ಪ್ರಮುಖ ಹೋಟೆಲ್ ಹಾಗೂ ಸಂಘಟನೆಗಳ ಸಹಕಾರದೊಂದಿಗೆ ನಗರದ ವಿವಿಧ ಭಾಗಗಳಲ್ಲಿ 35 ಅಡುಗೆ ಮನೆಗಳನ್ನು ಸ್ಥಾಪಿಸಿ ಅಲ್ಲಿ ಸಿದ್ಧವಾದ ಒಟ್ಟು 12.3 ಲಕ್ಷದಷ್ಟು ಆಹಾರದ ಪೊಟ್ಟಣಗಳನ್ನು ವೈದ್ಯರು, ವಲಸೆ ಕಾರ್ಮಿಕರು, ನಿರ್ಗತಿಕರು ಮತ್ತು ಕೊಳೆಗೇರಿಗಳಲ್ಲಿ ವಾಸಿಸುವ ಜನರಿಗೆ ತಲುಪಿಸುವ ಕೆಲಸ ಮಾಡಿತ್ತು. ತಂಡದ ಈ ಕಾರ್ಯ ಈಗಲೂ ಮುಂದುವರಿದಿದೆ.

'ಎರಡನೇ ಅಲೆ ಕಾಣಿಸಿಕೊಂಡ ನಂತರ ರಾಜ್ಯದಲ್ಲಿ ಹಾಸಿಗೆ, ಆಮ್ಲಜನಕ ಹಾಗೂ ರೆಮ್‌ಡಿಸಿವಿರ್ ಚುಚ್ಚುಮದ್ದಿನ ಸಮಸ್ಯೆ ತಲೆದೋರಿದೆ. ಈ ಸಂಬಂಧ ನಮ್ಮ ಸಹಾಯವಾಣಿಗೆ ಪ್ರತಿನಿತ್ಯ ಸಾವಿರಾರು ಕರೆಗಳು ಬರುತ್ತಿವೆ. ಇದಕ್ಕೆ ತ್ವರಿತಗತಿಯಲ್ಲಿ ಸ್ಪಂದಿಸುವ ಕೆಲಸವನ್ನು 'ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್' ಮಾಡುತ್ತಿದೆ. 'ಮರ್ಸಿ ಪ್ಲಾಸ್ಮಾ', 'ಮರ್ಸಿ ಟೆಲಿಮೆಡಿಸಿನ್' ಎಂಬ ತಂಡಗಳನ್ನೂ ಆರಂಭಿಸಿದ್ದೇವೆ. ಟೆಲಿಮೆಡಿಸಿನ್ ತಂಡದಲ್ಲಿ ನುರಿತ ವೈದ್ಯರಿದ್ದಾರೆ. ರೋಗಿಗಳಿಗೆ ದೂರವಾಣಿ ಮೂಲಕ ಅಗತ್ಯ ಸಲಹೆ ಮತ್ತು ಮಾಹಿತಿ ಒದಗಿಸುತ್ತಾರೆ' ಎಂದು ತಂಡದ ಸದಸ್ಯ ತನ್ವೀರ್ ಅಹಮ್ಮದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮರ್ಸಿ ಏಂಜೆಲ್' ತಂಡ ಶವಸಂಸ್ಕಾರ ಕಾರ್ಯದಲ್ಲಿ ತೊಡಗಿಕೊಂಡಿದೆ. ನಮ್ಮಲ್ಲಿ ಒಟ್ಟು ಒಂಬತ್ತು ಆಂಬುಲೆನ್ಸ್‌ಗಳಿವೆ. ಆ ಪೈಕಿ ಎರಡು ಆಂಬುಲೆನ್ಸ್ ಅನ್ನು ಶವ ಸಾಗಿಸಲು ಮೀಸಲಿಟ್ಟಿದ್ದೇವೆ. 'ಮರ್ಸಿ ಆಕ್ಸಿಜನ್' ಮೂಲಕ ಸಂಕಷ್ಟದಲ್ಲಿರುವವರು ಹಾಗೂ ಬಡವರಿಗೆ ಆಮ್ಲಜನಕದ ಸಿಲಿಂಡರ್‌ಗಳನ್ನು ಉಚಿತವಾಗಿ ವಿತರಿಸಿದ್ದೇವೆ. ನಾವು ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಯಾರೇ ಕಷ್ಟದಲ್ಲಿದ್ದರೂ ಅವರಿಗೆ ನೆರವಾಗಬೇಕು ಎಂಬುದಷ್ಟೇ ನಮ್ಮ ಧ್ಯೇಯ. ಡಾ.ತಾಹ ಮತೀನ್ ನೇತೃತ್ವದಲ್ಲಿ ಈ ಕೆಲಸ ಮಾಡುತ್ತಿದ್ದೇವೆ' ಎಂದರು.

**ಸಂಪರ್ಕಕ್ಕೆ:** 9886194492 (ತನ್ವೀರ್), 9590008889 (ತೌಸಿಫ್), 9945926787 (ಇಸ್ಮಾಯಿಲ್).

## ಪಿಎಚ್‌ಸಿಗಳಲ್ಲಿ ಲಸಿಕೆ ಕೊರತೆ – ಪರೀಕ್ಷೆಗೆ ದಿನವಿಡೀ ಕಾಯಬೇಕಾದ ಪರಿಸ್ಥಿತಿ

# 'ಆಯಾ ಬಡಾವಣೆಗಳಲ್ಲೇ ಪರೀಕ್ಷೆ ನಡೆಯಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಆರ್ ಟಿ ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಲು ಮುಂದಾಗುವವರ ಸಂಖ್ಯೆಯೂ ಹೆಚ್ಚುತ್ತಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರಗಳ (ಪಿಎಚ್‌ಸಿ) ಆವರಣದಲ್ಲಿ ಜನ ಜಂಗುಳಿ ಉಂಟಾಗುತ್ತಿದೆ. ಪಿಎಚ್‌ಸಿಗಳ ಒಳಗಡೆ ಲಸಿಕೆ ವಿತರಣೆ ಪ್ರಕ್ರಿಯೆಯೂ ನಡೆಯುತ್ತಿದ್ದು, ಹೆಚ್ಚು ಜನ ಸೇರುತ್ತಿದ್ದಾರೆ.

'ಪರೀಕ್ಷೆ ಮತ್ತು ಲಸಿಕೆ ವಿತರಣೆ ಏಕಕಾಲಕ್ಕೆ ಒಂದೇ ಸ್ಥಳದಲ್ಲಿ ನಡೆಯುತ್ತಿರುವುದು ಕಷ್ಟವಾಗಿದೆ. ದಿನಕ್ಕೆ 20ರಿಂದ 30 ಜನಕ್ಕೆ ಮಾತ್ರ ಟೋಕನ್ ನೀಡುತ್ತಿದ್ದಾರೆ. ಒಬ್ಬೊಬ್ಬರು ಎರಡು–ಮೂರು ಬಾರಿ ಕೇಂದ್ರಕ್ಕೆ ತೆರಳಿದರೂ ಲಸಿಕೆ ಸಿಗುತ್ತಿಲ್ಲ' ಎಂದು ಹಿರಿಯ ನಾಗರಿಕರೊಬ್ಬರು ದೂರಿದರು.

ಕಾಚರಕನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಸೇರಿದ್ದ ಜನ

'ಕೋವಿಡ್ ಕರ್ಫ್ಯೂ ಬೇರೆ ಇರುವುದರಿಂದ ಬಿಎಂಟಿಸಿ ಬಸ್, ಮೆಟ್ರೊ ರೈಲು ಇಲ್ಲ. ಆಟೊ–ಟ್ಯಾಕ್ಸಿಗಳೂ ಸಿಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಹಿರಿಯ ನಾಗರಿಕರು ಎರಡು ಮೂರು ಬಾರಿ ಪಿಎಚ್‌ಸಿಗಳಿಗೆ ಓಡಾಡುವುದು ಕಷ್ಟವಾಗುತ್ತದೆ. ಆಯಾ ಬಡಾವಣೆಗಳಲ್ಲಿಯೇ ಲಸಿಕೆ ವಿತರಿಸುವ ಮತ್ತು ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡುವ ವ್ಯವಸ್ಥೆಯನ್ನು ಬಿಬಿಎಂಪಿ ಮಾಡಬೇಕು' ಎಂದು ಹೆಣ್ಣೂರು ಬಡಾವಣೆ ನಿವಾಸಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಮುನಿರಾಜು ಒತ್ತಾಯಿಸಿದರು.

'ಕಾಚರಕನಹಳ್ಳಿ ಪ್ರಾಥಮಿಕ ಕೇಂದ್ರದಲ್ಲಿ ಹೆಚ್ಚು ಜನ ಸೇರುತ್ತಾರೆ. ಆದರೆ, ಕೇಂದ್ರದಲ್ಲಿ ಸಿಬ್ಬಂದಿ ಮತ್ತು ಲಸಿಕೆ ಕೊರತೆ ಇರುವುದರಿಂದ ಹೆಚ್ಚು ಹೊತ್ತು ಜನ ಕಾಯಬೇಕಾದ ಸ್ಥಿತಿ ಇದೆ. ನಮ್ಮ ಬಡಾವಣೆಯಲ್ಲಿಯೇ ಲಸಿಕೆ ವಿತರಣೆ ಮತ್ತು ಪರೀಕ್ಷೆ ಮಾಡಲು ಬೇಕಾದ ಎಲ್ಲ ವ್ಯವಸ್ಥೆ ಮಾಡುತ್ತೇವೆ. ಸಿಬ್ಬಂದಿ, ಪರೀಕ್ಷಾ ಉಪಕರಣಗಳು ಮತ್ತು ಲಸಿಕೆ ಕಳುಹಿಸಿದರೆ ಸಾಕು. ಈ ಕುರಿತು ಬಿಬಿಎಂಪಿಗೆ ಪತ್ರವನ್ನೂ ಬರೆದಿದ್ದೇನೆ' ಎಂದು ಅವರು ಹೇಳಿದರು.

'ಜನ ಸೇರಬಾರದು ಎಂಬ ಉದ್ದೇಶದಿಂದ ಕರ್ಫ್ಯೂ ಜಾರಿ ಮಾಡಲಾಗಿದೆ. ಆದರೆ, ಹೀಗೆ ಪಿಎಚ್‌ಸಿ ಮುಂದೆ ಜನಜಂಗುಳಿ ಸೇರುವಂತಾದರೆ ಕರ್ಫ್ಯೂ ಉದ್ದೇಶವೇ ಈಡೇರಿದಂತಾಗದು' ಎಂದು ಅರಕೆರೆ ಪಿಎಚ್‌ಸಿಗೆ ಬಂದಿದ್ದ ಹಿರಿಯ ನಾಗರಿಕರೊಬ್ಬರು ಹೇಳಿದರು.

# ಕಮಿಷನ್ ಲೆಕ್ಕ ಬಿಟ್ಟು ಆಸ್ಪತ್ರೆ ಬಾಕಿ ಪಾವತಿಸಿ: ಡಿಕೆಶಿ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಚಿವರೇ ಕಮಿಷನ್ ಲೆಕ್ಕ ಹಾಕಿಕೊಂಡು ಕೂತಿದ್ದೀರಾ? ಖಾಸಗಿ ಆಸ್ಪತ್ರೆಗಳಿಗೆ ನೀಡಬೇಕಿರುವ ಬಾಕಿಯನ್ನು ಆದಷ್ಟು ಬೇಗ ಪಾವತಿಸಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರನ್ನು ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದೆ ತಿಂದಿದ್ದು, ಮುಂದೆ ತಿನ್ನೋದು ಸಾಕು. ಈಗ ಜನರ ಕಷ್ಟದ ಕಡೆಗೆ ಗಮನಹರಿಸಿ' ಎಂದರು.

ಕಳೆದ ವರ್ಷ ಖಾಸಗಿ ಆಸ್ಪತ್ರೆಗಳ ಶೇಕಡ 80ರಷ್ಟು ಹಾಸಿಗೆಗಳನ್ನು ರಾಜ್ಯ ಸರ್ಕಾರ ಬಳಕೆ ಮಾಡಿತ್ತು. ಈವರೆಗೂ ಅವರಿಗೆ ಬಾಕಿ ಹಣ ಪಾವತಿಸಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಸಿಬ್ಬಂದಿಗೆ ವೇತನ ನೀಡಲು, ಔಷಧಿ ಖರೀದಿಸಲು ಹಣ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಕೋವಿಡ್ ಲಸಿಕೆ ವಿತರಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರಿಯಾದ ತಯಾರಿಯನ್ನೇ ಮಾಡಿಲ್ಲ. ಲಸಿಕೆ ಪಡೆಯುವವರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳುವಂತೆ ಸೂಚಿಸಲಾಗಿದೆ. ಆನ್‌ಲೈನ್ ಸೌಲಭ್ಯದ ಬಳಕೆಯ ಅರಿವು ಇಲ್ಲದವರು ಏನು ಮಾಡಬೇಕು? ಈ ಸರ್ಕಾರ ಒಂದು ವರ್ಗದ ಜನರ ಬಗ್ಗೆ ಮಾತ್ರ ಯೋಚಿಸುತ್ತಿದೆಯೇ ಎಂದು ಪ್ರಶ್ನಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೋವಿಡ್ ನಿಯಂತ್ರಣ ಹಾಗೂ ಚಿಕಿತ್ಸೆಯ ವಿಚಾರದಲ್ಲಿ ಸಂಪೂರ್ಣ ವಿಫಲವಾಗಿವೆ. ಆದರೂ, ಸುಳ್ಳು ಹೇಳುತ್ತಿದ್ದಾರೆ. ರಾಜ್ಯದಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದಿಗೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ಔಷಧ ನಿಯಂತ್ರಕರು ಮೊಬೈಲ್‌ಗಳನ್ನು ಆಫ್ ಮಾಡಿಕೊಂಡಿದ್ದಾರೆ ಎಂದು ಶಿವಕುಮಾರ್ ಟೀಕಿಸಿದರು.

ಲಾಕ್‌ಡೌನ್ ಜಾರಿಗೊಳಿಸಿರುವ ಸರ್ಕಾರ, ಜನರಿಗೆ ಆರ್ಥಿಕ ಪರಿಹಾರ ನೀಡಬೇಕು. ಕಾರ್ಮಿಕರು ಮತ್ತೆ ವಲಸೆ ಹೋಗುತ್ತಿದ್ದಾರೆ. ಅದನ್ನು ತಡೆಯಲು ಪರಿಹಾರ ಘೋಷಿಸಬೇಕು ಎಂದು ಆಗ್ರಹಿಸಿದರು.

### 10 ಆಂಬುಲೆನ್ಸ್ ಸೇವೆಗೆ

ಸರ್ಕಾರ ನೀಡಿರುವ ಸಹಾಯವಾಣಿಯಿಂದ ಕೋವಿಡ್ ರೋಗಿಗಳಿಗೆ ಸರಿಯಾಗಿ ಸ್ಪಂದನೆ ಸಿಗುತ್ತಿಲ್ಲ. ಕೆಪಿಸಿಸಿಯಿಂದ ಸಹಾಯವಾಣಿ ಆರಂಭಿಸಿದ್ದು, 10 ಆಂಬುಲೆನ್ಸ್‌ಗಳನ್ನು ಒದಗಿಸಲಾಗಿದೆ. ಈವರೆಗೆ 100ಕ್ಕೂ ಹೆಚ್ಚು ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. 300 ಜನರಿಗೆ ವೈದ್ಯರ ಮೂಲಕ ಮಾರ್ಗದರ್ಶನ ಕೊಡಿಸಿ, ಔಷಧಿ ನೀಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

**7,56,740** ಒಟ್ಟು ಸೋಂಕಿತರು

**4,91,306** ಗುಣಮುಖರಾದವರು

**2,59,058** ಸಕ್ರಿಯ ಪ್ರಕರಣ

**6,375** ಸಾವು

**ಶುಕ್ರವಾರದ ಏರಿಕೆ**

**26,756** ದೃಢಪಟ್ಟ ಪ್ರಕರಣ

**5,123** ಗುಣಮುಖ | **93** ಸಾವು

### ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 15.15 ಕೋಟಿ ▲ | 1.91 ಕೋಟಿ ▲ |
| ಸಕ್ರಿಯ ಪ್ರಕರಣ | 1.95 ಕೋಟಿ ▼ | 32.62 ಲಕ್ಷ ▼ |
| ಗುಣಮುಖ | 12.88 ಕೋಟಿ ▲ | 1.56 ಕೋಟಿ ▲ |
| ಸಾವು | 31.81 ಲಕ್ಷ ▲ | 2.11 ಲಕ್ಷ ▲ |

**ದಿನದ ಏರಿಕೆ**

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 9.04 ಲಕ್ಷ ▲ | 4.01 ಲಕ್ಷ ▲ |
| ಗುಣಮುಖ | 7.80 ಲಕ್ಷ ▲ | 1.57 ಲಕ್ಷ ▼ |
| ಸಾವು | 15,257 ▲ | 3.521 ▼ |

**ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)**

| ಬ್ರೆಜಿಲ್ | ಅಮೆರಿಕ | ಫ್ರಾನ್ಸ್ |
|---|---|---|
| 69,079 ▲ | 59,269 ▲ | 26,538 ▲ |

**ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)**

| ಅಮೆರಿಕ | ಬ್ರೆಜಿಲ್ | ಫ್ರಾನ್ಸ್ |
|---|---|---|
| 68.13 ▼ | 10.39 ▼ | 9.89 ▲ |

**ಎಲ್ಲಿ ಹೆಚ್ಚು ಸಾವು**

| | |
|---|---|
| ಮಹಾರಾಷ್ಟ್ರ | 62,919 ▼ |
| ತಮಿಳುನಾಡು | 14,046 ▲ |
| ಕೇರಳ | 5,309 |

**ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)**

| | |
|---|---|
| ಮಹಾರಾಷ್ಟ್ರ | 46.02 ▲ |
| ಕೇರಳ | 15.71 ▲ |
| ಉತ್ತರ ಪ್ರದೇಶ | 12,52 ▲ |

ಪ್ರಜಾವಾಣಿ ಗ್ರಾಫಿಕ್ಸ್

# ಕುಂಭಮೇಳ ಮುಕ್ತಾಯ 70 ಲಕ್ಷ ಮಂದಿ ಭಾಗಿ

**ಡೆಹರಾಡೂನ್(ಪಿಟಿಐ):** ಹರಿದ್ವಾರದಲ್ಲಿ ನಡೆದ ಕುಂಭ ಮೇಳದಲ್ಲಿ ಈ ಬಾರಿ ಸುಮಾರು 70 ಲಕ್ಷ ಮಂದಿ ಭಾಗಿಯಾಗಿದ್ದರು. ಶುಕ್ರವಾರ ಈ ಮೇಳ ಮುಕ್ತಾಗೊಂಡಿತು.

ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ಕುಂಭ ಮೇಳವನ್ನು ಅರ್ಧದಲ್ಲೇ ಮೊಟಕುಗೊಳಿಸಲಾಯಿತು. ಏಪ್ರಿಲ್ 1ರಂದು ಅಧಿಕೃತವಾಗಿ ಮೇಳ ಆರಂಭವಾಗಿತ್ತು. ಉಳಿದ ಸಂದರ್ಭದಲ್ಲಿ ಮೂರು ತಿಂಗಳ ಕಾಲ ಕುಂಭ ಮೇಳ ನಡೆಯುತ್ತಿತ್ತು.

## 3ನೇ ಹಂತ ಆರಂಭಕ್ಕೆ ವಿಘ್ನ

ಒಂದನೇ ಪುಟದಿಂದ...

ಹೀಗಾಗಿ ಹಲವು ರಾಜ್ಯಗಳು 18-45 ವರ್ಷದವರಿಗೆ ಲಸಿಕೆ ನೀಡುವ ಮೂರನೇ ಹಂತದ ಲಸಿಕೆ ಕಾರ್ಯಕ್ರಮವನ್ನು ಮೇ 1ರಿಂದ ಆರಂಭಿಸುವುದಿಲ್ಲ ಎಂದು ಹೇಳಿವೆ.

ಮೇ 1ರಿಂದ ಮೂರನೇ ಹಂತದ ಲಸಿಕೆ ಕಾರ್ಯಕ್ರಮ ಆರಂಭಿಸುವುದಿಲ್ಲ ಎಂದು ಮಹಾರಾಷ್ಟ್ರ ಸರ್ಕಾರವು ಈ ಹಿಂದೆಯೇ ಘೋಷಿಸಿತ್ತು. ಎರಡನೇ ಹಂತದ ಲಸಿಕೆ ಅಭಿಯಾನಕ್ಕೆ ಲಸಿಕೆಯ ಕೊರತೆ ಇದೆ ಎಂದು ಕರ್ನಾಟಕ, ಪಂಜಾಬ್, ಗುಜರಾತ್, ರಾಜಸ್ಥಾನ, ತೆಲಂಗಾಣ, ತಮಿಳುನಾಡು, ರಾಜಸ್ಥಾನ, ಛತ್ತೀಸಗಡ, ಅರುಣಾಚಲ ಪ್ರದೇಶ, ಜಮ್ಮು-ಕಾಶ್ಮೀರ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಹೇಳಿವೆ.

**ಲಸಿಕೆ ಪೂರೈಕೆಯಾಗಿಲ್ಲ. ನಾವು ದಿನಾಂಕ ಘೋಷಿಸುವವರೆಗೂ ಜನರು ಲಸಿಕೆ ಕೇಂದ್ರಗಳ ಎದುರು ಬರಬಾರದು ಎಂದು ಮನವಿ ಮಾಡುವೆ**

**ಅರವಿಂದ ಕೇಜ್ರಿವಾಲ್**
ದೆಹಲಿ ಮುಖ್ಯಮಂತ್ರಿ

# ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಶೀಘ್ರ

ಪ್ರಜಾವಾಣಿ ವಾರ್ತೆ

ಸುರೇಶ್ ಕುಮಾರ್

**ಬೆಂಗಳೂರು:** ಹಲವು ತಿಂಗಳುಗಳಿಂದ ವರ್ಗಾವಣೆ ನಿರೀಕ್ಷೆಯಲ್ಲಿದ್ದ ಶಿಕ್ಷಕರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದೆ. ಶೀಘ್ರದಲ್ಲಿಯೇ ಈ ಪ್ರಕ್ರಿಯೆ ಪ್ರಾರಂಭಿಸುವುದಾಗಿ ಸರ್ಕಾರ ಶುಕ್ರವಾರ ತಿಳಿಸಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆಗೆ ತಿದ್ದುಪಡಿ ತಂದ ಸಚಿವ ಸಂಪುಟದ ನಿರ್ಣಯವನ್ನು ರಾಜ್ಯಪಾಲರು ಅನುಮೋದಿಸಿದ್ದು, ಈ ಕುರಿತಂತೆ ಗುರುವಾರ ಅಧಿಕೃತ ರಾಜ್ಯಪತ್ರವನ್ನು ಸರ್ಕಾರ ಪ್ರಕಟಿಸಿದೆ.

2019-20ನೇ ಸಾಲಿನಲ್ಲಿ ಕಡ್ಡಾಯ-ಹೆಚ್ಚುವರಿ ವರ್ಗಾವಣೆಗೊಳಗಾದ ಶಿಕ್ಷಕರಿಗೆ ಒಂದು ಬಾರಿ ವಿಶೇಷ ಅವಕಾಶ ನೀಡಬೇಕು. ಅಲ್ಲದೆ, ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ಲಭ್ಯವಿರುವ ಹುದ್ದೆಗಳಿಗೆ ಮೊದಲ ಆದ್ಯತೆಯ ವರ್ಗಾವಣೆ ಅವಕಾಶವನ್ನು ನೀಡಲು ಸುಗ್ರೀವಾಜ್ಞೆಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

'ವರ್ಗಾವಣೆ ಕೋರಿ ಸಲ್ಲಿಕೆಯಾಗಿರುವ ಸುಮಾರು 72,000 ಅರ್ಜಿಗಳನ್ನು ಶಿಕ್ಷಕ ಮಿತ್ರ ಆ್ಯಪ್ ಮೂಲಕವೇ ನಿರ್ವಹಿಸಿ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಸಂಪೂರ್ಣ ಆನ್‌ಲೈನ್ ಮೂಲಕವೇ ಮಾಡಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ಯಾವುದೇ ಕಾರಣಕ್ಕೂ ಶಿಕ್ಷಕರು ಭೌತಿಕವಾಗಿ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಾರದು. ಇಡೀ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ' ಎಂದು ಸಚಿವರು ಹೇಳಿದ್ದಾರೆ.

'ಕಡ್ಡಾಯ-ಹೆಚ್ಚುವರಿ ವರ್ಗಾವಣೆಯಿಂದ ಸುಮಾರು 3,500 ಶಿಕ್ಷಕರು ತೀವ್ರ ಸಂಕಷ್ಟಕ್ಕೊಳಗಾಗಿದ್ದು, ಮಾನವೀಯ ನೆಲೆಗಟ್ಟಿನಲ್ಲಿ ಅವರಿಗೆ ಅವಕಾಶ ಕಲ್ಪಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ.

## ಆಮ್ಲಜನಕ ಸಾಗಿಸಲು ವಿದೇಶಕ್ಕೆ ಯುದ್ಧ ನೌಕೆಗಳು

**ನವದೆಹಲಿ (ಪಿಟಿಐ):** ಆಮ್ಲಜನಕ ಭರ್ತಿಯಾಗಿರುವ ಕ್ರಯೊಜೆನಿಕ್ ಕಂಟೇನರ್‌ಗಳನ್ನು ವಿದೇಶದಿಂದ ತರಲು ಭಾರತೀಯ ನೌಕಾ ಪಡೆ ಶುಕ್ರವಾರ ವಿಶೇಷ ಕಾರ್ಯಾಚರಣೆ ಆರಂಭಿಸಿದೆ.

ಭಾರತೀಯ ನೌಕಾಪಡೆಯ ಯುದ್ಧನೌಕೆಗಳು ಬಹ್ರೈನ್, ಸಿಂಗಪುರ ಮತ್ತು ಥಾಯ್ಲೆಂಡ್‌ನಿಂದ ಆಮ್ಲಜನಕವನ್ನು ತರಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಎನ್‌ಎಸ್ ಕೋಲ್ಕತ್ತ, ಐಎನ್‌ಎಸ್ ತಲ್ವಾರ್ ಈಗಾಗಲೇ ಬಹ್ರೈನ್‌ನ ಮನಾಮಾ ಬಂದರು ತಲುಪಿವೆ. ಈ ಯುದ್ಧನೌಕೆಗಳು 40 ಮೆಟ್ರಿಕ್ ಟನ್‌ಗಳಷ್ಟು ದ್ರವೀಕೃತ ಆಮ್ಲಜನಕವನ್ನು ಮುಂಬೈಗೆ ತರಲಿವೆ ಎಂದು ತಿಳಿಸಿದ್ದಾರೆ.

'ಆಮ್ಲಜನಕವನ್ನು ಸಾಗಿಸಲು ಸಮುದ್ರ ಸೇತು–2 ಕಾರ್ಯಾಚರಣೆಯನ್ನು ಭಾರತೀಯ ನೌಕಾಪಡೆ ಆರಂಭಿಸಿದೆ' ಎಂದು ವಕ್ತಾರ ವಿವೇಕ್ ಮಧ್ವಾಲ್ ತಿಳಿಸಿದ್ದಾರೆ.

## ಆರ್.ಆರ್.ನಗರದ ನಿವಾಸಿಗಳ ಒತ್ತಾಯ • ಸೇವೆಗಾಗಿ 100 ಸ್ವಯಂ ಸೇವಕರು ಸಿದ್ಧ

# 'ಪಾಳು ಬಿದ್ದ ಆಸ್ಪತ್ರೆ ಕಟ್ಟಡ ಕೋವಿಡ್ ಕೇಂದ್ರ ಮಾಡಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜರಾಜೇಶ್ವರಿ ನಗರದಲ್ಲಿ ಬಳಕೆಯಾಗದೇ ಪಾಳು ಬಿದ್ದಿರುವ ಆಸ್ಪತ್ರೆ ಕಟ್ಟಡವನ್ನು ಕೋವಿಡ್ ಚಿಕಿತ್ಸೆಗಾಗಿ ಬಳಸಿಕೊಳ್ಳಬೇಕು ಎಂದು ಸಾರ್ವಜನಿಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪಾಳು ಬಿದ್ದಿರುವ ಕಟ್ಟಡ ಹಿಂದೆ ಮಕ್ಕಳ ಆಸ್ಪತ್ರೆಯಾಗಿತ್ತು. ಬಳಿಕ ಇದನ್ನು ಮಣಿಪಾಲ ಆಸ್ಪತ್ರೆ ಸಮೂಹಕ್ಕೆ ಪರಭಾರೆ ಮಾಡಲಾಗಿತ್ತು. ಅವರು ಸ್ವಲ್ಪ ವರ್ಷ ಆಸ್ಪತ್ರೆ ನಡೆಸಿ ಬಳಿಕ ಮುಚ್ಚಿದರು. ಈಗ ಅದನ್ನು ಡೆವಲಪರ್ ಒಬ್ಬರಿಗೆ ನೀಡಲಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

'ಪಾಳುಬಿದ್ದ ಆಸ್ಪತ್ರೆಯನ್ನು ಆರು ತಿಂಗಳು ಅಥವಾ ವರ್ಷದ ಮಟ್ಟಿಗೆ ಪಡೆದು 400 ಹಾಸಿಗೆಗಳ ಕೋವಿಡ್ ಚಿಕಿತ್ಸಾ ಕೇಂದ್ರವಾಗಿ ಪರಿವರ್ತಿಸಬಹುದು ಅಥವಾ ಮೇಕ್ ಶಿಫ್ಟ್ ಆಗಿಯೂ ಬಳಸಿಕೊಳ್ಳಲು ಸಾಧ್ಯವಿದೆ' ಎಂದು ವೈದ್ಯ ಡಾ.ರಾಘವೇಂದ್ರ ರಾವ್ ತಿಳಿಸಿದ್ದಾರೆ.

ಹಳೇ ಆಸ್ಪತ್ರೆ ಕಟ್ಟಡ

'ಕಲ್ಯಾಣ ಮಂಟಪ ಇತ್ಯಾದಿಗಳನ್ನು ಪಡೆದುಕೊಳ್ಳುವುದಕ್ಕಿಂತ ಈ ಕಟ್ಟಡವನ್ನು ಸ್ವಚ್ಛ ಮಾಡಿ ಬಳಸಿಕೊಳ್ಳಬಹುದು. ಇಲ್ಲಿ ಶೌಚಾಲಯವನ್ನು ಹೊಂದಿದ ಸಿಂಗಲ್ ರೂಮ್‌ಗಳಿವೆ. ಐಸೋಲೇಷನ್ ಮಾಡುವುದಕ್ಕೂ ಸುಲಭವಾಗುತ್ತದೆ. ಈ ಭಾಗದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಹೆಚ್ಚುತ್ತಿರುವುದರಿಂದ ಇದನ್ನು ಸರ್ಕಾರ ಪಡೆದುಕೊಂಡರೆ ಸುಲಭವಾಗುತ್ತದೆ' ಎಂದು ಅವರು ಹೇಳಿದರು.

'ಒಂದು ದೊಡ್ಡ ಆಸ್ಪತ್ರೆಯಲ್ಲಿ ಇರುವ ಎಲ್ಲ ಸೌಲಭ್ಯಗಳು ಇವೆ. ಆಕ್ಸಿಜನ್ ಪೂರೈಕೆಗೆ ಅಗತ್ಯ ಸೌಕರ್ಯಗಳಿವೆ. ಹೀಗಾಗಿ ಅತಿ ಸುಲಭವಾಗಿ ಕೋವಿಡ್ ಕೇಂದ್ರವಾಗಿ ಪರಿವರ್ತನೆ ಮಾಡಬಹುದು. ಈ ಬಗ್ಗೆ ಡೆವಲಪರ್‌ಗೆ ಹೇಳಿದ್ದೇವೆ. ಅವರಿಗೆ ಆಸಕ್ತಿ ಇದ್ದಂತಿಲ್ಲ. ಸರ್ಕಾರ ಮತ್ತು ಶಾಸಕರನ್ನು ಸಂಪರ್ಕಿಸಿ ಮಾತನಾಡಿಸುವ ಪ್ರಯತ್ನ ನಡೆದಿದೆ' ಎಂದು ಸ್ಥಳೀಯರೊಬ್ಬರು ಹೇಳಿದರು.

ಸರ್ಕಾರ ಮಧ್ಯ ಪ್ರವೇಶಿಸಿದರೆ ದೊಡ್ಡ ಕೋವಿಡ್ ಕೇರ್ ಸೆಂಟರ್ ಆಗುತ್ತದೆ. ತುಂಬಾ ರೋಗಿಗಳಿಗೆ ಅನುಕೂಲವಾಗುತ್ತದೆ. ಸರ್ಕಾರವೇ ಇದನ್ನು ನಡೆಸಬಹುದು. ಇದಕ್ಕೆ ಎಲ್ಲ ರೀತಿಯ ಸಹಕಾರ ನೀಡಲು ಸ್ಥಳೀಯ ನಿವಾಸಿಗಳು ಸಿದ್ಧರಿದ್ದಾರೆ. ಒಂದು ವೇಳೆ ಸರ್ಕಾರದ ಕೈಯಲ್ಲಿ ಆಗುವುದಿಲ್ಲ ಎಂದರೆ ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್‌ನವರೇ ನಡೆಸಲು ಸಿದ್ಧರಿದ್ದೇವೆ. ಈಗಾಗಲೇ ರಾಷ್ಟ್ರೋತ್ಥಾನದವರು 300 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್ ಮಾಡಿದ್ದಾರೆ. ಅದರಿಂದ ಅನುಕೂಲ ಆಗಿದೆ ಎಂದು ಅವರು ಹೇಳಿದರು.

### ಸಚಿವರ ಜತೆ ಮಾತುಕತೆ

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಈ ಕುರಿತು ಪ್ರಸ್ತಾವನೆ ಸಲ್ಲಿಸಿದ್ದೇವೆ. ಸರ್ಕಾರ ಒಪ್ಪಿಗೆ ನೀಡಿ ಡೆವಲಪರ್ ಕಡೆಯಿಂದ ಬಿಡಿಸಿಕೊಟ್ಟರೆ 100 ಕಾರ್ಯಕರ್ತರು ಹಗಲಿರಳು ಕೆಲಸ ಮಾಡಲು ಸಿದ್ಧರಿದ್ದಾರೆ. ಸಚಿವರ ಜತೆ ಚರ್ಚಿಸುತ್ತೇವೆ ಎಂದು ವಿಧಾನಪರಿಷತ್ ಸದಸ್ಯ ತುಳಸಿ ಮುನಿರಾಜುಗೌಡ ಹೇಳಿದ್ದಾರೆ.

ಇದನ್ನು 6 ತಿಂಗಳು ಅಥವಾ ಒಂದು ವರ್ಷದ ಮಟ್ಟಿಗೆ ಪಡೆದು ಬಳಿಕ ಅವರಿಗೇ ಹಿಂತಿರುಗಿಸಬಹುದು. ಈ ಕಟ್ಟಡದಲ್ಲಿ ವ್ಯವಸ್ಥೆ ಮಾಡಲು ಸುಲಭ. ಇದಕ್ಕೆ ಶಾಸಕರ ನಿಧಿಯಿಂದ ಹಣ ಕೊಡಲು ಅವಕಾಶವಿದ್ದರೆ, ಕೊಡಲು ಸಿದ್ಧವಿದ್ದೇನೆ ಎಂದು ಹೇಳಿದರು.

# ಖಾಸಗಿ ಆಸ್ಪತ್ರೆಗಳ ನಡೆ ಹೇಗಿರಬೇಕಿತ್ತು?

**ಬೆಂಗಳೂರು:** ಕೋವಿಡ್ ರೋಗಿಗಳ ಚಿಕಿತ್ಸೆಯ ವಿಚಾರದಲ್ಲಿ ನಗರದಲ್ಲಿ ಬಿಬಿಎಂಪಿ ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಜಟಾಪಟಿಯೇ ನಡೆಯುತ್ತಿದೆ. ಕೆಲವು ಖಾಸಗಿ ಆಸ್ಪತ್ರೆಗಳು ಇಂತಹ ಸಂಕಷ್ಟದ ಕಾಲದಲ್ಲೂ ಲಾಭವೇ ಮುಖ್ಯ ಎಂಬಂತೆ ವರ್ತಿಸುತ್ತಿವೆ. ಹಿಂದೆಂದೂ ಕಂಡರಿಯದ ಬಿಕ್ಕಟ್ಟಿನ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳು ಹೇಗೆ ನಡೆದುಕೊಳ್ಳಬೇಕಿತ್ತು ಎಂಬ ಅಭಿಪ್ರಾಯವನ್ನು ಹಲವರು 'ಪ್ರಜಾವಾಣಿ' ಜತೆ ಹಂಚಿಕೊಂಡಿದ್ದಾರೆ.

### ಖಾಸಗಿ ಆಸ್ಪತ್ರೆಗಳ ಸುಲಿಗೆ ನಿಲ್ಲಲಿ

ಖಾಸಗಿ ಆಸ್ಪತ್ರೆಗಳು ಅಕ್ರಮದಲ್ಲಿ ತೊಡಗಿಕೊಂಡಿವೆ. ಚಿಕಿತ್ಸೆ ವಿಚಾರದಲ್ಲಿ ತಾರತಮ್ಯ ಮಾಡುತ್ತಿವೆ. ಹಣಬಲ ಇರುವವರಿಗೆ ಮನ್ನಣೆ ನೀಡಲಾಗುತ್ತಿದೆ. ಆಸ್ಪತ್ರೆಗಳ ಒಳಗೆ ಏನಾಗುತ್ತಿದೆ, ಯಾವ ಬಗೆಯ ಚಿಕಿತ್ಸೆ ನೀಡಲಾಗುತ್ತಿದೆ ಎಂಬುದರ ಬಗ್ಗೆ ಯಾರಿಗೂ ಮಾಹಿತಿ ನೀಡುತ್ತಿಲ್ಲ. ಈ ವಿಚಾರದಲ್ಲಿ ಪಾರದರ್ಶಕತೆ ಬರಬೇಕು. ಎಲ್ಲ ಐಸಿಯುಗಳಲ್ಲೂ ಸಿಸಿಟಿವಿ ಅಳವಡಿಸುವ ಕೆಲಸ ಆಗಬೇಕು. ಕೆಲ ಆಸ್ಪತ್ರೆಗಳಲ್ಲಿ ಸರಿಯಾದ ಮೂಲ ಸೌಕರ್ಯಗಳೇ ಇಲ್ಲ. ಅಲ್ಲಿ ದಾಖಲಾಗುವ ರೋಗಿಗಳಿಂದ ಬೇಕಾಬಿಟ್ಟಿ ಹಣ ವಸೂಲಿ ಮಾಡಲಾಗುತ್ತಿದೆ. ಇಷ್ಟೆಲ್ಲಾ ಗೊತ್ತಿದ್ದರೂ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ.

ಕೋವಿಡ್ ನಿರ್ವಹಣೆ ವಿಷಯದಲ್ಲಿ ಸರ್ಕಾರ ಸಂಪೂರ್ಣವಾಗಿ ವೈಫಲ್ಯ ಕಂಡಿದೆ. ನಿಯಮ ಉಲ್ಲಂಘಿಸುವ ಆಸ್ಪತ್ರೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲೂ ಹೆದರುತ್ತಿದೆ.

**ಕೆ.ವಿ.ನಾಗರಾಜಮೂರ್ತಿ,** ರಂಗಕರ್ಮಿ

### ಲಾಭದ ಮನೋಭಾವ ಬಿಡಿ

ಲಾಭ, ನಷ್ಟದ ಲೆಕ್ಕ ಹಾಕುವ ಸಮಯ ಇದಲ್ಲ. ಈಗಿನ ಪರಿಸ್ಥಿತಿಯಲ್ಲಿ ಮಾನವೀಯತೆ ಬಹಳ ಮುಖ್ಯ. ಜನರ ಜೀವ ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು.

ಹಣ ಮಾಡಲು ಇದೇ ಸೂಕ್ತ ಸಮಯ ಎಂದು ಕೆಲ ವೈದ್ಯರು ಹಾಗೂ ಆಸ್ಪತ್ರೆಗಳು ಭಾವಿಸಿದಂತಿದೆ. ಈ ಕೊಳಕು ಮನಸ್ಥಿತಿಯಿಂದ ಅವರೆಲ್ಲಾ ಹೊರಬರಬೇಕು. ಅಂತಹವರ ಮೇಲೆ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲೇಬೇಕು. ಆರೋಪ–ಪ್ರತ್ಯಾರೋಪ ಮಾಡುತ್ತಾ ಕೂರುವ ಸಮಯ ಇದಲ್ಲ. ಕೋವಿಡ್ ಮಹಾಮಾರಿಯನ್ನು ಹೊಡೆದೋಡಿಸುವ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು.

**ವಿನೋದ್** ಕರ್ತವ್ಯ, 'ಬೆಂಗಳೂರು ಹುಡುಗರು' ತಂಡದ ಸಹ ಸಂಸ್ಥಾಪಕ

### ಪ್ರಭಾವಿಗಳಿಗಷ್ಟೇ ಮನ್ನಣೆ

ಖಾಸಗಿ ಆಸ್ಪತ್ರೆಗಳಲ್ಲಿ ಪ್ರಭಾವಿಗಳಿಗೆ ಹೆಚ್ಚಿನ ಮಣೆ ಹಾಕಲಾಗುತ್ತಿದೆ. ಇದರಿಂದ ಸಾಮಾನ್ಯ ಜನ ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಬೀದಿಗಳಲ್ಲಿ ಪ್ರಾಣ ಬಿಡುತ್ತಿದ್ದಾರೆ. ಇದು ನೋವಿನ ಸಂಗತಿ. ಸರ್ಕಾರವು ಖಾಸಗಿ ಆಸ್ಪತ್ರೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಜನರ ಜೀವದ ಜೊತೆ ಚೆಲ್ಲಾಟವಾಡುವುದನ್ನು ನಿಲ್ಲಿಸಬೇಕು.

**ಮುರಳೀಧರ,** ಕ್ರಿಕೆಟ್ ಕೋಚ್

### ರಾಜಕಾರಣಿಗಳೇ ಸೂತ್ರದಾರರು

ಬಹುತೇಕ ಖಾಸಗಿ ಆಸ್ಪತ್ರೆಗಳು ರಾಜಕಾರಣಿಗಳ ಒಡೆತನಕ್ಕೊಳಪಟ್ಟಿವೆ. ಹೀಗಾಗಿ ಆಸ್ಪತ್ರೆಯವರು ಹಗಲು ದರೋಡೆ ಮಾಡುತ್ತಿದ್ದರೂ ಸರ್ಕಾರ ಬಾಯಿಮುಚ್ಚಿ ಕುಳಿತಿದೆ. ಸರ್ಕಾರ ಖಾಸಗಿ ಆಸ್ಪತ್ರೆಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ.

ರಾಜಕಾರಣಿಗಳಿಗೆ ಜನರ ಹಿತಾಸಕ್ತಿ ಬೇಕಿಲ್ಲ. ಇದು ಸರ್ಕಾರಿ ಪ್ರಾಯೋಜಿತ ದರೋಡೆ. ಇದು ನಿಲ್ಲಬೇಕು.

**ಜಗದೀಶ್ ಸದಂ,** ಆಮ್ ಆದ್ಮಿ ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ

## ಸುಯಮೀಂದ್ರಾಚಾರ್ ನಿಧನ

**ರಾಯಚೂರು:** ಮಂತ್ರಾಲಯ ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರ ಆಪ್ತ ಕಾರ್ಯದರ್ಶಿ ಎಸ್.ಎನ್. ಸುಯಮೀಂದ್ರಾಚಾರ್ (54) ಅವರು ಕೋವಿಡ್‌ನಿಂದ ದೆಹಲಿಯ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು. ಇವರು ಮಠದ ಹಿಂದಿನ ಪೀಠಾಧಿಪತಿ ಶ್ರೀ ಸುಯತೀಂದ್ರ ತೀರ್ಥರ ಪೂರ್ವಾಶ್ರಮದ ಪುತ್ರ. ಮೃತರಿಗೆ ತಾಯಿ, ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ದೆಹಲಿಯಲ್ಲಿಯೇ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.


ಕಾರ್ಯಪಾಲಕ ಇಂಜಿನಿಯರ್,
**ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ**
ರಾಮನಗರ ವಿಶೇಷ ವಿಭಾಗ, ರಾಮನಗರ

ಸಂಖ್ಯೆ:ಕಾ.ಪಾ.ಅ/ಲೋ.ಬ.ಒ.ಜ.ಇ/ವಿವಿ/ರಾ/ಅ.ಟೆಂ.ಪ್ರಕಟಣೆ–01/2021–22 ದಿನಾಂಕ: 26–04–2021

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2021–22**

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2021–22ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ **ಒಟ್ಟು 01 ಸಂಖ್ಯೆ ಕಾಮಗಾರಿಯ ಅಂದಾಜು ಮೊತ್ತ ರೂ. 200.00 ಲಕ್ಷಗಳ ಕಾಮಗಾರಿಗೆ** ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ ಮುಂತಾದ ಇತರ ಮಾಹಿತಿಗಳನ್ನು **https://www.eproc.karnataka.gov.in** ವೆಬ್‌ಸೈಟ್ ಮೂಲಕ ಅಥವಾ ಸದರಿ ಕಚೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.
(1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್‌ಅನ್ನು **ದಿನಾಂಕ: 03.05.2021 ರಿಂದ 31.05.2021 ರವರೆಗೆ ಡೌನ್‌ಲೋಡ್** ಮಾಡಿಕೊಳ್ಳಬಹುದಾಗಿರುತ್ತದೆ. (2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ **ದಿನಾಂಕ: 31.05.2021 ರಂದು 16.00 ಗಂಟೆಯೊಳಗೆ ಸಲ್ಲಿಸುವುದು.** (3) ಪ್ರಿ–ಬಿಡ್ ಸಭೆಯ **ದಿನಾಂಕ: 25.05.2021ರ 16.30 ಗಂಟೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 01.06.2021ರ 16.30 ಗಂಟೆ** (ಸಾಧ್ಯವಾದಲ್ಲಿ). (4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ನಂತರದಲ್ಲಿ ತಿಳಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಹಿಸನಿ/ವಾಸಾಸಂಇ/ರಾನ/40/ಯಕ್ಷಿ/2021–22 ರಾಮನಗರ ವಿಶೇಷ ವಿಭಾಗ, ರಾಮನಗರ



ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಶಿವಮೊಗ್ಗ
**ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ**

**ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)**

ಸಂ.: EE/RWSS/Dvn/SMG/AE-II/JJM/E-Proc/2021-22/159 ದಿನಾಂಕ: 29.04.2021

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯ 2021–22ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಮುಂದುವರೆದ ಕಾಮಗಾರಿಗಳಲ್ಲಿ ಪ್ರತಿ ಮನೆ ಮನೆಗಳಿಗೆ ನಳ ಸಂಪರ್ಕದ ಮೂಲಕ ನೀರು ಸರಬರಾಜು ಮಾಡುವ ಅಂದಾಜು ಮೊತ್ತ ರೂ. 18.98 ಲಕ್ಷಗಳಿಂದ ರೂ. 151.53 ಲಕ್ಷಗಳವರೆಗಿನ ಶಿವಮೊಗ್ಗ ತಾಲ್ಲೂಕಿನ 01 ಕಾಮಗಾರಿ ಮತ್ತು ಭದ್ರಾವತಿ ತಾಲ್ಲೂಕಿನ 03 ಕಾಮಗಾರಿಗಳಿಗೆ, ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್‌ಅನ್ನು (STANDARD TENDER DOCUMENTS For E-Procurement of work KW-2&3)ನ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ 2020–2025 ರವರೆಗೆ ನೋಂದಾಯಿಸಿ ಚಾಲ್ತಿಯಲ್ಲಿರುವ (3ನೇ ದರ್ಜೆ ಮತ್ತು ಮೇಲ್ಪಟ್ಟು) ಅಧಿಕೃತ ಗುತ್ತಿಗೆದಾರರಿಂದ ಏಕ ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal website https://www.eproc.karnataka.gov.in ನಲ್ಲಿ ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.
(1) ಇ–ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 04.05.2021, 05.05.2021, 12.05.2021 ಸಂಜೆ 5.30 ಗಂಟೆಯುವರೆಗೆ, (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.05.2021, 15.05.2021ರ ಬೆಳಿಗ್ಗೆ 11.30ಗಂಟೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.05.2021, 08.05.2021, 18.05.2021ರ ಬೆಳಿಗ್ಗೆ 11.30 ಗಂಟೆ, (4) ಕಾಲಾವಧಿ: 60 ದಿನಗಳು

ನಂತರ ಇನ್ನಿತರೆ ನಿಬಂಧನೆಗಳು, ಫಾರಂ ಫೀ & ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ಅಂತರ್ಜಾಲದ ವೆಬ್‌ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನವರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಾ.ಸಾ.ಸಂ.ಇ./ಶಿ/ನಂ.156–04/ಝೇಂಕಾರ್/2021–22 ಗ್ರಾ. ಕು. ನೀ & ನೈ ವಿಭಾಗ, ಶಿವಮೊಗ್ಗ



ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ:ಕಾಇಂ/ಪಂರಾಇಂವಿ/ತುಮ/ಜೆಇ–1/ಟೆಂಡರ್/2021–22 ದಿನಾಂಕ: 30.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–02/2021–22
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ–ದ್ವಿಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560 025, ದೂರವಾಣಿ: 080–22485867, 080–22485927) ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ **2019–20 ಸಾಲಿನ 3054 ಲಂಪ್‌ಸಮ್ ಅನುದಾನ ಯೋಜನೆಯಡಿಯ** ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ–**ಪ್ರೊಕ್ಯೂರ್‌ಮೆಂಟ್ ಮೂಲಕ** ಮಾತ್ರ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: **06.05.2021** ರಿಂದ **20.05.2021** ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸ ಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟ್ಟು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.
DIPR/TUM/41/MCA/2021-22



ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ:ಕಾಇಂ/ಪಂರಾಇಂವಿ/ತುಮ/ಜೆಇ–1/ಟೆಂಡರ್/2021–22 ದಿನಾಂಕ: 22.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–01/2021–22
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ–ದ್ವಿಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560 025, ದೂರವಾಣಿ: 080–22485867, 080–22485927) ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ **2018–19 ಸಾಲಿನ 5054ರಸ್ತೆ ಮತ್ತು ಸೇತುವೆ ನಿರ್ಮಾಣ ಯೋಜನೆಯಡಿಯ** ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ–**ಪ್ರೊಕ್ಯೂರ್‌ಮೆಂಟ್ ಮೂಲಕ** ಮಾತ್ರ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: **26.04.2021** ರಿಂದ **10.05.2021** ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸ ಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟ್ಟು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.
DIPR/TUM/37/MCA/2021-22


10 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ • ಬಳ್ಳಾರಿ ಶಾಸಕನ ಪುತ್ರನಿಗೆ ಸೋಲು

# ಬಂಡಾಯ ಅಭ್ಯರ್ಥಿಗಳ ಗೆಲುವಿನ ಓಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ 10 ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮುನ್ನಡೆ ಸಾಧಿಸಿದೆ.

ಕಾಂಗ್ರೆಸ್ ಪಕ್ಷದ ಟಿಕೆಟ್ ಸಿಗದೇ ಪಕ್ಷೇತರರಾಗಿ ಕಣಕ್ಕಿಳಿದಿದ್ದ ಐದು ಮಂದಿ ಬಳ್ಳಾರಿಯಲ್ಲಿ, ಚಿಕ್ಕಬಳ್ಳಾಪುರದಲ್ಲಿ ಮೂವರು ಗೆಲುವಿನ ನಗೆ ಬೀರಿದ್ದಾರೆ. ಸಿ.ಎಂ. ತವರಿನಲ್ಲೇ ಬಿಜೆಪಿಗೆ ಮುಖಭಂಗವಾಗಿದೆ.

ಬಳ್ಳಾರಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಲಭಿಸಿದ್ದು, ಬಿಜೆಪಿ ಹಿನ್ನಡೆ ಅನುಭವಿಸಿದೆ. ಕಾಂಗ್ರೆಸ್ ಟಿಕೆಟ್ ದೊರಕದೆ ಪಕ್ಷೇತರರಾಗಿ ಸ್ಪರ್ಧಿಸಿದ್ದ ಐವರು ಕೂಡ ಪಾಲಿಕೆಯ ಮೆಟ್ಟಿಲು ಹತ್ತಿದ್ದಾರೆ.

**ಶಾಸಕನ ಪುತ್ರನಿಗೆ ಸೋಲು:** ಬಳ್ಳಾರಿಯಲ್ಲಿ 18ನೇ ವಾರ್ಡ್‌ನಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಶಾಸಕ ಜಿ.ಸೋಮಶೇಖರ ರೆಡ್ಡಿ ಅವರ ಪುತ್ರ ಜಿ.ಶ್ರವಣಕುಮಾರ್ ರೆಡ್ಡಿ ಅವರು ಕಾಂಗ್ರೆಸ್ ಅಭ್ಯರ್ಥಿ ಎದುರು 133 ಮತಗಳ ಅಂತರದಿಂದ ಸೋತರು.

ಶಿವಮೊಗ್ಗ ಜಿಲ್ಲೆಯಲ್ಲಿ ಚುನಾವಣೆಗೆ ಮುನ್ನ ನಡೆದಿದ್ದ ಕಬಡ್ಡಿ ಪಂದ್ಯಾವಳಿಯ ಗಲಾಟೆ, ಶಾಸಕ ಸಂಗಮೇಶ್ವರ ಮತ್ತು ಅವರ ಕುಟುಂಬದ ಸದಸ್ಯರ ಮೇಲೆ ಪ್ರಕರಣ ದಾಖಲು ಹಿನ್ನೆಲೆಯಲ್ಲಿ ಕಾಂಗ್ರೆಸ್ ನಗರದಲ್ಲಿ ಆಂದೋಲನ ನಡಸಿತ್ತು. ಈ ಹಿನ್ನೆಲೆಯಲ್ಲಿ ಚುನಾವಣೆ ಕುತೂಹಲ ಮೂಡಿಸಿತ್ತು.

**ಬಿಜೆಪಿ ಅಧಿಪತ್ಯ ಮುಕ್ತಾಯ:** ತೀರ್ಥಹಳ್ಳಿ ಪಟ್ಟಣ ಪಂಚಾಯಿತಿಯ 15 ಸ್ಥಾನಗಳಲ್ಲಿ ಕಾಂಗ್ರೆಸ್ 9, ಬಿಜೆಪಿ 6 ಸ್ಥಾನ ಗಳಿಸಿವೆ. ಆ ಮೂಲಕ ಎರಡೂವರೆ ದಶಕದ ಬಿಜೆಪಿ ಅಧಿಪತ್ಯ ಮುಗಿದಿದೆ. ಸಿ.ಎಂ ತವರು ಜಿಲ್ಲೆಯಲ್ಲಿ ಬಿಜೆಪಿಗೆ ಮುಖಭಂಗವಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರ ಸ್ಥಳೀಯ ಸಂಸ್ಥೆಯಲ್ಲಿ ಎಂಟು ವರ್ಷಗಳ ನಂತರ ಚುನಾವಣೆ ನಡೆದಿದ್ದು, ಜೆಡಿಎಸ್ ಜಯಭೇರಿ ಬಾರಿಸಿದೆ.

ಮೀಸಲಾತಿ ವಿಚಾರದಲ್ಲಿ ಸದಸ್ಯರು ಪದೇ ಪದೇ ನ್ಯಾಯಾಲಯಕ್ಕೆ ಹೋಗಿದ್ದರಿಂದ ಅವಧಿ ಮುಗಿದರೂ ಚುನಾವಣೆ ನಡೆದಿರಲಿಲ್ಲ.

ಹಾಸನ ಜಿಲ್ಲೆ ಬೇಲೂರು ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುವುದು ನಿಶ್ಚಿತ. ಕಳೆದ ಬಾರಿ ಅಧಿಕಾರದಲ್ಲಿದ್ದ ಜೆಡಿಎಸ್‌ಗೆ ಕೇವಲ ಐದು ಸ್ಥಾನ ದಕ್ಕಿದೆ. ಬಿಜೆಪಿಗೆ ಒಂದು ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

‘ಈ ಚುನಾವಣೆ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಜನರು ಕೋವಿಡ್‌ನಿಂದ ಸಾಯುವುದನ್ನು ತಪ್ಪಿಸುವ ಕಡೆ ಗಮನ ಹರಿಸಿದ್ದೆ’ ಎಂದು ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಹೇಳಿದರು.

ರಾಮನಗರ ನಗರಸಭೆಯಲ್ಲಿ ಕಾಂಗ್ರೆಸ್ ಹಾಗೂ ಚನ್ನಪಟ್ಟಣದಲ್ಲಿ ಜೆಡಿಎಸ್ ಅತಿಹೆಚ್ಚು ಸ್ಥಾನ ಗಳಿಸಿ ಅಧಿಕಾರ ಹಿಡಿಯುವತ್ತ ಸಾಗಿವೆ.

ಚನ್ನಪಟ್ಟಣದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಕೈ ಮೇಲಾಗಿದ್ದು, ಸಿ.ಪಿ.ಯೋಗೇಶ್ವರ್ ಮುಖಭಂಗ ಅನುಭವಿಸಿದ್ದಾರೆ. ರಾಮನಗರದಲ್ಲಿ ಬಿಜೆಪಿಗೆ ಖಾತೆ ತೆರೆಯಲೂ ಆಗಿಲ್ಲ.

**ಬೀದರ್ ನಗರಸಭೆ ಅತಂತ್ರ:** ಬೀದರ್ ನಗರಸಭೆ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರಕಿಲ್ಲ.

15 ಸ್ಥಾನ ಪಡೆಯುವ ಮೂಲಕ ಕಾಂಗ್ರೆಸ್ ದೊಡ್ಡಪಕ್ಷವಾಗಿ ಹೊರಹೊಮ್ಮಿದೆ.

35 ವಾರ್ಡ್‌ಗಳಿದ್ದು, ಪ್ರಕರಣ ನ್ಯಾಯಾಲಯದಲ್ಲಿರುವ ಕಾರಣ ಎರಡು ವಾರ್ಡ್‌ಗಳಿಗೆ ಚುನಾವಣೆ ನಡೆದಿಲ್ಲ. ವಾರ್ಡ್ ಸಂಖ್ಯೆ 28ರ ಸದಸ್ಯ ಸ್ಥಾನಕ್ಕೆ ಬಿಜೆಪಿ ಸದಸ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಕೋವಿಡ್‌ನಿಂದ ಮೃತಪಟ್ಟಿದ್ದ ಕಾಂಗ್ರೆಸ್ ಅಭ್ಯರ್ಥಿಗೆ ಜಯ

ಲೀಲಾ

**ರಾಮನಗರ:** ಕೋವಿಡ್‌ನಿಂದ ಗುರುವಾರ ಮೃತಪಟ್ಟಿದ್ದ ರಾಮನಗರ ನಗರ ಸಭೆಯ 4ನೇ ವಾರ್ಡಿನ ಕಾಂಗ್ರೆಸ್ ಅಭ್ಯರ್ಥಿ ಲೀಲಾ ಗೋವಿಂದರಾಜು ಭಾರಿ ಅಂತರದಿಂದ ಗೆಲುವು ಕಂಡಿದ್ದಾರೆ.

ಲೀಲಾ ತಮ್ಮ ಪ್ರತಿಸ್ಪರ್ಧಿ ಜೆಡಿಎಸ್‌ನ ಅನಸೂಯ ಅವರನ್ನು 810 ಮತಗಳ ಅಂತರದಿಂದ ಮಣಿಸಿದ್ದಾರೆ. ಆದರೆ, ಫಲಿತಾಂಶಕ್ಕೆ ಮುಂಚೆಯೇ ಲೀಲಾ ಮೃತಪಟ್ಟಿದ್ದು, ಅವರ ಮನೆಯಲ್ಲೀಗ ಸಂಭ್ರಮದ ಬದಲಿಗೆ ಶೋಕ ಆವರಿಸಿದೆ.

## ಸ್ಯಾನಿಟೈಸ್ ಮಾಡಿ ವಿಜಯೋತ್ಸವ!

**ಮಡಿಕೇರಿ:** ನಗರಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದೆ. 23 ವಾರ್ಡ್‌ಗಳ ಪೈಕಿ, 16ರಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದು, ಪಕ್ಷ ಅಧಿಕಾರ ಉಳಿಸಿಕೊಂಡಿದೆ.

ಮಡಿಕೇರಿಯಲ್ಲಿ ಕೋವಿಡ್ ಪ್ರಕರಣಗಳು ದಿನೇ ದಿನೇ ಏರಿಕೆ ಆಗುತ್ತಿವೆ. ಗೆದ್ದರೂ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರಿಗೆ ಸಂಭ್ರಮಿಸುವ ಅವಕಾಶ ಇರಲಿಲ್ಲ. ಆದರೆ, ವಾರ್ಡ್ 12ರಲ್ಲಿ ಎಸ್‌ಡಿಪಿಐನಿಂದ ಸ್ಪರ್ಧಿಸಿ ಜಯಗಳಿಸಿದ ಅಬ್ದುಲ್ ಬಶೀರ್, ವಾರ್ಡ್‌ನಲ್ಲಿ ಸ್ಯಾನಿಟೈಸ್ ಮಾಡಿಸಿ ವಿಜಯೋತ್ಸವ ಆಚರಿಸಿದರು. ಜನರಲ್ಲಿ ಜಾಗೃತಿ ಮೂಡಿಸಿ ಗಮನ ಸೆಳೆದರು.

## ಬಳ್ಳಾರಿ ಪಾಲಿಕೆಗೆ ಅತಿ ಕಿರಿಯ ಸದಸ್ಯೆ

ಡಿ. ತ್ರಿವೇಣಿ

**ಬಳ್ಳಾರಿ:** ಇಲ್ಲಿನ ಮಹಾನಗರ ಪಾಲಿಕೆ ಸದಸ್ಯೆಯಾಗಿ 4ನೇ ವಾರ್ಡ್‌ನಿಂದ ಆಯ್ಕೆಯಾಗಿರುವ ಕಾಂಗ್ರೆಸ್‌ನ ಡಿ.ತ್ರಿವೇಣಿ, ಸದಸ್ಯರ ಪೈಕಿ ಅತಿ ಕಿರಿಯರು.

22 ವರ್ಷ ವಯಸ್ಸಿನ ಅವರು ದ್ವಿತೀಯ ಪಿಯುಸಿವರೆಗೂ ವಿದ್ಯಾಭ್ಯಾಸ ಮಾಡಿದ್ದಾರೆ. ಅವರ ತಾಯಿ ಸುಶೀಲಾಬಾಯಿ ಈ ಹಿಂದಿನ ಅವಧಿಯಲ್ಲಿ 6ನೇ ವಾರ್ಡ್‌ನಿಂದ ಆಯ್ಕೆಯಾಗಿ, ಕೆಲ ಕಾಲ ಮೇಯರ್ ಹುದ್ದೆಯನ್ನೂ ನಿಭಾಯಿಸಿದ್ದರು. ತಾಯಿ ಮಾಡಿರುವ ಜನಪರ ಸೇವೆಯಿಂದ ತಾವು ಗೆದ್ದಿರುವುದಾಗಿ ತ್ರಿವೇಣಿ ಅಭಿಪ್ರಾಯಪಟ್ಟರು.

## ‘ಕೈ’ಗೆ ವರ: ಬಿಜೆಪಿಗೆ ಮುಖಭಂಗ

ಒಂದನೇ ಪುಟದಿಂದ

ಆದರೆ, ಕಾಂಗ್ರೆಸ್ ಶಾಸಕ ಸಂಗಮೇಶ್ವರ ಮತ್ತು ಅವರ ಕುಟುಂಬದ ಸದಸ್ಯರ ಮೇಲೆ ಪ್ರಕರಣ ದಾಖಲಿಸಿದ್ದನ್ನು ವಿರೋಧಿಸಿ ಜಿಲ್ಲೆಯಲ್ಲಿ ಆ ಪಕ್ಷ ದೊಡ್ಡ ಆಂದೋಲನವನ್ನೇ ನಡೆಸಿತ್ತು.

ಇದು ಕಾಂಗ್ರೆಸ್‌ಗೆ ವರವಾಗಿ ಪರಿಣಮಿಸಿದಂತಾಗಿದೆ. ಬಿಜೆಪಿ ಶಾಸಕರಿರುವ ತೀರ್ಥಹಳ್ಳಿಯಲ್ಲೂ ಕಾಂಗ್ರೆಸ್ ಗೆಲುವು ಸಾಧಿಸಿದೆ.

ಬಳ್ಳಾರಿಯಲ್ಲಿ ಬಿಜೆಪಿ ಶಾಸಕ ಸೋಮಶೇಖರ ರೆಡ್ಡಿ ಅವರ ಪುತ್ರ ಶ್ರವಣ್ ಕುಮಾರ್ ರೆಡ್ಡಿ ಸೋಲು ಅನುಭವಿಸಿದ್ದಾರೆ.

ರೆಡ್ಡಿ ಸಹೋದರರ ಪ್ರಭಾವವಿರುವ ಜಿಲ್ಲೆಯಲ್ಲಿ ಒಮ್ಮೆ ಮಾತ್ರ ಅಧಿಕಾರ ಹಿಡಿಯಲು ಯಶಸ್ವಿಯಾಗಿತ್ತು. ಘಟಾನುಘಟಿ ನಾಯಕರುಗಳಿದ್ದರೂ ಇಲ್ಲಿ ಬೇರು ಬಿಡಲು ಕಮಲ ಪಕ್ಷಕ್ಕೆ ಸಾಧ್ಯವಾಗಿಲ್ಲ.

# ಕೋವಿಡ್ ಭಯ: ಜೆಸಿಬಿಯಲ್ಲಿ ಆಸ್ಪತ್ರೆಗೆ ಮಹಿಳೆಯ ಶವ

ಪ್ರಜಾವಾಣಿ ವಾರ್ತೆ

ಚಿಂತಾಮಣಿ ತಾಲ್ಲೂಕಿನ ಕುರುಟಹಳ್ಳಿಯಲ್ಲಿ ಅನಾರೋಗ್ಯದಿಂದ ಮೃತಪಟ್ಟ ಮಹಿಳೆಯ ಶವವನ್ನು ಜೆಸಿಬಿಯಲ್ಲಿ ಸಾಗಿಸುತ್ತಿರುವುದು

**ಚಿಂತಾಮಣಿ:** ತಾಲ್ಲೂಕಿನ ಕುರುಟಹಳ್ಳಿಯಲ್ಲಿ ಗುರುವಾರ ಅನಾರೋಗ್ಯಪೀಡಿತ ಮಹಿಳೆ ರಸ್ತೆಬದಿಯಲ್ಲಿ ಮೃತಪಟ್ಟರು. ಕೊರೊನಾ ಭಯದಿಂದ ಜನರು ಹತ್ತಿರ ಸುಳಿಯದೆ ಜೆಸಿಬಿಯಲ್ಲಿ ಶವವನ್ನು ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಿ, ಅಂತ್ಯಸಂಸ್ಕಾರ ಮಾಡಿದ್ದಾರೆ.

ಚಂದ್ರಕಲಾ ಅವರು ಒಂದು ವಾರದಿಂದ ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದರು. ನಿತ್ರಾಣರಾಗಿದ್ದ ಅವರು 12 ವರ್ಷದ ಮಗಳ ತೊಡೆಯ ಮೇಲೆ ತಲೆ ಇಟ್ಟು ಮಲಗಿ ಹಾಗೆಯೇ ಸಾವನ್ನಪ್ಪಿದ್ದಾರೆ. ತಾಯಿ ಎದ್ದೇಳದೆ ಇದ್ದರಿಂದ ಮಗಳು ಅಳುತ್ತಿದ್ದುದನ್ನು ಕಂಡವರು ಗ್ರಾಮಾಂತರ ಠಾಣೆ ಪೊಲೀಸರ ಗಮನಕ್ಕೆ ತಂದಿದ್ದಾರೆ.

ಚಂದ್ರಕಲಾ ಪತಿ ಹಲವು ವರ್ಷಗಳ ಹಿಂದೆಯೇ ಮೃತಪಟ್ಟಿದ್ದಾರೆ. ನಂತರ ಗ್ರಾಮ ತೊರೆದು ಅವರು ಚಿಂತಾಮಣಿಯಲ್ಲಿ ವಾಸವಾಗಿದ್ದರು.

‘ಅಮ್ಮ ಮತ್ತು ನಾನು ಬಾಗೇಪಲ್ಲಿಗೆ ಕೆಲಸಕ್ಕಾಗಿ ಹೋಗಿದ್ದೆವು. ಅಲ್ಲಿ ಕೆಲಸ ಸಿಗದ ಕಾರಣ ವಾಪಸ್ ಕುರುಟಹಳ್ಳಿಗೆ ಬಂದೆವು. ಆ ವೇಳೆಗೆ ಅಮ್ಮ ನಿತ್ರಾಣಗೊಂಡರು. ರಾತ್ರಿಯಲ್ಲಾ ರಸ್ತೆಬದಿಯಲ್ಲಿಯೇ ಇದ್ದೆವು’ ಎಂದು ಪುತ್ರಿ ತಿಳಿಸಿದರು.

ಮೃತ ಮಹಿಳೆಗೆ ಹತ್ತು ವರ್ಷದ ಪುತ್ರ ಕೂಡ ಇದ್ದು, ಸಂಬಂಧಿಕರ ಮನೆಯಲ್ಲಿದ್ದಾನೆ. ಪುತ್ರಿಯನ್ನು ಈಗ ಆ ಸಂಬಂಧಿಕರೇ ಕರೆದೊಯ್ದಿದ್ದಾರೆ.

## ಬಿರುಗಾಳಿ, ಮಳೆಗೆ ಬಾಳೆ ಬೆಳೆ ಹಾಳು

**ಹೊಸಪೇಟೆ:** ತಾಲ್ಲೂಕಿನಲ್ಲಿ ಶುಕ್ರವಾರ ನೂರಾರು ಎಕರೆ ಬಾಳೆ ಹಾಳಾಗಿದೆ. ಗುರುವಾರ ಸಂಜೆ ಭಾರಿ ಬಿರುಗಾಳಿ ಜೊತೆಗೆ ಗಂಟೆಗೂ ಹೆಚ್ಚು ಸಮಯ ಸುರಿದ ಮಳೆಗೆ ತಾಲ್ಲೂಕಿನ ಹಂಪಿ, ಕಮಲಾಪುರ, ಕಡ್ಡಿರಾಂಪುರ, ವೆಂಕಟಾಪುರ ಹಾಗೂ ಬುಕ್ಕಸಾಗರದಲ್ಲಿ ನೂರಾರು ಎಕರೆ ಏಲಕ್ಕಿ, ಸುಗಂಧಿ ಬಾಳೆ ನೆಲಕಚ್ಚಿದೆ.

‘ಹತ್ತು ಎಕರೆ ಜಮೀನಿನಲ್ಲಿ ಬೆಳೆ ಬಂದಿತ್ತು. ಶೇ 40ರಷ್ಟು ಬಾಳೆ ನೆಲಕಚ್ಚಿದೆ. ಹೆಚ್ಚು ಕಮ್ಮಿ ಎಲ್ಲ ಬಾಳೆ ಬೆಳೆಗಾರರಿಗೆ ನಷ್ಟ ಉಂಟಾಗಿದೆ’ ಎಂದು ತಾಲ್ಲೂಕಿನ ಹಂಪಿ ರೈತ ವಿಶ್ವನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

**ಮಹಿಳೆ ಸಾವು:** ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಬಳೂಟಗಿಯಲ್ಲಿ ಗುರುವಾರ ರಾತ್ರಿ ಮಳೆ ಸುರಿದಿದ್ದು, ಮನೆಯ ಪತ್ರಾಸ್ ತಾಗಿ ಗಾಯಗೊಂಡಿದ್ದ ಶಿವಲೀಲವ್ವ ಶೇಖರಗೌಡ ದುಗ್ಗಲದ್ ಎಂಬ ಮಹಿಳೆ ಮೃತಪಟ್ಟಿದ್ದಾರೆ.

# ಕೋವಿಡ್: ಸರ್ಕಾರ ಎಡವಿದ್ದೆಲ್ಲಿ?

**ಬೆಂಗಳೂರು:** ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಿಕೆ ತಡೆಯುವಲ್ಲಿ ಸರ್ಕಾರ ಎಡವಿದ್ದೆಲ್ಲಿ? ಈಗ ತುರ್ತಾಗಿ ಏನು ಮಾಡಬೇಕಿದೆ? ಆರೋಗ್ಯ ವ್ಯವಸ್ಥೆಯಲ್ಲಿ ಆಗಬೇಕಿರುವ ಸುಧಾರಣೆಗಳೇನು? ಎಂಬುದರ ಕುರಿತು ಜನಾಭಿಪ್ರಾಯಕ್ಕೆ ‘ಪ್ರಜಾವಾಣಿ’ ವೇದಿಕೆ ಕಲ್ಪಿಸಿದೆ. ಇದಕ್ಕೆ ಸ್ಪಂದಿಸಿರುವ ಓದುಗರು ಸಲಹೆ ನೀಡಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

### ಪಾಠ ಕಲಿಯದ ಸರ್ಕಾರಗಳು

ಮೊದಲ ಅಲೆಯಲ್ಲಿ ಆಡಳಿತ ಪಾಠ ಕಲಿಯಲಿಲ್ಲ. ಭವಿಷ್ಯತ್ತಿನ ಸಿದ್ಧತೆಗಳಿಗೆ ಅಣಿಯಾಗಲಿಲ್ಲ. ಜನರ ಆರೋಗ್ಯ ಕಾಳಜಿ ವಹಿಸುವ ನಾಯಕರ ಕೊರತೆ ಮತ್ತು ದೂರದೃಷ್ಟಿಯ ಕೊರತೆ ನಮ್ಮ ಇಂದಿನ ಬಹುದೊಡ್ಡ ಸಂಖ್ಯೆಯ ಜೀವ ಹಾನಿಗಳಿಗೆ ಕಾರಣ.

ಅಧಿಕಾರ ಹಟದ ಚುನಾವಣೆ, ಕುಂಭಮೇಳ, ಧಾರ್ಮಿಕ ಜಾತ್ರೆಗಳಿಗೆ ಕಡಿವಾಣ ಹಾಕದ ಸರ್ಕಾರಗಳು ಘೋರ ತಪ್ಪೆಸಗಿವೆ. ಸಾವುಗಳು ಮನೆಯ ಬಾಗಿಲು ತಟ್ಟುತ್ತಿವೆ. ಸರ್ಕಾರದ ಹೊಣೆಯನ್ನು ಪ್ರಶ್ನಿಸುತ್ತಲೇ ಸಾರ್ವಜನಿಕ ವಲಯ ಜಾಗೃತಗೊಳ್ಳುವುದು ಮುಖ್ಯ.

**ಡಿ.ಎಸ್.ಚೌಗಲೆ,** ನಾಟಕಕಾರ

### ಮುಂದಿನ ಅಲೆಗೆ ಸಜ್ಜಾಗಿ

ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಿಕೆಗೆ ಸರ್ಕಾರ ಹಾಗೂ ನಾವುಗಳೆಲ್ಲ ಮೈಮರೆತಿದ್ದೇ ಕಾರಣ. ಮೊದಲ ಅಲೆಯಲ್ಲಿ ಅನುಭವಿಸಿದ ಅವಾಂತರಗಳನ್ನು ಕಂಡೂ ಸರ್ಕಾರ ಸಜ್ಜಾಗಲಿಲ್ಲ. ಅಲೆಗಳು ಇನ್ನೂ ಇರಬಹುದು. ಮೂರನೇ ಅಲೆಗಾದರೂ ಅಗತ್ಯ ಕ್ರಮ ಕೈಗೊಂಡು ಸಜ್ಜಾಗಿರಿ.

**ರೂಪಾ,** ದಾವಣಗೆರೆ

### ಸಮಾರಂಭಗಳ ಪ್ರತಿಫಲ

ವಿಜ್ಞಾನಿಗಳು ಹಾಗೂ ತಜ್ಞರ ಎಚ್ಚರಿಕೆಗೆ ಕವಡೆ ಕಾಸಿನ ಕಿಮ್ಮತ್ತು ನೀಡದ ಸರ್ಕಾರ, ಕೆಲ ತಿಂಗಳಿಂದ ನಡೆಸಿದ ಜನ ಸಂಪರ್ಕ ಸಭೆ, ಜಾಥಾ, ಜಾತ್ರೆ, ಚುನಾವಣಾ ಪ್ರಚಾರ, ಲೆಕ್ಕವಿಲ್ಲದಷ್ಟು ಸಮಾರಂಭಗಳ ಪ್ರತಿಫಲವೇ ಕೊರೊನಾ ಎರಡನೇ ಅಲೆ. ಕೊರೊನಾ ಯುದ್ಧಕ್ಕಿಂತ ಚುನಾವಣಾ ಸಮರಕ್ಕೆ ಹೆಚ್ಚು ಆದ್ಯತೆ ನೀಡಿ ಸೋಂಕು ಹರಡಿಸಿದ್ದಾರೆ. ಈಗ ಶಸ್ತ್ರಾಭ್ಯಾಸ ನಡೆಸಿದರೆ ಏನು ಪ್ರಯೋಜನ?

**ರವಿ,** ಮೈಸೂರು

### ಸದನದಲ್ಲಿ ಹರಟೆ ಬೇಕಿತ್ತಾ?

ಕಳೆದ ವರ್ಷ ಕೊರೊನಾ ಹತೋಟಿಯಲ್ಲಿ ವಿಶ್ವಕ್ಕೆ ಮಾದರಿಯಾಗಿದ್ದ ದೇಶವಿಂದು ಎರಡನೇ ಅಲೆ ನಿಭಾಯಿಸುವಲ್ಲಿ ಎಡವಿದೆ. ಎಲ್ಲರ ಟೀಕೆಗಳಿಗೂ ಗುರಿಯಾಗಿದೆ. ಅಲೆಗೂ ಮುನ್ನ ಎಚ್ಚೆತ್ತುಕೊಂಡಿದ್ದರೆ ಜನರ ಪ್ರಾಣ ಉಳಿಯುತ್ತಿತ್ತು. ಕಲಾಪಗಳಲ್ಲಿ ಬೇಡದ ವಿಷಯಗಳ ಕುರಿತು ಹರಟೆ ಮಾಡುವ ಬದಲಿಗೆ ಕೊರೊನಾ ಎದುರಿಸುವ ಕುರಿತು ಚರ್ಚಿಸಬಹುದಿತ್ತು. ದೇಶದಲ್ಲೇ ಸಮಸ್ಯೆ ಇಟ್ಟುಕೊಂಡು ಪರದೇಶಗಳಿಗೆ ಲಸಿಕೆ ರವಾನಿಸಿದ್ದರಿಂದ ಇಂದು ಜನರೆಲ್ಲ ಪರದಾಡುವಂತಾಗಿದೆ.

**ಸೌಮ್ಯಾ,** ಕಾರ್ಕಳ

### ಚುನಾವಣೆ ನಿಲ್ಲಿಸಬೇಕಿತ್ತು

ಮೊದಲ ಅಲೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದ ಕಾರಣ ಎರಡನೇ ಅಲೆ ಈ ದುರಂತ ತೋರಿದೆ. ಇದನ್ನು ಹತೋಟಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಬೇಕಿತ್ತು.

ನಾಯಕರು ಚುನಾವಣೆಯಲ್ಲಿ ಮಗ್ನರಾಗಿ, ಅಬ್ಬರದ ಪ್ರಚಾರದಲ್ಲೇ ತೊಡಗಿದರು. ಈಗ ಮೊಸಳೆ ಕಣ್ಣೀರು ಹಾಕಿ ಜನರನ್ನು ತೆಪ್ಪಗಾಗಿಸುತ್ತಿದ್ದಾರೆ. ಚುನಾವಣೆಗಳನ್ನು ಮುಂದೂಡಿದ್ದರೆ, ಈ ಗತಿ ಬರುತ್ತಿರಲಿಲ್ಲ.

**ಅಂಕಿತಾ,** ಹಾಸನ

### ದೂರದೃಷ್ಟಿ ಇಲ್ಲದ ಪ್ರಧಾನಿ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವ ಪ್ರತಿನಿಧಿಗೂ ದೂರದೃಷ್ಟಿ ಇದ್ದಂತೆ ಕಾಣುತ್ತಿಲ್ಲ. ಚುನಾವಣೆಯಲ್ಲಿ ಗೆಲ್ಲುವುದೊಂದೇ ಇವರ ಕೆಲಸ ಅಂದುಕೊಂಡಿದ್ದಾರೆ. ಬಹುಮತ ಪಡೆದು ಸರ್ಕಾರ ರಚಿಸಿದ ಮೇಲಾದರೂ ಪ್ರಜೆಗಳ ಹಿತ ಕಾಯಬೇಕೆಂಬುದು ಯಾರೊಬ್ಬರಲ್ಲೂ ಇಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರಂತೂ ಚುನಾವಣಾ ಪ್ರಚಾರದ ರಾಯಭಾರಿಯಾಗಿದ್ದಾರೆ. ಚುನಾವಣೆಗಳೇ ಇಂದಿನ ಈ ದುಸ್ಥಿತಿಗೆ ಕಾರಣ. ಪ್ರಧಾನಿ ಪ್ರಚಾರಕ್ಕಷ್ಟೇ ತನ್ನ ಜವಾಬ್ದಾರಿ ಸೀಮಿತ ಗೊಳಿಸಿರುವುದು ವಿಪರ್ಯಾಸ.

**ಕಾರ್ತಿಕ್,** ಮೈಸೂರು


ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಪಂಚರಾಜ್ಯಗಳ ಚುನಾವಣಾ ಫಲಿತಾಂಶ
ವಿಶ್ಲೇಷಣೆ ಮತ್ತು ಸಂವಾದ
ಪಾಲ್ಗೊಳ್ಳುವವರು
ಭಾನುವಾರ, 02-05-2021, ಸಮಯ: ಬೆಳಿಗ್ಗೆ 11 ರಿಂದ 12
ಡಿ.ಉಮಾಪತಿ, ಹಿರಿಯ ಪತ್ರಕರ್ತರು, ದೆಹಲಿ
ಪಿ.ರಾಮಕೃಷ್ಣ ಉಪಾಧ್ಯಾಯ, ಹಿರಿಯ ಪತ್ರಕರ್ತರು, ಬೆಂಗಳೂರು
ಭಾನುವಾರ, 02-05-2021, ಸಮಯ: ಸಂಜೆ 5ರಿಂದ 6
ಪ್ರೊ.ಸಂದೀಪ್ ಶಾಸ್ತ್ರಿ, ಉಪಕುಲಪತಿ, ಲೇಕ್‌ಸಿಟಿ ಯೂನಿವರ್ಸಿಟಿ, ಭೋಪಾಲ್, ರಾಜಕೀಯ ವಿಶ್ಲೇಷಕರು
ಡಾ.ಪುರುಷೋತ್ತಮ ಬಿಳಿಮಲೆ, ವಿಶ್ರಾಂತ ಪ್ರಾಧ್ಯಾಪಕರು, ಜೆಎನ್‌ಯು, ದೆಹಲಿ
fb.com/prajavani.net



ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಕರ್ನಾಟಕ- ಉಪಚುನಾವಣೆ
ಫಲಿತಾಂಶ: ಯಾರ ಗೆಲುವು–ಯಾರತ್ತ ಒಲವು
ಪಾಲ್ಗೊಳ್ಳುವವರು
ಜಿ.ಎನ್. ನಾಗರಾಜ್, ಸಿಪಿಎಂ ನಾಯಕ
ಎ. ನಾರಾಯಣ, ಪ್ರಾಧ್ಯಾಪಕ, ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯ
ಅಶ್ವತ್ಥನಾರಾಯಣಗೌಡ, ಪ್ರಧಾನ ಕಾರ್ಯದರ್ಶಿ, ಬಿಜೆಪಿ ರಾಜ್ಯ ಘಟಕ
ಭಾನುವಾರ, 02-05-2021
ಸಮಯ: ಮಧ್ಯಾಹ್ನ 3.30ರಿಂದ 4.30
fb.com/prajavani.net

ಜಾಲಹಳ್ಳಿ ಸಮೀಪದ ಮೂಡಲಗುಂಡ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಮಕ್ಕಳು ಕೆಲಸ ಮಾಡುತ್ತಿರುವುದು

## ಉದ್ಯೋಗ ಖಾತ್ರಿ ಕೆಲಸಕ್ಕೆ ಮಕ್ಕಳ ಬಳಕೆ: ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

**ಜಾಲಹಳ್ಳಿ (ರಾಯಚೂರು ಜಿಲ್ಲೆ):** ಪಲಕನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೂಡಲಗುಂಡದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಯಲ್ಲಿ ಮಕ್ಕಳು ಕೆಲಸ ಮಾಡುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

‘ಕೆರೆಗೆ ಕಲ್ಲು ಚಾಪ್ ಕಟ್ಟುವ ಕಾಮಗಾರಿಯಲ್ಲಿ ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳಲಾಗಿದೆ. ಬಾಲ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಉಲ್ಲಂಘನೆಯಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

‘ಒಟ್ಟು ₹10 ಲಕ್ಷ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಅದರಲ್ಲಿ ಕೂಲಿಕಾರ್ಮಿಕರಿಗೆ ₹2 ಲಕ್ಷ ವೆಚ್ಚ ಮಾಡಲಾಗುತ್ತಿದೆ. ಜಾಬ್ ಕಾರ್ಡ್ ಹೊಂದಿರುವ 40 ಮಂದಿ ಕೂಲಿಕಾರ್ಮಿಕರು ಇಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ. ಆದರೆ, ಬೆರಳೆಣಿಕೆಯಷ್ಟು ಕಾರ್ಮಿಕರು ಹೊರತುಪಡಿಸಿದರೆ, ಉಳಿದವರೆಲ್ಲ ಮಕ್ಕಳೇ ಇದ್ದರು’ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಶಿವರಾಜ ನಾಯಕ ತಿಳಿಸಿದರು.

‘ಕಾಮಗಾರಿ ಸ್ಥಳದಲ್ಲಿ ಮಕ್ಕಳು ಇರುವುದು ಗಮನಕ್ಕೆ ಬಂದಿದ್ದು, ಅವರನ್ನು ಕೆಲಸ ಬಿಡಿಸಿ ಮನೆಗೆ ಕಳುಹಿಸಲಾಗಿದೆ’ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶರಣಬಸವ ತಿಳಿಸಿದರು.

**ನಿಧನ ವಾರ್ತೆ**

### ಮಾಜಿ ಶಾಸಕ ಮಹಮ್ಮದ್ ಲೈಕೊದ್ದಿನ್

**ಬೀದರ್:** ಮಾಜಿ ಶಾಸಕ ಮಹಮ್ಮದ್ ಲೈಕೊದ್ದಿನ್ (85) ಶುಕ್ರವಾರ ಇಲ್ಲಿ ನಿಧನರಾದರು.

ಬೀದರ್ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಮೂರು ಬಾರಿ ಸ್ಪರ್ಧಿಸಿದ್ದ ಅವರು, ಒಮ್ಮೆ ಗೆಲುವು ಸಾಧಿಸಿದ್ದರು. ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ನಾಲ್ಕು ದಿನಗಳ ಹಿಂದಷ್ಟೇ ಅವರ ಪತ್ನಿ ನಿಧನರಾಗಿದ್ದರು. ಅವರಿಗೆ ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ. ನಗರದಲ್ಲಿ ಅಂತ್ಯಕ್ರಿಯೆ ನೆರವೇರಿತು.

### ಪರಬ್ರಹ್ಮೇಂದ್ರ ಸ್ವಾಮೀಜಿ



**ಬಸವನಬಾಗೇವಾಡಿ (ವಿಜಯಪುರ):** ತಾಲ್ಲೂಕಿನ ಇಂಗಳೇಶ್ವರ, ಕೂಡಲ ಸಂಗಮ, ಶಿರೂರ, ಹಂಪಿ, ಇಳಕಲ್‌ನ ಆನೆಗುಂದಿ ಪಂಚಸಿಂಹಾಸನ ಸರಸ್ವತಿ ಪೀಠ ಬ್ರಹ್ಮಾಂಡಭೇರಿ ಮಠಗಳ ಹಿರಿಯ ಯತಿ ಪರಬ್ರಹ್ಮೇಂದ್ರ ಸ್ವಾಮೀಜಿ (86) ಇಂಗಳೇಶ್ವರ ಗ್ರಾಮದಲ್ಲಿ ಗುರುವಾರ ನಿಧನರಾದರು.

ವಿಶ್ವಕರ್ಮ ಸಮಾಜದ ಧರ್ಮಗುರುಗಳಾದ ಅವರು ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ, ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ಕಲಾ ಪ್ರವಾಚಕರಾಗಿ ಕಾರ್ಯ ನಿರ್ವಹಿಸಿದ್ದರು. ಉತ್ತಮ ಚಿತ್ರಕಲಾವಿದರೂ ಆಗಿದ್ದರು.

ಅವರಿಗೆ ಏಳು ಪುತ್ರರು ಹಾಗೂ ಪುತ್ರಿ ಇದ್ದಾರೆ. ಶ್ರೀಗಳ ಅಂತ್ಯಕ್ರಿಯೆ ಗುರುವಾರ ಸಂಜೆ ಇಳಕಲ್‌ನಲ್ಲಿ ನೆರವೇರಿತು.

# ಆರೋಗ್ಯಕ್ಕೂ ರುಚಿಗೂ ಕಷಾಯ, ಸೂಪ್

ಮನಸ್ವಿ

## ಕಷಾಯ

**ಬೇಕಾಗುವ ಸಾಮಗ್ರಿಗಳು:** ಕಷಾಯ ಪುಡಿ ತಯಾರಿಸಲು: ಅರಿಸಿನ – 1 ಇಂಚು, ಒಣಶುಂಠಿ – ಅರ್ಧ ಇಂಚು, ಕೊತ್ತಂಬರಿ ಕಾಳು – 1 ಕಪ್, ಜೀರಿಗೆ – 1/2 ಕಪ್, ಕಾಳುಮೆಣಸು – 1/2 ಕಪ್, ಮೆಂತ್ಯೆ – ಸ್ವಲ್ಪ, ಲವಂಗ – 8, ಏಲಕ್ಕಿ – 2, ನೀರು – 1ಕಪ್, ಬೆಲ್ಲ – 4 ರಿಂದ 5 ತುಂಡು, ಹಾಲು – ಅರ್ಧ ಕಪ್.

**ತಯಾರಿಸುವ ವಿಧಾನ:** ಮೇಲೆ ಹೇಳಿದ ಬೆಲ್ಲ, ಹಾಲು, ನೀರು ಬಿಟ್ಟು ಉಳಿದ ಎಲ್ಲಾ ಸಾಮಗ್ರಿಗಳನ್ನು ಹುರಿದುಕೊಳ್ಳಿ. ಅದನ್ನು ತಣ್ಣಗಾಗಲು ಬಿಡಿ. ಪೂರ್ತಿ ತಣ್ಣದಾಗ ಮೇಲೆ ಮಿಕ್ಸಿಯಲ್ಲಿ ನೀರು ಸೇರಿಸದೇ ನುಣ್ಣಗೆ ಪುಡಿ ಮಾಡಿಕೊಳ್ಳಿ. ಈ ಪುಡಿಯನ್ನು ನೀರಿನಂಶ ಇಲ್ಲದ ಗಾಜಿನ ಡಬ್ಬಿಯಲ್ಲಿ ಸಂಗ್ರಹಿಸಿಡಿ. ಆಗಾಗ ಬಳಸಲು ಅನುಕೂಲವಾಗುತ್ತದೆ.

**ಕಷಾಯ ತಯಾರಿಸುವುದು:** ಒಂದು ಪಾತ್ರೆಯಲ್ಲಿ ನೀರು ಕುದಿಯಲು ಇಡಿ. ಕುದಿಯಲು ಆರಂಭಿಸಿದ ಮೇಲೆ ಅದಕ್ಕೆ ಬೆಲ್ಲ, ಅರಿಸಿನ ಪುಡಿ, ಕಷಾಯದ ಪುಡಿ, ಸ್ವಲ್ಪ ಶುಂಠಿ ಪೇಸ್ಟ್ ಸೇರಿಸಿ ಮಧ್ಯಮ ಉರಿಯಲ್ಲಿ ಕುದಿಸಿ. ನೀರು ಕುದ್ದು ಅರ್ಧಕ್ಕೆ ಬಂದ ಮೇಲೆ ಅದಕ್ಕೆ ಹಾಲು ಸೇರಿಸಿ ಕುದಿಸಿದರೆ ಕಷಾಯ ಕುಡಿಯಲು ಸಿದ್ಧ.

## ಮಿಶ್ರ ಎಲೆಗಳ ಕಷಾಯ

**ಬೇಕಾಗುವ ಸಾಮಗ್ರಿಗಳು:** ಅಮೃತಬಳ್ಳಿ ಎಲೆ – 5, ತುಳಸಿ ಎಲೆ – ಸ್ವಲ್ಪ, ಕಾಳುಮೆಣಸು – 1 ಚಮಚ, ದೊಡ್ಡಪತ್ರೆ– 4, ಒಂದೆಲಗ ಎಲೆ – 4, ಕೊತ್ತಂಬರಿ ಕಾಳು – 1 ಚಮಚ, ಜೀರಿಗೆ – 1 ಚಮಚ, ಶುಂಠಿ – 1 ತುಂಡು, ವೀಳ್ಯದೆಲೆ – 2, ಬೆಲ್ಲ – ಸ್ವಲ್ಪ, ನೀರು – 2 ಕಪ್

**ತಯಾರಿಸುವ ವಿಧಾನ:** ಬೆಲ್ಲ ಬಿಟ್ಟು ಉಳಿದ ಸಾಮಗ್ರಿಗಳನ್ನು ಸ್ವಲ್ಪ ನೀರು ಸೇರಿಸಿ ಮಿಕ್ಸಿಯಲ್ಲಿ ರುಬ್ಬಿಕೊಳ್ಳಬೇಕು. 2 ಕಪ್ ನೀರು ಕುದಿಯಲು ಇಟ್ಟು ಅದಕ್ಕೆ ಬೆಲ್ಲ ಹಾಗೂ ರುಬ್ಬಿದ ಮಿಶ್ರಣ ಸೇರಿಸಿ ಚೆನ್ನಾಗಿ ಕುದಿಸಿ ಸೋಸಿ ಕುಡಿಯಬೇಕು.

## ಕ್ಯಾರೆಟ್, ಕಿತ್ತಳೆ, ಶುಂಠಿ ಸ್ಮೂದಿ

**ಬೇಕಾಗುವ ಸಾಮಗ್ರಿಗಳು:** ಕಿತ್ತಳೆ – 1 ಹಣ್ಣು, ಕ್ಯಾರೆಟ್ – 1, ಶುಂಠಿ – 1 ಇಂಚು, ಅರಿಸಿನ – 1 ಇಂಚು, ತೆಂಗಿನಹಾಲು – 2 ಚಮಚ, ಕಾಳುಮೆಣಸು – 4 ರಿಂದ 5, ಜೇನುತುಪ್ಪ – 2 ಚಮಚ, ಹಾಲು – 1ಕಪ್

**ತಯಾರಿಸುವ ವಿಧಾನ:** ಕಿತ್ತಳೆ, ಸಿಪ್ಪೆ ತೆಗೆದ ಕ್ಯಾರೆಟ್, ಸಿಪ್ಪೆ ತೆಗೆದ ಶುಂಠಿ ಹಾಗೂ ಅರಿಸಿನ ಮಿಕ್ಸಿಗೆ ಹಾಕಿ. ಅದಕ್ಕೆ ತೆಂಗಿನಹಾಲು, ಕಾಳುಮೆಣಸು, ಜೇನುತುಪ್ಪ ಹಾಗೂ ಹಾಲು ಸೇರಿಸಿ ಚೆನ್ನಾಗಿ ರುಬ್ಬಿದರೆ ಸ್ಮೂದಿ ಸಿದ್ಧ. ಇದು ಬೇಸಿಗೆಗೆ ಉತ್ತಮ ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚಲು ಸಹಾಯಕ.

ನಳಪಾಕ

## ನಿಂಬೆ ಕೊತ್ತಂಬರಿ ಸೂಪ್

**ಬೇಕಾಗುವ ಸಾಮಗ್ರಿಗಳು:** ಎಣ್ಣೆ – 1 ಚಮಚ, ಶುಂಠಿ – 1 ಇಂಚು (ಹೆಚ್ಚಿದ್ದು), ಬೆಳ್ಳುಳ್ಳಿ – 4 ಹೆಚ್ಚಿದ್ದು, ಸ್ಪ್ರಿಂಗ್ ಈರುಳ್ಳಿ – ಕಾಲು ಕಪ್, ಕ್ಯಾರೆಟ್ – ಮುಕ್ಕಾಲು ಕಪ್, ಬಟನ್ ಅಣಬೆ – 1/2 ಕಪ್, ಹಸಿಮೆಣಸು – 1 ಹೆಚ್ಚಿದ್ದು, ಕಾಳುಮೆಣಸಿನ ಪುಡಿ – ಅಗತ್ಯವಿದ್ದಷ್ಟು, ಉಪ್ಪು – ರುಚಿಗೆ, ನೀರು – 4 ಕಪ್, ನಿಂಬೆರಸ – 2 ಟೇಬಲ್ ಚಮಚ, ಕೊತ್ತಂಬರಿ ಸೊಪ್ಪು – ಮುಕ್ಕಾಲು ಕಪ್, ಸ್ಪ್ರಿಂಗ್ ಈರುಳ್ಳಿ ಎಲೆ – 2 ಚಮಚ

**ಅಲಂಕರಿಸಲು:** ಕೊತ್ತಂಬರಿ ಸೊಪ್ಪು – 1 ಟೇಬಲ್ ಚಮಚ, ನಿಂಬೆಹಣ್ಣಿನ ಹೋಳು – 4 ತುಂಡು, ಸ್ಪ್ರಿಂಗ್ ಈರುಳ್ಳಿ ಹೆಚ್ಚಿದ್ದು – 1 ಚಮಚ.

**ತಯಾರಿಸುವ ವಿಧಾನ:** ಸ್ಪ್ರಿಂಗ್ ಈರುಳ್ಳಿ ಹಾಗೂ ಅಣಬೆಯನ್ನು ಚೆನ್ನಾಗಿ ತೊಳೆದು ಕತ್ತರಿಸಿ. ಕ್ಯಾರೆಟ್ ಸಿಪ್ಪೆ ತೆಗೆದು ಹೆಚ್ಚಿಕೊಳ್ಳಿ. ಕೊತ್ತಂಬರಿ ಸೊಪ್ಪು ಹಾಗೂ ಹಸಿಮೆಣಸನ್ನು ಚಿಕ್ಕದಾಗಿ ಹೆಚ್ಚಿಕೊಳ್ಳಿ. ಒಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಬಿಸಿಯಾದ ಮೇಲೆ ಶುಂಠಿ, ಬೆಳ್ಳುಳ್ಳಿ ಹಾಗೂ ಹಸಿಮೆಣಸು ಹಾಕಿ ಕೊಂಚ ಪರಿಮಳ ಬರುವವರೆಗೂ ಹುರಿದುಕೊಳ್ಳಿ.

ಅದಕ್ಕೆ ಕಾಲು ಕಪ್ ಸ್ಪ್ರಿಂಗ್ ಈರುಳ್ಳಿ ಸೇರಿಸಿ ಸ್ವಲ್ಪ ಹೊತ್ತು ಕೈಯಾಡಿಸಿ. ಅದಕ್ಕೆ ಹೆಚ್ಚಿದ ಅಣಬೆ, ಕ್ಯಾರೆಟ್, ಬೇಬಿ ಕಾರ್ನ್, ಹಸಿರುಬಟಾಣಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅದನ್ನು ಮಧ್ಯಮ ಉರಿಯಲ್ಲಿ 3 ನಿಮಿಷ ಬೇಯಿಸಿ. ಅದಕ್ಕೆ 4 ಕಪ್ ನೀರು ಸೇರಿಸಿ ಕುದಿಸಿ. ರುಚಿಗೆ ತಕ್ಕಷ್ಟು ಉಪ್ಪು ಹಾಗೂ ಕಾಳುಮೆಣಸು ಸೇರಿಸಿ. ತರಕಾರಿ ಎಲ್ಲಾ ಚೆನ್ನಾಗಿ ಬೇಯುವವರೆಗೂ ಕುದಿಸಿ. ತರಕಾರಿ ಬೆಂದ ಮೇಲೆ ಕೊತ್ತಂಬರಿ ಸೊಪ್ಪು ಹಾಗೂ 2 ಚಮಚ ನಿಂಬೆರಸ ಸೇರಿಸಿ ಮಿಶ್ರಣ ಮಾಡಿ ಕುದಿಸಿ ಗ್ಯಾಸ್ ಆಫ್ ಮಾಡಿ. ಅದಕ್ಕೆ ಸ್ಪ್ರಿಂಗ್ ಈರುಳ್ಳಿ ಎಲೆಯನ್ನು ಹೆಚ್ಚಿ ಹಾಕಿ. ಸೂಪ್ ಬಿಸಿ ಇರುವಾಗಲೇ ಕುಡಿಯಲು ಕೊಡಿ.

# ನಾನು ಅಮ್ಮ.. ನಾನು ಉದ್ಯೋಗಿ

## ಉದ್ಯೋಗಸ್ಥ ಮಹಿಳೆಯರ ಮೇಲೆ ಹೆಚ್ಚಾದ ಕೆಲಸದ ಹೊರೆ

ಸುಧಾ ಹೆಗಡೆ

ಕಾರ್ಮಿಕರ ದಿನ ಮತ್ತೆ ಬಂದಿದೆ. ಈ ಒಂದು ವರ್ಷದಿಂದ ಕೋವಿಡ್‌ನಿಂದಾಗಿ ಮಹಿಳಾ ಕಾರ್ಮಿಕರು, ಅದರಲ್ಲೂ ಉದ್ಯೋಗಸ್ಥ ತಾಯಂದಿರ ಮೇಲೆ ಕಚೇರಿ ಕೆಲಸದ ಜೊತೆ ಮಕ್ಕಳ ಹೋಂ ಸ್ಕೂಲಿಂಗ್ ಎಂದು ಇನ್ನಷ್ಟು ಹೊರೆ ಬಿದ್ದಿದೆ. ಈ ವಿಷಯದಲ್ಲಿ ಉನ್ನತ ಸ್ಥಾನ, ಕಡಿಮೆ ವೇತನದವರು ಎಂಬ ಯಾವ ತಾರತಮ್ಯವೂ ಇಲ್ಲ.

'ಅಯ್ಯೋ.. ತುಂಬಾನೇ ಕಷ್ಟ. ಹೇಳ್ತಾ ಹೋದ್ರೆ ಇಡೀ ದಿನ ಬೇಕಾಗಬಹುದು'

'ಕೆಲಸ ಮಾಡಿ ಮಾಡಿ ಪೂರ್ತಿ ಖಾಲಿ ಖಾಲಿ ಅನಿಸ್ತಾ ಇದೆ'

'ಒಂದು ರೀತಿ ಚಿತ್ರಹಿಂಸೆಯಾಗ್ತಿದೆ.. ಉದ್ಯೋಗಸ್ಥ ತಾಯಂದಿರ ಮೇಲೆ ಈ ರೀತಿ ಒತ್ತಡ ಬೀಳುತ್ತೆ ಅಂದ್ರೆ ಏನು ಹೇಳಬೇಕೋ ಗೊತ್ತಾಗ್ತಾ ಇಲ್ಲ'

ಪುಟ್ಟ ಮಕ್ಕಳಿರುವ ತಾಯಂದಿರನ್ನು ಮಾತನಾಡಿಸಿ ನೋಡಿ, ಈ ಒಂದು ವರ್ಷದಲ್ಲಿ ಎಷ್ಟು ಹೈರಾಣಾಗಿದ್ದಾರೆ ಎಂದರೆ ಜೀವಮಾನದಲ್ಲಿ ಇದನ್ನೆಲ್ಲ ಮರೆಯೋದಕ್ಕೆ ಆಗದೇ ಇರುವಷ್ಟು! ಉದ್ಯೋಗಸ್ಥ ತಾಯಂದಿರು, ಉದ್ಯಮ ನಡೆಸುವ ಅಮ್ಮಂದಿರು, ಪ್ರಮುಖವಾದ ಸ್ಥಾನದಲ್ಲಿರುವ ಹಾಗೆಯೇ ದಿನಗೂಲಿಯಾಗಿ ಕೆಲಸ ಮಾಡುವ ತಾಯಂದಿರು... ಎಲ್ಲರೂ ಹೇಳುವುದು ಒಂದೇ ಮಾತು, 'ಸಾಕಾಗಿದೆ ಈ ಒಂದು ವರ್ಷ. ಕಳೆದ ಕಾರ್ಮಿಕರ ದಿನ ನಮಗೆ ಹೇಗೆ ಇತ್ತೋ, ಈ ಕಾರ್ಮಿಕರ ದಿನವೂ ಹಾಗೇ– ಒಂಚೂರೂ ಬದಲಾವಣೆ ಇಲ್ಲ. ಮನೆಗೆಲಸ, ಕಚೇರಿ ಕೆಲಸ ಅಥವಾ ಸ್ವಂತ ಉದ್ಯಮವಾದರೆ ಅದರಲ್ಲಿ ನಿರಂತರ ಹೋರಾಟ. ನಮ್ಮ ಕಷ್ಟ, ಕೆಲವೊಮ್ಮೆ ಕೋಪ ಎಲ್ಲವನ್ನೂ ಕೇಳುವವರಾರು?' ಎಂಬ ಆಕ್ರೋಶ.

'ನನಗೊಬ್ಬನೇ ಮಗ. ಇನ್ನೂ ಏಳನೇ ತರಗತಿ. ಗಂಡನಿಗೂ ಉದ್ಯೋಗವಿದೆ. ಮಧ್ಯಮ ವರ್ಗದ ಕುಟುಂಬ ಎನ್ನಬಹುದು. ಆದರೆ ನನ್ನ ಗಂಡನ ಕೆಲಸ ಹೋಯ್ತು. ಮಗನ ಶಾಲೆ, ಸಾಮಾಜಿಕ ಬದುಕಿಗೆ ಒಮ್ಮೆಲೇ ತೆರೆ ಬಿದ್ದಾಗ ಕಂಗಾಲಾಗಿಬಿಟ್ಟೆ. ಕಚೇರಿ ಕೆಲಸ, ಮಗನ ಆನ್‌ಲೈನ್ ತರಗತಿ.. ಎರಡೂ ಒಂದೇ ಜಾಗದಲ್ಲಿ, ಒಂದೇ ಸಮಯದಲ್ಲಿ ನಿರ್ವಹಿಸುವುದೆಂದರೆ..! ಅಬ್ಬಾ, ವ್ಯವಸ್ಥಿತವಾಗಿ ಸಾಗುತ್ತಿದ್ದ ಬದುಕು ಒಂದೇ ಒಂದು ಕೋವಿಡ್ ಹೊಡೆತಕ್ಕೆ ನುಚ್ಚುನೂರಾಗಿ ಹೋಯ್ತು' ಎಂಬ ಖಾಸಗಿ ಸಂಸ್ಥೆಯೊಂದರ ಉದ್ಯೋಗಿ ಜಾನಕಿ ಪದಕಿಯ ಮಾತಿನಲ್ಲಿ ಸಂಕಷ್ಟದ ನೋವಿತ್ತು.

### ಮಹಿಳಾ ಕಾರ್ಮಿಕರ ನೋವು

ಕಳೆದ ವರ್ಷದ ಲಾಕ್‌ಡೌನ್‌ನಿಂದ ಈ ವರ್ಷದ ಲಾಕ್‌ಡೌನ್‌ವರೆಗಿನ ಅನಿಶ್ಚಿತ ಪರಿಸ್ಥಿತಿ ಬಹುತೇಕ ಎಲ್ಲರ ಜೀವನದ ಮೇಲೂ ಪರಿಣಾಮ ಬೀರಿದೆ. ಹಾಗೆಯೇ ಜಾನಕಿಯಂತಹ ಬಹುತೇಕ ಮಹಿಳಾ ಕಾರ್ಮಿಕರ ಬದುಕಿಗೆ ನೋವಿನ ಬರೆಯೆಳೆದಿದೆ. ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿರುವ, ಇಬ್ಬರು ಮಕ್ಕಳ ತಾಯಿ ಬೆಂಗಳೂರಿನ ಆರ್‌ಟಿ ನಗರದ ಸಂಧ್ಯಾಳ ಕಥೆ ಇದಕ್ಕಿಂತ ಬೇರೆ ಏನಿಲ್ಲ. ಗಂಡ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿ. ತವರುಮನೆಯಾದ ಮಂಗಳೂರಿನ ಪುಟ್ಟ ಹಳ್ಳಿಯಿಂದ ವರ್ಷಕ್ಕೆ ಸಾಕಾಗುವಷ್ಟು ಅಕ್ಕಿ, ತೆಂಗಿನಕಾಯಿ ಕಳಿಸುತ್ತಿದ್ದರು. ಮಕ್ಕಳನ್ನು ಚೆನ್ನಾಗಿ ಓದಿಸುತ್ತ, ಬದುಕು ಕಂಡುಕೊಳ್ಳುತ್ತಿರುವಾಗಲೇ ನೆಮ್ಮದಿಯನ್ನು ಕಸಿದಿತ್ತು ಕೋವಿಡ್. ಈಗ ಸಂಧ್ಯಾ ತಾನು ಶಿಕ್ಷಕಿಯಾಗಿರುವ ಶಾಲಾ ಮಕ್ಕಳಿಗೂ ಆನ್‌ಲೈನ್ ತರಗತಿಯಲ್ಲಿ ಪಾಠ ಹೇಳಬೇಕು, ಮಕ್ಕಳಿಗೂ ಆನ್‌ಲೈನ್ ತರಗತಿಯಲ್ಲಿ ಪಾಠ ಕೇಳಲು ಸಮಯ ಹೊಂದಿಸಿಕೊಳ್ಳಬೇಕು. ಅವರ ತಿಂಡಿ, ಊಟ ಎಂಬ ವ್ಯವಸ್ಥೆಯೂ ಮೊದಲಿನಂತೆ ಇದೆ. ಆದರೆ ಅವರಿಬ್ಬರೂ ನಾಲ್ಕು ಗೋಡೆಯ ಮಧ್ಯೆ ಬಂಧಿಯಾಗಿರಬೇಕು. ಎಲ್ಲವನ್ನೂ ಸರಿದೂಗಿಸಲು ಆಕೆ 14 ತಾಸು ದುಡಿಯಬೇಕು! ಗಂಡನಿಗೆ ಕಚೇರಿಯಲ್ಲೇ ಮಾಡುವಂತಹ ಕೆಲಸ, ಕಂಪನಿಯಲ್ಲಿ ರಜೆ ಕೊಡ್ತಾ ಇಲ್ಲ ಎಂಬ ಕಾರಣವಂತೂ ಇದ್ದೇ ಇದೆ.

'ಈ ಕೋವಿಡ್ ಎಂಬುದು ಸಮಾಜದಲ್ಲಿನ ಹುಳುಕನ್ನು ತೋರಿಸಿದೆ. ನಮ್ಮಂಥವರ ಕೆಲಸವನ್ನು ಎಲ್ಲಿಯೂ ಯಾರೂ ಪರಿಗಣಿಸುತ್ತಿಲ್ಲ ಎನಿಸುತ್ತದೆ. ಮಕ್ಕಳ ಹೋಂಸ್ಕೂಲ್ ಜೊತೆ ಸಂಪಾದಿಸಲು ದುಡಿಯಲೇಬೇಕು– ಮಕ್ಕಳ ಭವಿಷ್ಯಕ್ಕೆ ಹಣ ಹೊಂದಿಸಬೇಕಲ್ಲ. ಆದರೆ ಗಂಡನಿಗೆ ಮಾತ್ರ ಮನೆಯ ಬಿಸಿ ತಾಗದು' ಎನ್ನುವಾಗ ಒಂದು ರೀತಿಯ ಆಕ್ರೋಶವಿತ್ತು ಆಕೆಯಲ್ಲಿ.

### ಕಚೇರಿ ಕೆಲಸ, ಮನೆಗೆಲಸ, ಮಕ್ಕಳ ಪಾಲನೆ

ಕೋವಿಡ್‌ಗಿಂತ ಮುಂಚೆಯೂ ಮಹಿಳಾ ಕಾರ್ಮಿಕರ ಸ್ಥಿತಿ ಹೆಚ್ಚು ಕಡಿಮೆ ಹೀಗೆಯೇ ಇದ್ದರೂ ಹುಳುಕು ಹೊರಗಿನವರಿಗೆ ಗೊತ್ತಾಗುತ್ತಿರಲಿಲ್ಲ ಅಥವಾ ಒಂದು ರೀತಿಯಲ್ಲಿ ಕೌಟುಂಬಿಕ ಬದುಕು ನಡೆದುಕೊಂಡು ಹೋಗುತ್ತಿತ್ತು. ಮನೆಗೆಲಸ ಮಾಡಿಕೊಂಡು, ಡೇಕೇರ್‌ನಲ್ಲಿ ಮಕ್ಕಳನ್ನು ಬಿಟ್ಟು ಕೆಲಸಕ್ಕೆ ಹೋಗಿ ಬಂದು ಮಾಡುವುದು ಸಾಮಾನ್ಯ ಎಂಬಂತಾಗಿತ್ತು. ಮನೆಗೆಲಸ, ಮಕ್ಕಳ ಕೆಲಸದ ಹೊಣೆ ಮನೆಯಲ್ಲಿನ ಪುರುಷರಿಗೆ ಅಷ್ಟೊಂದು ತಟ್ಟದಂತೆ ಹೇಗೊ ನೋಡಿಕೊಂಡರು. ಆದರೆ ಈಗಿನ ಪರಿಸ್ಥಿತಿ ಎಲ್ಲವನ್ನೂ ಬುಡಮೇಲು ಮಾಡಿದ್ದು, ಮಹಿಳೆಯರ ಮೇಲೆ ಹೆಚ್ಚಿನ ಒತ್ತಡ ಹೇರಿದೆ ಎನ್ನಬಹುದು.

'ಈಗಂತೂ ಒದ್ದಾಟವಾಗಿಬಿಟ್ಟಿದೆ' ಎನ್ನುವ ಗಾರ್ಮೆಂಟ್ ಉದ್ಯೋಗಿ ಪ್ರತಿಮಾ ಲೋಖಂಡೆ 'ಮನೆಯಲ್ಲಿ ಮಕ್ಕಳಿಬ್ಬರು, ವಯಸ್ಸಾದ ಅತ್ತೆ– ಮಾವ. ಮನೆಗೆಲಸ, ಊಟ– ತಿಂಡಿ ಎಲ್ಲವನ್ನೂ ಮಾಡಿಕೊಂಡು ಗಾರ್ಮೆಂಟ್‌ಗೆ ಹೋಗುತ್ತಿದ್ದೆ. ಕಳೆದ ವರ್ಷ ಲಾಕ್‌ಡೌನ್ ಎಂದು ಕೆಲವು ತಿಂಗಳುಗಳ ಕಾಲ ಸಂಪಾದನೆ ಇರಲಿಲ್ಲ. ಈಗ ಮತ್ತೆ ಲಾಕ್‌ಡೌನ್ ಎಂದು ತಾಪತ್ರಯ ಶುರುವಾಗಿದೆ. ಗಂಡ ತರಕಾರಿ ಮಾರಾಟದಿಂದ ತರುವ ಹಣವನ್ನೇ ನೆಚ್ಚಿಕೊಂಡಿದ್ದೇವೆ. ದೊಡ್ಡ ಮಗನಿಗೆ ಭಯ, ಆತಂಕದ ಸಮಸ್ಯೆ ಶುರುವಾಗಿದೆ' ಎಂದು ಅಳಲು ತೋಡಿಕೊಳ್ಳುತ್ತಾರೆ.

ಇಂತಹ ಸಮಸ್ಯೆಗಳು ಕೋವಿಡ್ ಕಡಿಮೆಯಾದ ಮೇಲೂ ಪರಿಹಾರ ಕಾಣುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಪೋಷಕರು ಮಕ್ಕಳ ಕರ್ತವ್ಯವನ್ನು ಸಮಾನವಾಗಿ ಹಂಚಿಕೊಳ್ಳುವ ಕಾಲ ನಿಧಾನಕ್ಕಾದರೂ ಬರಬಹುದು ಎಂಬ ಆಶಾವಾದ ಹೊಂದಬೇಕಷ್ಟೆ. ಜೊತೆಗೆ ಮಕ್ಕಳಿಗಾಗಿ ಕಡಿಮೆ ವೆಚ್ಚದ ಚೈಲ್ಡ್‌ಕೇರ್ ಕೇಂದ್ರಗಳು, ಶಾಲೆಯ ನಂತರ ಆಟವಾಡಲು ಸ್ಥಳಗಳು, ಆರೋಗ್ಯ ಸೇವೆ ದೊರೆತರೆ ಉದ್ಯೋಗಸ್ಥ ತಾಯಂದಿರು ನೆಮ್ಮದಿಯ ನಿಟ್ಟುಸಿರು ಬಿಡಬಹುದು.

### ಉನ್ನತ ಸ್ಥಾನಕ್ಕೇರಲು ಕೌಟುಂಬಿಕ ಕರ್ತವ್ಯ ಅಡ್ಡಿ

ಮಹಿಳಾ ಉದ್ಯೋಗಿಗಳ ವೇತನದಲ್ಲಿನ ತಾರತಮ್ಯ ಸಾಕಷ್ಟು ಕಮ್ಮಿಯಾಗಿದೆ. ಕಂಪನಿಯಲ್ಲಿ ಉನ್ನತ ಸ್ಥಾನಕ್ಕೂ ಏರಬಹುದು. ಆದರೆ ಮಕ್ಕಳ ಕೆಲಸ, ಅಡುಗೆ, ಅವರನ್ನು ಓದಿಸುವುದು... ಹೀಗೆ ಹತ್ತಾರು ಕರ್ತವ್ಯಗಳು ಅವರನ್ನು ಹಿಂದಕ್ಕೆ ಎಳೆದುಬಿಡುತ್ತವೆ. ಈ ಕುರಿತು ನಡೆದ ಸಮೀಕ್ಷೆಯೊಂದರಲ್ಲಿ ಶೇ 79ರಷ್ಟು ಮಂದಿ ತಾಯಂದಿರು, ಕಳೆದ ಒಂದು ವರ್ಷದಿಂದ ಹೋಂ ಸ್ಕೂಲಿಂಗ್ ಹೊಣೆ ತಮ್ಮ ಮೇಲೆಯೇ ಬಿದ್ದಿದೆ ಎಂದು ಹೇಳಿಕೊಂಡಿದ್ದಾರೆ. ಶಾಲೆಗಳನ್ನು ಮುಚ್ಚಿರುವುದರಿಂದ ತಾಯಂದಿರ ಮಾನಸಿಕ ಒತ್ತಡವೂ ಜಾಸ್ತಿಯಾಗಿದೆಯಂತೆ.

# ನನ್ನ ಪತ್ನಿ ಕನ್ಯೆಯಾಗಿದ್ದಳೇ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **ನಾನು ಇತ್ತೀಚೆಗೆ ವಿವಾಹವಾಗಿದ್ದು ಮೊದಲ ಮಿಲನದಲ್ಲಿ ಪತ್ನಿಗೆ ರಕ್ತಸ್ರಾವವಾಗಲಿಲ್ಲ. ಅವಳ ವಯಸ್ಸು 28. ಅವಳು ತಪ್ಪುದಾರಿ ತುಳಿದಿಲ್ಲವೆಂದು ಹೇಳುತ್ತಾಳೆ. ರಕ್ತಸ್ರಾವವಾಗದಿರುವುದು ನನ್ನ ಮನಸ್ಸಿನಲ್ಲಿ ಅನುಮಾನಗಳನ್ನು ಹುಟ್ಟಿಹಾಕಿದೆ. ಮೊದಲ ಬಾರಿಗೆ ಹೈಮನ್ ಹರಿದಾಗ ಎಲ್ಲರಿಗೂ ರಕ್ತಸ್ರಾವವಾಗುತ್ತದೆಯೇ? ಆಗದಿದ್ದರೆ ಕಾರಣವೇನು?**

**ಹೆಸರು,** ಊರು ತಿಳಿಸಿಲ್ಲ.

ಪ್ರಕೃತಿ ಸ್ತ್ರೀಯರಲ್ಲಿ ಕನ್ಯಾಪೊರೆಯನ್ನು (ಹೈಮನ್) ಏಕೆ ಸೃಷ್ಟಿಮಾಡಿದೆ ಎನ್ನುವುದಕ್ಕೆ ಖಚಿತ ಉತ್ತರವಿಲ್ಲ. ಋತುಮತಿಯಾಗದ ಹೆಣ್ಣುಮಗುವನ್ನು ಗಂಡಿನ ಆಕ್ರಮಣದಿಂದ ರಕ್ಷಿಸಲು ಅಥವಾ ಸೂಕ್ಷ್ಮವಾದ ಹೆಣ್ಣಿನ ಸಂತಾನೋತ್ಪತ್ತಿಯ ಅಂಗಾಂಗಗಳನ್ನು ರೋಗಾಣುಗಳಿಂದ ರಕ್ಷಿಸಲು ಸೃಷ್ಟಿಸಿರಬಹುದೇ? ಗೊತ್ತಿಲ್ಲ. ಆದರೆ ಪುರುಷಪ್ರಧಾನ ಸಮಾಜದಲ್ಲಿ ಕನ್ಯಾಪೊರೆಯನ್ನು ಹೆಣ್ಣಿನ ಕನ್ಯತ್ವದ ಪುರಾವೆಯಾಗಿ ನೋಡುವ ಚಿಂತನೆ ಶತಶತಮಾನಗಳಿಂದ ಎಲ್ಲಾ ಜನಾಂಗಗಳಲ್ಲಿ ಜಾರಿಯಲ್ಲಿದೆ. ಕನ್ಯಾಪೊರೆ ಮೊದಲ ಸಂಭೋಗಕ್ಕೆ ಮುನ್ನವೇ ಬೇರೆಬೇರೆ ದೈಹಿಕ ಚಟುವಟಿಕೆಗಳಿಂದ ಹರಿದುಹೋಗುವುದು ಸಾಧ್ಯ. ನಿಮ್ಮ ಪತ್ನಿಯ ಕನ್ಯಾಪೊರೆ ಹೇಗೆ ಹರಿದಿರಬಹುದು ಎನ್ನುವುದನ್ನು ಈಗ ತಿಳಿಯುವುದು ಸಾಧ್ಯವೇ ಇಲ್ಲ. ಮದುವೆಗೆ ಮೊದಲು ನೀವು ಹೆಣ್ಣಿನ ಸಂಪರ್ಕಮಾಡಿಲ್ಲ ಎಂದು ಸಿದ್ಧಪಡಿಸಲು ಕೇಳಿದರೆ ಅದು ಸಾಧ್ಯವೇ? ಹೀಗೆ ಅಸಾಧ್ಯವಾದುದಕ್ಕೆ ಪ್ರಯತ್ನಿಸಿದರೆ ಮಾನಸಿಕ ಹಿಂಸೆಯಲ್ಲದೆ ಮತ್ತೇನು ಸಿಗಬಹುದು? ಅನಗತ್ಯವಾಗಿ ಪತ್ನಿಯನ್ನು ಶಂಕಿಸುವುದರಿಂದ ಅವರಿಗೆ ಆಗುತ್ತಿರುವ ಮಾನಸಿಕ ನೋವು, ಹಿಂಸೆ, ಅವಮಾನಗಳು ಎಷ್ಟೆಂದು ಯೋಚಿಸಿದ್ದೀರಾ? ಇದರಿಂದ ನಿಮ್ಮ ಸಂಬಂಧದಲ್ಲಿ ಆತ್ಮೀಯತೆ ಮೂಡುವುದು ಹೇಗೆ ಸಾಧ್ಯ? ನಂಬಿಕೆ ಮತ್ತು ಗೌರವ ದೀರ್ಘಕಾಲದ ಸಂಬಂಧಕ್ಕೆ ಅಗತ್ಯವಿರುವ ಮೂಲಭೂತ ಅಂಶಗಳು. ನಿಮಗೆ ಸಾಧ್ಯವಿದ್ದರೆ ಅನುಮಾನಿಸಿರುವುದಕ್ಕಾಗಿ ಪತ್ನಿಯ ಕ್ಷಮೆ ಕೇಳಿ ಅವರನ್ನು ಗೌರವಿಸುವುದರ ಮೂಲಕ ಸಮರಸದ ದಾಂಪತ್ಯಕ್ಕೆ ಮೊದಲ ಹೆಜ್ಜೆ ಇಡಬಹುದು.

- **ಮುಸ್ಲಿಂ ಯುವಕನಾದ ನಾನು ಹಿಂದು ಹುಡುಗಿಯನ್ನು ಪ್ರೀತಿಸಿ ಮದುವೆಯಾಗಿ 4 ವರ್ಷವಾಯಿತು. ತುಂಬಾ ಸಂತೋಷದಿಂದ ಇದ್ದೇವೆ. ಯಾವುದೇ ಮದುವೆಯಲ್ಲಿ ನಂಬಿಕೆ ಮುಖ್ಯ. ಎಲ್ಲಿ ನಂಬಿಕೆ ಇರೋದಿಲ್ವೋ ಅಲ್ಲಿ ಪ್ರೀತಿ ಇರೋದಿಲ್ಲ ಅಲ್ವೇ?**

**ಚಾಂದ್ ಬಾಷ,** ಬಳ್ಳಾರಿ.

ನೀವು ಪ್ರಶ್ನೆಯನ್ನು ಕೇಳದಿದ್ದರೂ ನಿಮ್ಮ ಅನುಭವವನ್ನು ಹೇಳಿಕೊಂಡಿದ್ದಕ್ಕಾಗಿ ಪತ್ರವನ್ನು ದಾಖಲಿಸಿದ್ದೇನೆ. ಸರಿಯಾಗಿ ಹೇಳಿದ್ದೀರಿ. ಪ್ರೀತಿಯ ಎರಡು ಅಡಿಪಾಯಗಳಲ್ಲಿ ಒಂದು ನಂಬಿಕೆ, ಮತ್ತೊಂದು ಪರಸ್ಪರ ಗೌರವ. ಇವೆರಡನ್ನೂ ಭದ್ರವಾಗಿಟ್ಟುಕೊಂಡರೆ ಭಿನ್ನಾಭಿಪ್ರಾಯಗಳನ್ನು ನಿಭಾಯಿಸುವುದು ಸುಲಭ. ನಿಮ್ಮಿಬ್ಬರ ಪ್ರೀತಿ ಸುತ್ತಲಿನವರಿಗೆ ಮಾದರಿಯಾಗಲಿ.

- **ನನ್ನ 16 ವರ್ಷದ ಗೆಳತಿ ತನ್ನ ಅಣ್ಣ (ದೊಡ್ಡಮ್ಮನ ಮಗ) ನೊಂದಿಗೆ ಸಲುಗೆಯಿಂದ ವರ್ತಿಸುತ್ತಾಳೆ. ಅವನು ಕೂಡ ಮೈಮುಟ್ಟಿ ಮಾತನಾಡಿಸುತ್ತಾನೆ. ಇದು ಅವರ ಖಾಸಗೀ ವಿಷಯ ಎಂದು ಸುಮ್ಮನಿರಲಾಗುತ್ತಿಲ್ಲ. ಅವಳಿಗೆ ಏನೆಂದು ಎಚ್ಚರಿಸಲಿ?**

**ಸ್ಮಿತಾ,** ಬೆಂಗಳೂರು.

ಗೆಳತಿಯ ಬಗೆಗಿನ ನಿಮ್ಮ ಪ್ರೀತಿ, ಕಾಳಜಿ ಪ್ರಾಮಾಣಿಕವಾದದ್ದು. ಆತ್ಮೀಯ ಸ್ನೇಹ, ಸಂಬಂಧಗಳಲ್ಲಿಯೂ ಕೆಲವು ಗಡಿರೇಖೆಗಳಿರುತ್ತವೆ. ಮತ್ತೊಬ್ಬರ ಒಪ್ಪಿಗೆಯಿಲ್ಲದೆ ಅವುಗಳನ್ನು ದಾಟಲು ಪ್ರಯತ್ನಿಸಿದರೆ ಸಂಬಂಧಗಳು ಹದಗೆಡುತ್ತವೆ. ಕೆಲವು ವೈಯಕ್ತಿಕ ವಿಚಾರಗಳಲ್ಲಿ ನಿಮ್ಮ ಅಭಿಪ್ರಾಯ ಹೇಳಲು ಅವಳ ಒಪ್ಪಿಗೆ ಇದೆಯೇ ಎಂದು ಸ್ನೇಹಿತೆಯನ್ನು ಮೊದಲು ಕೇಳಿ. ಒಪ್ಪಿದರೆ ಅವಳನ್ನು ದೂಷಿಸದೆ, ಸರಿತಪ್ಪುಗಳ ಉಪದೇಶ ಮಾಡದೆ ಅವಳ ವರ್ತನೆಯ ಬಗೆಗೆ ನಿಮಗಿರುವ ಆತಂಕಗಳ ಕುರಿತಾಗಿ ಒಮ್ಮೆ ಮಾತ್ರ ಹೇಳಿ ಮುಗಿಸಿಬಿಡಿ. ಯಾವುದೇ ಚರ್ಚೆ, ವಾದವಿವಾದಗಳಿಗೆ ಅವಕಾಶ ಕೊಡಬೇಡಿ. ಅವಳು ಸಿಟ್ಟಾದರೆ ನಿಮ್ಮನ್ನು ಸಮರ್ಥಿಸಿಕೊಳ್ಳದೆ ಕ್ಷಮೆ ಕೇಳುವ ಮೂಲಕ ಸ್ನೇಹವನ್ನು ಉಳಿಸಿಕೊಳ್ಳಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

### ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

# ಕೋವಿಡ್ ಲಸಿಕೆ

## ಮುಟ್ಟು, ಫಲವಂತಿಕೆ ಮೇಲೆ ಪರಿಣಾಮವಿದೆಯೆ?

ರೇಷ್ಮಾ

**ಹದಿನೆಂಟು** ವರ್ಷಕ್ಕಿಂತ ಮೇಲಿನವರಿಗೂ ಕೋವಿಡ್ ಲಸಿಕೆ ಅಭಿಯಾನ ಆರಂಭವಾಗಲಿದೆ. ಈ ವಯಸ್ಸಿನ ಹೆಣ್ಣುಮಕ್ಕಳೆಂದರೆ ಋತುಸ್ರಾವ, ಗರ್ಭಧಾರಣೆ ಮೊದಲಾದ ಅಂಶಗಳ ಬಗ್ಗೆಯೂ ಗಮನ ಕೊಡಬೇಕಾಗುತ್ತದೆ. ಲಸಿಕೆ ತೆಗೆದುಕೊಳ್ಳುವುದರಿಂದ ಋತುಚಕ್ರ ಏರುಪೇರಾಗುತ್ತದೆಯೇ, ಗರ್ಭಧಾರಣೆಗೆ ಯೋಜನೆ ಹಾಕಿಕೊಂಡಿದ್ದರೆ ಅದಕ್ಕೆ ತೊಂದರೆ ಆಗಬಹುದೇ ಅಥವಾ ಗರ್ಭ ನಿರೋಧಕ ಮಾತ್ರೆ ಸೇವಿಸುತ್ತಿರುವವರಿಗೆ ರಕ್ತ ಗರಣೆ (ಬ್ಲಡ್ ಕ್ಲಾಟಿಂಗ್) ಕಟ್ಟುವಂತಹ ಸಮಸ್ಯೆ ಉಂಟಾಗಬಹುದೇ ಎಂಬಂತಹ ಅನುಮಾನಗಳು ಯುವತಿಯರಲ್ಲಿ ಇರಬಹುದು.

ಲಸಿಕೆ ತೆಗೆದುಕೊಳ್ಳುವುದರಿಂದ ಋತುಚಕ್ರದಲ್ಲಿ ಏರುಪೇರಾದರೂ ಭಯ ಪಡುವ ಅಗತ್ಯವಿಲ್ಲ. ಅಮೆರಿಕದಲ್ಲಿ ಜಾನ್ಸನ್ ಅಂಡ್ ಜಾನ್ಸನ್ ಕೋವಿಡ್ ಲಸಿಕೆ ಪಡೆದ ಕೆಲವರಲ್ಲಿ ಈ ಏರುಪೇರು ಕಂಡು ಬಂದಿದೆ ಎಂಬ ವರದಿಯಿದೆ. ಲಸಿಕೆ ತೆಗೆದುಕೊಂಡಾಗ ಕೆಲವರಲ್ಲಿ ಒಂದೆರಡು ದಿನಗಳ ಕಾಲ ಜ್ವರ ಕಾಣಿಸಿಕೊಳ್ಳಬಹುದು; ಹಾಗಂತ ಅದೇನೂ ಕಾಯಂ ಅಲ್ಲವಲ್ಲ. ಅದೇ ರೀತಿ ಮುಟ್ಟಿನಲ್ಲಾಗುವ ಏರುಪೇರು ಕೂಡ ತಾತ್ಕಾಲಿಕ. ಲಸಿಕೆ ತೆಗೆದುಕೊಂಡ ತಿಂಗಳಲ್ಲಿ ಮುಟ್ಟು ನಾಲ್ಕಾರು ದಿನಗಳ ಕಾಲ ಮುಂಚಿತವಾಗಿ ಅಥವಾ ತಡವಾಗಿ ಆಗಬಹುದು. ಮುಟ್ಟಾದ ಸಂದರ್ಭದಲ್ಲೂ ಲಸಿಕೆ ಹಾಕಿಸಿಕೊಳ್ಳಲು ಅಡ್ಡಿಯಿಲ್ಲ. ಬೇರೇನೂ ತೊಂದರೆಯಾಗದು. ಒತ್ತಡ ಕೂಡ ಈ ಏರುಪೇರಿಗೆ ಕಾರಣ ಇರಬಹುದು. 'ಆದರೆ ಈ ವಿಷಯವನ್ನು ಉತ್ಪ್ರೇಕ್ಷೆ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುದ್ದಿ ಸುಳ್ಳು' ಎನ್ನುತ್ತಾರೆ ಬೆಂಗಳೂರಿನ ರಾಧಾಕೃಷ್ಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಹಾಗೂ ಪ್ರಸೂತಿ ತಜ್ಞೆ ಡಾ. ವಿದ್ಯಾ ವಿ. ಭಟ್.

ಹಾಗೆಯೇ ಲಸಿಕೆಯಿಂದ ಫಲವಂತಿಕೆ ಕಡಿಮೆಯಾಗುತ್ತದೆ ಎಂಬ ಸುದ್ದಿ ಕೂಡ ಸುಳ್ಳು. ಇದಕ್ಕೆ ಪುಷ್ಟಿ ಕೊಡುವಂತಹ ಯಾವುದೇ ಸಾಕ್ಷಿಯೂ ಇಲ್ಲ. ಗರ್ಭಧಾರಣೆಗೆ ಯೋಜನೆ ಹಾಕಿಕೊಳ್ಳುತ್ತಿರುವವರೂ ಕೂಡ ಲಸಿಕೆ ಹಾಕಿಸಿಕೊಳ್ಳಬಹುದು. ಲಸಿಕೆ ಹಾಕಿಸಿಕೊಂಡ ನಂತರ ಒಂದು ಋತುಚಕ್ರ ಏರುಪೇರಾದರೂ ಮುಂದಿನ ತಿಂಗಳಲ್ಲೇ ಸರಿ ಹೋಗುತ್ತದೆ, ಹೀಗಾಗಿ ನಂತರದ ತಿಂಗಳಲ್ಲಿ ಗರ್ಭಧಾರಣೆಗೆ ಯತ್ನಿಸಬಹುದು ಎಂದೂ ತಜ್ಞರು ಸ್ಪಷ್ಟಪಡಿಸಿದ್ದಾರೆ.

ಅಮೆರಿಕದಲ್ಲಿ ಜಾನ್ಸನ್ ಅಂಡ್ ಜಾನ್ಸನ್ ಲಸಿಕೆಯನ್ನು ಗರ್ಭಿಣಿಯರಿಗೂ ನೀಡಲಾಗಿದ್ದು, ಹುಟ್ಟಿದ ಮಗುವಿನಲ್ಲೂ ಪ್ರತಿಕಾಯಗಳು ಕಂಡುಬಂದಿದ್ದು ಆಶಾದಾಯಕ ಬೆಳವಣಿಗೆ ಎನ್ನಲಾಗಿದೆ. ಭಾರತದಲ್ಲಿ ಇದುವರೆಗೆ ಗರ್ಭಿಣಿಯರಿಗೆ ಈ ಲಸಿಕೆ ನೀಡಿರಲಿಲ್ಲ. 'ಗರ್ಭಿಣಿಯರಿಗೂ ಲಸಿಕೆ ನೀಡಬೇಕು ಎಂದು ಸರ್ಕಾರದಿಂದ ಆದೇಶ ಬಂದಿದೆ. ಹೀಗಾಗಿ ಇನ್ನು ಮುಂದೆ ಗರ್ಭಿಣಿಯರಿಗೆ ಲಸಿಕೆ ನೀಡುವ ಕಾರ್ಯ ಶುರುವಾಗಲಿದೆ' ಎನ್ನುತ್ತಾರೆ ಡಾ. ವಿದ್ಯಾ ಭಟ್.

ಇನ್ನು ಗರ್ಭ ನಿರೋಧಕ ಮಾತ್ರೆ ಸೇವಿಸುತ್ತಿರುವ ಯುವತಿಯರಲ್ಲಿ ಈ ಕೋವಿಡ್ ಲಸಿಕೆಯಿಂದ ರಕ್ತ ಗರಣೆ ಕಟ್ಟುವಂತಹ ಸಮಸ್ಯೆ ತಲೆದೋರಬಹುದೇ ಎಂಬ ಅನುಮಾನಗಳೂ ಕೆಲವರಲ್ಲಿ ಇರಬಹುದು. ಕೋವಿಡ್‌ನಿಂದ ರಕ್ತ ಹೆಪ್ಪುಗಟ್ಟುವಂತಹ ಸಮಸ್ಯೆ ಬರುತ್ತದೆಯೇ ಹೊರತು ಲಸಿಕೆಯಿಂದ ಇಂತಹ ಯಾವುದೇ ಭಯಪಡುವ ಅಗತ್ಯವಿಲ್ಲ ಎಂದು ತಜ್ಞರು ಹೇಳಿದ್ದಾರೆ.

## ಸುಭಾಷಿತ

ಸಕಾಲದಲ್ಲಿ ಸಕಾಲಿಕವಾದ ಹಾಗೂ ಪ್ರಾಮಾಣಿಕವಾದ ಪ್ರಶಂಸೆಯ ಮಾತುಗಳಿಗೆ ಮಿಗಿಲಾದುದು ಬೇರೊಂದಿಲ್ಲ.

-ಸ್ಯಾಮ್ ವಾಲ್ಟನ್

# ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಸರ್ಕಾರದ ನಿಗಾ ಬೇಕು

**ರಾಜ್ಯದಲ್ಲಿ** ಕೋವಿಡ್-19 ಹರಡುವುದನ್ನು ತಡೆಯುವ ಉದ್ದೇಶದಿಂದ ಲಾಕ್‌ಡೌನ್ ಮಾದರಿಯ ನಿರ್ಬಂಧಗಳನ್ನು ಜಾರಿಗೆ ತಂದಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಹಿಂದಿನ ವರ್ಷ ರಾಷ್ಟ್ರವ್ಯಾಪಿ ಜಾರಿಗೊಳಿಸಿದ್ದ ಮಾದರಿಯ ಕಠಿಣ ಲಾಕ್‌ಡೌನ್ ಇದಲ್ಲ. ಹೀಗಿದ್ದರೂ, ಜನರ ಸಂಚಾರದ ಮೇಲೆ ಹತ್ತು ಹಲವು ನಿರ್ಬಂಧಗಳು ಇವೆ. ಕಾರ್ಖಾನೆಗಳು ಕೆಲಸ ನಿರ್ವಹಿಸಲು ಅವಕಾಶ ಇದೆ. ಆದರೆ, ಕಾರ್ಖಾನೆಗಳಿಗೆ ಹೋಗಲು ಕಾರ್ಮಿಕರಿಗೆ ಸಾರಿಗೆ ಸೌಲಭ್ಯದ ಕೊರತೆ ಇದೆ.

**ಸರ್ಕಾರವು ಅಗತ್ಯ ವಸ್ತುಗಳ ಬೆಲೆ ಯಾವ ಮಟ್ಟದಲ್ಲಿ ಇದೆ ಎಂಬುದರ ಮೇಲೆ ಎಚ್ಚರಿಕೆಯ ಕಣ್ಣಿಡಬೇಕಾದ ಅಗತ್ಯ ಖಂಡಿತ ಇದೆ**

ಈ ಬಾರಿಯ ಲಾಕ್‌ಡೌನ್‌ನ ದ್ವಂದ್ವಗಳು ಇವು. ಹಿಂದಿನ ವರ್ಷ ಏಕಾಏಕಿ ಜಾರಿಗೆ ತಂದ ಲಾಕ್‌ಡೌನ್ ಕ್ರಮವು ಅಗತ್ಯ ವಸ್ತುಗಳ ಪೂರೈಕೆ ವ್ಯವಸ್ಥೆಯ ಪಾಲಿಗೆ ಪ್ರಹಾರದಂತೆ ಎರಗಿತ್ತು. ನಿರೀಕ್ಷಿಸಿರದಿದ್ದ ಲಾಕ್‌ಡೌನ್‌ನ ಪರಿಣಾಮವಾಗಿ ಅಗತ್ಯ ವಸ್ತುಗಳ ಬೆಲೆಯಲ್ಲಿ ಭಾರಿ ಹೆಚ್ಚಳ ಆಗಿತ್ತು. ಈ ಬಾರಿ ಆ ರೀತಿ ಆಗದಂತೆ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಸರಕುಗಳ ಅಂತರರಾಜ್ಯ ಹಾಗೂ ಅಂತರಜಿಲ್ಲಾ ಸಾಗಾಟಕ್ಕೆ ಯಾವ ನಿರ್ಬಂಧವೂ ಈಗಿಲ್ಲ. ಹೀಗಿದ್ದರೂ, ಸರ್ಕಾರವು ಅಗತ್ಯ ವಸ್ತುಗಳ ಬೆಲೆ ಯಾವ ಮಟ್ಟದಲ್ಲಿ ಇದೆ ಎಂಬುದರ ಮೇಲೆ ಎಚ್ಚರಿಕೆಯ ಕಣ್ಣಿಡಬೇಕಾದ ಅಗತ್ಯ ಖಂಡಿತ ಇದೆ. ಸರಕು ಸಾಗಣೆ ವ್ಯವಸ್ಥೆಗೆ ತೊಡಕು ಉಂಟಾಗುವಂತೆ ನಿಯಮಗಳನ್ನು ರೂಪಿಸಿಲ್ಲ ಎಂದು ಅಧಿಕಾರಸ್ಥರು ಎಷ್ಟೇ ಗಟ್ಟಿಯಾಗಿ ಹೇಳಿದರೂ, ನಿರ್ಬಂಧಗಳು ಜಾರಿಗೆ ಬಂದ ನಂತರ ಕೆಲವು ಹಣ್ಣು-ತರಕಾರಿಗಳ ಬೆಲೆಯಲ್ಲಿ ಹೆಚ್ಚಳ ಆಗಿರುವುದನ್ನು, ಕೆಲವು ತರಕಾರಿಗಳ ಪೂರೈಕೆಯಲ್ಲಿ ತಕ್ಷಣಕ್ಕೆ ವ್ಯತ್ಯಯ ಆಗಿರುವುದನ್ನು ಸಾರ್ವಜನಿಕರು ಈಗಾಗಲೇ ಗಮನಿಸಿರಬಹುದು. ಕೆಲವು ಸಮಸ್ಯೆಗಳು ಒಂದೆರಡು ದಿನಗಳಲ್ಲಿ ಸರಿಹೋಗಬಹುದು. ಆದರೆ, ಈ ಬಾರಿಯ ನಿಯಮಗಳಲ್ಲಿ ಇರುವ ಕೆಲವು ಲೋಪಗಳು ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗುವಂತೆ ಮಾಡಬಲ್ಲವು ಎಂಬುದನ್ನು ನಿರ್ಲಕ್ಷಿಸುವಂತೆ ಇಲ್ಲ.

ಕಿರಾಣಿ ಅಂಗಡಿಗಳನ್ನು ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ತೆರೆಯಲು ಅವಕಾಶವಿದೆ. ಕೃಷಿ ಉತ್ಪನ್ನಗಳ ಮಾರುಕಟ್ಟೆಗಳು ಕೂಡ ಈ ಅವಧಿಯಲ್ಲಿ ಮಾತ್ರ ತೆರೆದಿರುತ್ತವೆ. ಸಣ್ಣ ವ್ಯಾಪಾರಿಗಳಿಗೆ ಸಗಟು ವ್ಯಾಪಾರಿಗಳಿಂದ ಅಗತ್ಯ ವಸ್ತುಗಳನ್ನು ಖರೀದಿಸಿ ತರಲು ಪ್ರತ್ಯೇಕ ಸಮಯವೇ ಇಲ್ಲವಾಗಿದೆ. ಸಮಯದ ಈ ಅಭಾವವು ಕಿರಾಣಿ ಅಂಗಡಿಗಳಿಗೆ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಾಸ ಉಂಟುಮಾಡಿ, ಚಿಲ್ಲರೆ ಮಾರಾಟ ದರವನ್ನು ಹೆಚ್ಚಿಸಬಹುದು. ನಗರಗಳಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಹಲವರು ಹಳ್ಳಿಗಳಿಗೆ ಮರಳಿದ್ದಾರೆ. ಕಾರ್ಮಿಕರ ಅಭಾವದಿಂದಾಗಿಯೂ ಅಗತ್ಯ ವಸ್ತುಗಳ ಪೂರೈಕೆ ಸರಪಳಿಯ ಮೇಲೆ ದುಷ್ಪರಿಣಾಮ ಆಗಬಹುದು. ತರಕಾರಿ, ಬೇಳೆ-ಕಾಳು, ಖಾದ್ಯತೈಲ, ಮೊಟ್ಟೆ-ಮಾಂಸ... ಇವೆಲ್ಲ ಪ್ರತಿನಿತ್ಯ ಬೇಕಾಗುವ ಅತ್ಯವಶ್ಯಕ ಆಹಾರ ವಸ್ತುಗಳು. ಇವುಗಳ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಾಸ ಉಂಟಾದರೆ, ಬೆಲೆ ಏರಿಕೆ ಆಗುತ್ತದೆ. ಆಗ ಸಮಸ್ಯೆಗೆ ಸಿಲುಕುವುದು ಸಾರ್ವಜನಿಕರು. ಅಗತ್ಯ ವಸ್ತುಗಳ ಸಾಗಾಟ ಹಾಗೂ ಮಾರಾಟ ಸರಪಳಿಯಲ್ಲಿನ ಯಾವುದಾದರೂ ಒಂದು ಹಂತದಲ್ಲಿ ಈ ವಸ್ತುಗಳ ಕೃತಕ ಅಭಾವ ಸೃಷ್ಟಿಸುವವರು ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸಬಹುದು. ಹಾಗಾಗದಂತೆ ನೋಡಿಕೊಳ್ಳಬೇಕಿರುವುದು ಸರ್ಕಾರದ ಹೊಣೆ. ಈಗ ಜಾರಿಗೆ ಬಂದಿರುವ ಲಾಕ್‌ಡೌನ್ ಮೇ 12ಕ್ಕೆ ಮುಕ್ತಾಯವಾಗಲಿದೆ. ಆ ತಾರೀಕಿನ ನಂತರವೂ ಕೋವಿಡ್-19 ಪ್ರಕರಣಗಳು ಸರ್ಕಾರದ ನಿಯಂತ್ರಣಕ್ಕೆ ಬಾರದಿದ್ದರೆ, ಲಾಕ್‌ಡೌನ್ ಕ್ರಮಗಳು ಮತ್ತಷ್ಟು ದಿನ ಮುಂದುವರಿಯುವ ಸಾಧ್ಯತೆ ಇದೆ. ಲಾಕ್‌ಡೌನ್ ಇನ್ನಷ್ಟು ದಿನ ಮುಂದುವರಿದಿದ್ದೇ ಆದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಚಿತ ಎಂದು ಅರ್ಥಶಾಸ್ತ್ರ ಪರಿಣತರು ಅಂದಾಜಿಸಿದ್ದಾರೆ. ಲಾಕ್‌ಡೌನ್‌ನಿಂದಾಗಿ ಉದ್ಯಮಗಳು, ವ್ಯಾಪಾರಸ್ಥರು, ಖಾಸಗಿ ವಲಯದ ನೌಕರರು ಬಸವಳಿದಿರುತ್ತಾರೆ. ಅಗತ್ಯ ವಸ್ತುಗಳ ಬೆಲೆ ಮತ್ತೆ ಜಾಸ್ತಿ ಆದರೆ ಆ ಸಂದರ್ಭವನ್ನು ಸರ್ಕಾರ ಹೇಗೆ ನಿಭಾಯಿಸುತ್ತದೆ? ಆದಾಯವೇ ಕಡಿಮೆ ಆಗುತ್ತಿರುವ ಸಂದರ್ಭದಲ್ಲಿ ವೆಚ್ಚಗಳು ಜಾಸ್ತಿ ಆಗುವುದರಿಂದ ಸಾರ್ವಜನಿಕರ ಬದುಕಿನ ಬವಣೆ ಎಷ್ಟರಮಟ್ಟಿಗೆ ಹೆಚ್ಚಾಗುತ್ತದೆ ಎಂಬುದು ಅಧಿಕಾರಸ್ಥರ ಅರಿವಿಗೆ ಬರಬಹುದೇ? ಸಾಂಕ್ರಾಮಿಕವನ್ನು ನಿಭಾಯಿಸುವ ವಿಚಾರದಲ್ಲಿ ಸ್ಪಷ್ಟ ರೂಪುರೇಷೆಗಳನ್ನೇ ಹೊಂದಿರದ ರಾಜ್ಯ ಸರ್ಕಾರ, ಅಗತ್ಯ ವಸ್ತುಗಳ ಬೆಲೆ ಏರಿಕೆಯ ಸಮಸ್ಯೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲದೇ?

## ದಿನದ ಟ್ವೀಟ್

### ಪೇಟೆಂಟ್ ನೀತಿ ಸಡಿಲವಾಗಲಿ

**ಲಸಿಕೆ ಉತ್ಪಾದನೆಯ ಪ್ರಮಾಣ ಮತ್ತು ಅದರ ದರಕ್ಕೆ ಸಂಬಂಧಿಸಿದ ಸಮಸ್ಯೆಗೆ ಪೇಟೆಂಟ್ ನೀತಿ ಸಡಿಲಗೊಳಿಸುವುದು ದೊಡ್ಡ ಮಟ್ಟದ ಪರಿಹಾರವಾಗಬಲ್ಲದು. ಬಹುತೇಕ ರಾಜ್ಯಗಳು ಹಾಗೂ ದೇಶಗಳಲ್ಲಿನ ನಿಜವಾದ ಸಮಸ್ಯೆಯು ಅಲ್ಲಿನ ಉತ್ಪಾದನಾ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಲ್ಲ. ಸಮಸ್ಯೆ ಇರುವುದು ಬೌದ್ಧಿಕ ಹಕ್ಕುಸ್ವಾಮ್ಯ ನಿರ್ಬಂಧಗಳಲ್ಲಿ. ಅವನ್ನು ಯಾವುದೇ ಸಂದರ್ಭದಲ್ಲಿ ತೆಗೆದುಹಾಕಲು ಅವಕಾಶ ಇದ್ದೇ ಇದೆ.**

**ಶ್ರೀನಿವಾಸ್ ಕೊಡಲಿ,** ದತ್ತಾಂಶ ಸಂಶೋಧಕ

## 25 ವರ್ಷಗಳ ಹಿಂದೆ

ಬುಧವಾರ, 1-5-1996

- **ಆಯೋಗದ ಹಸ್ತಕ್ಷೇಪಕ್ಕೆ ಕೋರ್ಟ್ ಆಕ್ಷೇಪ**

**ಹೈದರಾಬಾದ್, ಏ. 30 (ಪಿಟಿಐ)**– ಚುನಾವಣಾ ಪ್ರಕ್ರಿಯೆಯ ಮೇಲೆ ನಿಯಂತ್ರಣ ಸ್ಥಾಪಿಸುವ ಹೆಸರಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ದಿನನಿತ್ಯದ ಕಾರ್ಯಾಚರಣೆಯಲ್ಲಿ ಚುನಾವಣಾ ಆಯೋಗ ಮಧ್ಯ ಪ್ರವೇಶಿಸುವುದು ಸಲ್ಲ ಎಂದು ಆಂಧ್ರ ಪ್ರದೇಶ ಹೈಕೋರ್ಟ್ ಇಂದು ತಿಳಿಸಿದೆ.

ಆಯೋಗದ ಅಧಿಕಾರವು ಚುನಾವಣೆಗೆ ಮುಂಚೆ ಆಡಳಿತ ಹಾಗೂ ವಿರೋಧ ಪಕ್ಷಗಳು ಮತದಾರರ ಮೇಲೆ ಅನಗತ್ಯ ಪ್ರಭಾವ ಬೀರುವುದನ್ನು ತಡೆಗಟ್ಟಲು ಸೀಮಿತವಾಗಿದೆ ಎಂದು ನ್ಯಾಯಪೀಠ ಹೇಳಿದೆ. ಹತ್ತಿ ರಫ್ತು ನೀತಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಅನಗತ್ಯ ಮಧ್ಯಪ್ರವೇಶ ತಡೆಯಬೇಕೆಂದು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಪರಿಶೀಲನೆ ಸಂದರ್ಭದಲ್ಲಿ ಪೀಠ ಈ ತೀರ್ಪು ನೀಡಿದೆ.

- **ಶಾಂತಿ ಭಂಗಕ್ಕೆ ಕಾಶ್ಮೀರ, ಸಿಖ್ ಉಗ್ರರ ಸಂಚು**

**ಜಮ್ಮು, ಏ. 30 (ಯುಎನ್‌ಐ)**– ಜಮ್ಮು ಮತ್ತು ಕಾಶ್ಮೀರದ ಚುನಾವಣೆಗೆ ಅಡ್ಡಿ ಉಂಟುಮಾಡಲು ಪಾಕಿಸ್ತಾನದ ಉಗ್ರಗಾಮಿಗಳು ಯತ್ನಿಸುತ್ತಿದ್ದಾರೆಂಬ ವದಂತಿಯ ಬೆನ್ನಲ್ಲೇ ದೇಶದಲ್ಲಿ ಅಸ್ಥಿರ ಸ್ಥಿತಿಯನ್ನು ಉಂಟು ಮಾಡಲು ಸಿಖ್ ಭಯೋತ್ಪಾದಕರು ಹಾಗೂ ಕಾಶ್ಮೀರದ ಉಗ್ರಗಾಮಿಗಳು ಒಗ್ಗೂಡಿರುವ ಸಂಗತಿಯನ್ನು ಭದ್ರತಾ ಪಡೆಗಳು ಪತ್ತೆ ಹಚ್ಚಿವೆ.

## 50 ವರ್ಷಗಳ ಹಿಂದೆ

ಶನಿವಾರ, 1-5-1971

- **ಮತ್ತೆ 51 ವಸ್ತುಗಳ ಆಮದು ವ್ಯಾಪಾರ ಸರ್ಕಾರದ ವಶಕ್ಕೆ**

**ನವದೆಹಲಿ, ಏ. 30**– ವರ್ಷಕ್ಕೆ 130 ಕೋಟಿ ರೂ.ಗಳಷ್ಟು ಮೌಲ್ಯದ 51 ವಸ್ತುಗಳ ಆಮದನ್ನು ಸರ್ಕಾರಿ ಸಂಸ್ಥೆಗಳಿಗೆ ವಹಿಸಿಕೊಡಲಾಗುವುದೆಂದು ವಿದೇಶ ವಾಣಿಜ್ಯ ಸಚಿವ ಎಲ್.ಎನ್.ಮಿಶ್ರಾ ಇಂದು ಪ್ರಕಟಿಸಿದರು.

- **ಕನ್ನಡಕ್ಕೆ ಶಾಸನಗಳ ಭಾಷಾಂತರ**

**ಬೆಂಗಳೂರು, ಏ. 30**– ಈಚೆಗೆ ಪುನರ್‌ರಚಿಸಲಾದ ಅಧಿಕೃತ ಭಾಷಾ (ಶಾಸನಗಳಿಗೆ ಸಂಬಂಧಿಸಿದ್ದು) ಆಯೋಗವು ಭಾಷಾ ನೀತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ಮಾಡುವುದರ ಜೊತೆಗೆ ಶಾಸನಗಳನ್ನು ಕನ್ನಡಕ್ಕೆ ಭಾಷಾಂತರಿಸುವ ವಿಷಯವನ್ನೂ ನೋಡಿಕೊಳ್ಳುವುದೆಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ವರದಿಗಾರರಿಗೆ ತಿಳಿಸಿದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶ್ರೀ ಕೆ.ಆರ್.ಗೋಪಿವಲ್ಲಭ ಅಯ್ಯಂಗಾರ್ ಅವರು ಸಮಿತಿಯ ಅಧ್ಯಕ್ಷರು. ವಿಧಾನ ಪರಿಷತ್ತಿನ ಮಾಜಿ ಸದಸ್ಯ ಶ್ರೀ ಎಂ.ಪಿ.ಎಲ್. ಶಾಸ್ತ್ರಿ, ವಿಧಾನ ಮಂಡಲದ ನಿವೃತ್ತ ಕಾರ್ಯದರ್ಶಿ ಶ್ರೀ ಜಿ.ಎಸ್.ವೆಂಕಟರಮಣ ಅಯ್ಯರ್ ಸದಸ್ಯರು.

- **ಐದು ದಿನಗಳ ವಾರ ಎಚ್ಚರದ ಪರಿಶೀಲನೆ**

**ಬೆಂಗಳೂರು, ಏ. 30**– ಸರ್ಕಾರಿ ಕಚೇರಿಗಳಿಗೆ ವಾರಕ್ಕೆ ಎರಡು ದಿನ ರಜ ಕೊಟ್ಟು ಕಚೇರಿಯ ಕಾಲವನ್ನು ಬದಲಾಯಿಸುವ ಬಗ್ಗೆ ಸಾರ್ವಜನಿಕಾಭಿಪ್ರಾಯ ಭಿನ್ನವಾಗಿರುವುದರಿಂದ ಈ ವಿಷಯದಲ್ಲಿ ಎಚ್ಚರಿಕೆಯ ಪರಿಶೀಲನೆ ಅಗತ್ಯವಾಗಿದೆಯೆಂದು ರಾಜ್ಯಪಾಲ ಶ್ರೀ ಧರ್ಮವೀರರವರು ಇಂದು ತಿಳಿಸಿದರು.

ರಾಷ್ಟ್ರಪತಿ, ಉಪರಾಷ್ಟ್ರಪತಿಗೆ ಅನ್ವಯಿಸುವ ನೀತಿ ಪ್ರಧಾನಿ, ಮುಖ್ಯಮಂತ್ರಿಗೂ ಅನ್ವಯವಾಗಬಾರದೇಕೆ?

# ಭಾಷಿಕ ಭ್ರಷ್ಟಾಚಾರದತ್ತ ಭಾರತ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

**‘ನಾಗರ** ನಾಲಗೆಗಳ ನವಭಾರತ’ ಎಂಬ ನನ್ನ ಲೇಖನವು 2019ರ ಏಪ್ರಿಲ್ ತಿಂಗಳಲ್ಲಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದಾಗ, ನನ್ನ ಸ್ನೇಹಿತರೊಬ್ಬರು ಪ್ರತಿಕ್ರಿಯಿಸಿದ್ದು ಈಗ ಮತ್ತೆ ನೆನಪಾಗುತ್ತಿದೆ. ಅವರು ಹೀಗೆಂದಿದ್ದರು: ‘ನಿಮ್ಮ ಲೇಖನ ಚೆನ್ನಾಗಿದೆ. ಆದರೆ ನಾಗರಗಳು ನಿಮ್ಮ ಮನೆಯ ಮುಂದೆ ಧರಣಿ ಸತ್ಯಾಗ್ರಹ ಮಾಡಬಹುದು’.

ಬಾಯಿಗೆ ಬಂದಂತೆ ವಿಷಪೂರಿತ ಮಾತುಗಳನ್ನಾಡುತ್ತಿದ್ದವರನ್ನು ದಿನಾಂಕ ಸಮೇತ ಉಲ್ಲೇಖಿಸಿ ಆ ಲೇಖನದಲ್ಲಿ ನಾನು ಪ್ರಸ್ತಾಪಿಸಿದ್ದೆ. ಅಂತಹ ನಿರ್ಲಜ್ಜ ನಾಲಗೆಯ ಧರ್ಮಾಂಧರನ್ನು ತಮಗೆ ಹೋಲಿಸಿ ಅವಮಾನ ಮಾಡಲಾಗಿದೆಯೆಂದು ನಾಗರಗಳು ಸಿಟ್ಟಾಗಿ ಧರಣಿ ಕೂರುತ್ತವೆಯೆಂಬ ಮಾತಿನಲ್ಲಿ, ಧರ್ಮಾಂಧರ ವಿಷವು ನಾಗರಗಳ ವಿಷಕ್ಕಿಂತ ಅಪಾಯಕಾರಿಯೆಂಬ ವಿಷಾದದ ವ್ಯಂಗ್ಯ ನನ್ನ ಸ್ನೇಹಿತರ ಮಾತಿನಲ್ಲಿತ್ತು.

ಅಂದಿನ ನನ್ನ ಉಲ್ಲೇಖಗಳಲ್ಲಿ ಧರ್ಮಾಂಧತೆಯ ಹಿಂಸಾತ್ಮಕ ಭಾಷೆ ಬಳಸಿದ ರಾಜಕಾರಣಿಗಳ ಹೆಸರೇ ಹೆಚ್ಚಿದ್ದವು. ಧರ್ಮಾಂಧತೆ ಮತ್ತು ಪಕ್ಷಾಂಧತೆಗಳು ಒಂದಾದಾಗ ಉಂಟಾಗುವ ವಿಷಾತ್ಮಕ ಪರಿಣಾಮವು ಪ್ರಜಾಸತ್ತಾತ್ಮಕ ಮೌಲ್ಯವನ್ನು ಮಣ್ಣು ಮುಕ್ಕಿಸುತ್ತದೆ ಎಂಬುದಕ್ಕೆ ಇತ್ತೀಚಿನ ಚುನಾವಣಾ ಭಾಷಣಗಳು ಪ್ರತ್ಯಕ್ಷ ಸಾಕ್ಷಿಯಾಗಿವೆ.

ಹಿಂಸೆಯೆನ್ನುವುದು ದೈಹಿಕ, ಮಾನಸಿಕ ಮತ್ತು ಭಾಷಿಕ ರೂಪಗಳಲ್ಲಿ ಪ್ರಕಟವಾಗುತ್ತದೆ. ಹಲ್ಲೆಗಳಲ್ಲಿ ದೈಹಿಕ ಹಿಂಸೆ; ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯ ಅಸಮಾನತೆಯಲ್ಲಿ ಮಾನಸಿಕ ಹಿಂಸೆ; ದೈಹಿಕ ಮತ್ತು ಮಾನಸಿಕ ಹಿಂಸೆಗಳನ್ನು ಪ್ರಚೋದಿಸುವ ಭಾಷಿಕ ಹಿಂಸೆ. ಈ ಮೂರೂ ಒಟ್ಟುಗೂಡಿದ ರಾಜಕೀಯ ವಾತಾವರಣಕ್ಕೆ ನಮ್ಮ ಚುನಾವಣೆಗಳನ್ನು ಬಳಸಲಾಗುತ್ತಿದೆ. ಈಗ ಪಶ್ಚಿಮ ಬಂಗಾಳದ ಚುನಾವಣೆಯನ್ನೇ ಗಮನಿಸಿ; ಪ್ರಧಾನಿ ನರೇಂದ್ರ ಮೋದಿಯವರು ಚುನಾವಣಾ ಪ್ರಚಾರ ವೇದಿಕೆಯಿಂದ ‘ದೀದಿ... ಓ.... ದೀದೀ’ ಎಂದು ದನಿಯೇರಿಸಿ ಕೂಗುತ್ತಾರೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ‘ಮೋದಿಯೇನು ದೇವಮಾನವರಾ?’ ಎಂದೆಲ್ಲ ಪ್ರಶ್ನಿಸಿ ಝಾಡಿಸುತ್ತಾರೆ. ಇಲ್ಲಿ ಮೋದಿ ಮತ್ತು ಮಮತಾ ಎಂಬ ವ್ಯಕ್ತಿಗಳಷ್ಟೇ ಮುಖ್ಯವಾಗುವುದಿಲ್ಲ. ಪ್ರಧಾನಿ ಮತ್ತು ಮುಖ್ಯಮಂತ್ರಿಗಳಿಬ್ಬರ ಬೀದಿ ಜಗಳದ ಭಾಷೆಯಾಗಿ ಈ ಪ್ರಸಂಗವನ್ನು ನೋಡಬೇಕು.

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸಂವಿಧಾನಾತ್ಮಕ ಸಂಸದೀಯ ನೇತಾರರು ವೋಟಿಗಾಗಿ ಸಲ್ಲದ ಭಾಷೆ ಬಳಸಿ ವೈಯಕ್ತಿಕ ನಿಂದನೆಗೆ ಇಳಿಯುವುದು, ಹಿಂಬಾಲಕರನ್ನು ಪ್ರಚೋದಿಸುವುದು, ಪ್ರಜಾಪ್ರಭುತ್ವದ ನಡೆ-ನುಡಿಗೆ ವಿರುದ್ಧವಾಗಿ ವರ್ತಿಸುವುದು ಖಂಡನೀಯ. ವಾಗ್ಮಿತೆ ಎನ್ನುವುದು ಅಬ್ಬರಿಸಿ ಬೊಬ್ಬಿರಿಯುವ ವಿಧಾನವಲ್ಲ ಎಂಬುದು ಕಡೇಪಕ್ಷ ರಾಷ್ಟ್ರ ಮಟ್ಟದ ನೇತಾರರ ವಿವೇಕವಾಗಬೇಕು. ಹಿಂದೆ ಪ್ರಧಾನಿಗಳಾಗಿದ್ದ ನೆಹರೂ, ಇಂದಿರಾ ಗಾಂಧಿ, ವಾಜಪೇಯಿ ಮುಂತಾದ ವಾಗ್ಮಿಗಳ ಭಾಷಣಗಳನ್ನು ನಾನು ಕೇಳಿದ್ದೇನೆ. ಲಾಲ್‌ಬಹದ್ದೂರ್ ಶಾಸ್ತ್ರಿ, ಮನಮೋಹನ ಸಿಂಗ್, ಐ.ಕೆ.ಗುಜ್ರಾಲ್, ದೇವೇಗೌಡರಂಥವರ ಮೆದುಮಾತುಗಳನ್ನು ಆಲಿಸಿದ್ದೇನೆ. ಕರ್ನಾಟಕದಲ್ಲಿ ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ಕಡಿದಾಳ್ ಮಂಜಪ್ಪ, ದೇವರಾಜ ಅರಸು, ವೀರೇಂದ್ರ ಪಾಟೀಲ್, ಬಂಗಾರಪ್ಪ, ಎಸ್.ಎಂ.ಕೃಷ್ಣ, ವೀರಪ್ಪ ಮೊಯಿಲಿ ಮುಂತಾದವರ ಭಾಷಣಗಳನ್ನು ಕೇಳಿದ್ದೇನೆ. ಇವರಲ್ಲಿ ಯಾರೂ ‘ವಿಷಯ ವಂಚಿತ’ ವಾಗ್ಮಿಗಳಲ್ಲ. ನಿಂದನೆಯ ಆನಂದದಲ್ಲಿ ಸಂಭ್ರಮಿಸುತ್ತಿರಲಿಲ್ಲ.

ಇಂದು ಸಂಸತ್ತು ಮತ್ತು ಶಾಸನಸಭೆಗಳಲ್ಲಿ ‘ಬಹುಪಾಲು’ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಮೊದಲ ಸಾಲಿನ ನೇತಾರರು ಚುನಾವಣಾ ಭಾಷಣ ಮಾಡುವುದೇ ಹೆಚ್ಚು. ಏಟಿಗೆ ತಿರುಗೇಟು ನೀಡುವ ಅನಿವಾರ್ಯತೆಯಿದ್ದರೂ ಅದು ದಾಖಲೆಗಳನ್ನು ಆಧರಿಸಿದ ವೈಚಾರಿಕ ವಾಗ್ವಾದವಾಗಬೇಕೇ ಹೊರತು ಪಕ್ಷಪೀಡಿತ ಅಪಕ್ವ ಭಾಷಣವಾಗಬಾರದು. ಆದರೆ ಆಂಗಿಕ ಅಭಿನಯದ ಮೂಲಕ ಮೇಜು ಕುಟ್ಟುವ, ಕೆಲವೊಮ್ಮೆ ‘ನೀನೊ ನಾನೊ’ ಎಂಬ ನಡೆನುಡಿಯ ನಾಯಕರೇ ಜನಪ್ರಿಯರೆನ್ನಿಸಿಕೊಳ್ಳುತ್ತಿದ್ದಾರೆ. ಸರ್ಕಾರ ಅಥವಾ ವಿರೋಧ ಪಕ್ಷಗಳ ಯೋಜನೆ, ಯೋಚನೆಗಳನ್ನು ಸೈದ್ಧಾಂತಿಕ ಪರಿಭಾಷೆಯ ಮೂಲಕ ಟೀಕಿಸುವ ಬದಲು ಬೈಗುಳ ಭಾಷೆಯಲ್ಲಿ ಬಾಯಿ ಬಡಾಯಿಸುವವರೇ ‘ಜನಮೆಚ್ಚುವ ನೇತಾರರು’ ಎಂಬಂತೆ ಬಿಂಬಿತರಾಗುತ್ತಿದ್ದಾರೆ. ಬಹುಪಾಲು ಜನರೂ ಇಂಥವರಿಗೇ ಪರಾಕು ಹೇಳುತ್ತಿದ್ದಾರೆ.

ಯಾವ ಮಾರ್ಗದಲ್ಲಾದರೂ ಸರಿ, ಚುನಾವಣೆಯಲ್ಲಿ ಜನರನ್ನು ಮರುಳು ಮಾಡುವ ‘ಮಾತು ಮಂತ್ರವಾದಿ’ಗಳೇ ಇಂದು ಬಹುಪಾಲು ಪಕ್ಷಗಳಿಗೆ ಬೇಕು. ಹೀಗಾಗಿ ಚುನಾವಣೆಯ ಬಹಿರಂಗ ಸಭೆಗಳು ಸವಾಲು- ಪ್ರತಿ ಸವಾಲುಗಳನ್ನು ಕೆಳಮಟ್ಟಕ್ಕೆ ಇಳಿಸಿ, ವೈಯಕ್ತಿಕ ನಿಂದನೆಯಿಂದ ಪ್ರಚೋದಿಸಿ, ಜಾತಿ-ಧರ್ಮಗಳನ್ನು ಧ್ರುವೀಕರಿಸಿ ಪ್ರಜಾಪ್ರಭುತ್ವದ ಶೀಲಹರಣ ಮಾಡುತ್ತಿವೆ.

ಚುನಾವಣೆಯ ಸಂದರ್ಭದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ ಆರ್ಭಟಾನಂದರು ಇಂದು ಸಂಸತ್ತು ಮತ್ತು ಶಾಸನಸಭೆಗಳ ಮೊದಲ ಸ್ಥಾನಕ್ಕೆ ಬರುತ್ತಿರುವುದು ವಿಷಾದಕರ ಸಂಗತಿ. ಅಷ್ಟೇ ಅಲ್ಲ, ಕೆಲವು ಧರ್ಮಾಧೀಶರಲ್ಲಿ ರಾಜಕಾರಣಿಗಳೂ ರಾಜಕಾರಣಿಗಳಲ್ಲಿ ಧರ್ಮಾಧೀಶರೂ ಪರಕಾಯ ಪ್ರವೇಶ ಮಾಡಿದ್ದಾರೆ.



ಇಂಥವರ ಅಂತರವಿಲ್ಲದ ನಡೆ, ನುಡಿಗಳು ಸಮಾಜದ ಸಾಮರಸ್ಯಕ್ಕೆ ಸವಾಲಾಗುತ್ತಿರುವುದೂ ಉಂಟು. ಇಂತಹ ಸನ್ನಿವೇಶವು ಚುನಾವಣೆಗಳಲ್ಲಿ ತನ್ನದೇ ಪ್ರಭಾವ, ಪರಿಣಾಮಗಳಿಗೆ ಕಾರಣವಾಗುತ್ತಿದೆ.

ಒಟ್ಟಾರೆ, ಸೈದ್ಧಾಂತಿಕ ರಾಜಕಾರಣದ ಜಾಗವನ್ನು ಸಮಯಸಾಧಕ ರಾಜಕಾರಣ ಆಕ್ರಮಿಸಿದೆ. ಬಾಯ್ತುಂಬ ಕೆಸರು ಉಗುಳುವುದು ಚುನಾವಣೆಯ ಚಾಳಿಯಾಗುತ್ತಿದೆ. ಇಂಥ ಚಾಳಿಯವರು ಚಾಳೀಸು ಹಾಕಿಕೊಂಡಾದರೂ ಬಸವಣ್ಣನವರ ‘ನುಡಿದರೆ ಮುತ್ತಿನ ಹಾರದಂತಿರಬೇಕು ಎಂಬ ವಚನವನ್ನೂ ‘ಅನ್ಯರಿಗೆ ಅಸಹ್ಯ ಪಡಬೇಡ| ತನ್ನ ಬಣ್ಣಿಸ ಬೇಡ| ಇದಿರ ಹಳಿಯಲು ಬೇಡ|’ ಎಂಬ ಸಂದೇಶಾತ್ಮಕ ಸಾಲುಗಳನ್ನೂ ಓದಿಕೊಳ್ಳಬೇಕು. ಅಮಲು ಹಿಡಿಸುವ ಅಬ್ಬರಕ್ಕೆ ಬದಲಾಗಿ ಅಲ್ಲಮರ ‘ಅರಿವೇ ಗುರು’ ಆದರ್ಶವಾಗಬೇಕು. ಗಾಂಧೀಜಿಯವರಿಂದ ಸಾಮಾಜಿಕ ಸಹಿಷ್ಣುತೆ, ಅಂಬೇಡ್ಕರ್ ಅವರಿಂದ ಸಾಮಾಜಿಕ ನ್ಯಾಯದ ಪ್ರಜ್ಞೆಯನ್ನು ಮನದ ಮಾತಾಗಿಸಿಕೊಳ್ಳಬೇಕು; ನೆಲದ ನುಡಿಯಾಗಿಸಬೇಕು.

ಆದರೆ ವೋಟಿಗಾಗಿ ಭಾಷಿಕ ಭ್ರಷ್ಟಾಚಾರದಲ್ಲಿ ತೊಡಗಿದವರು ಮಾನಸಿಕವಾಗಿಯೂ ಭ್ರಷ್ಟರೇ ಆಗಿರುತ್ತಾರೆ. ಸುಳ್ಳು ಭರವಸೆಗಳನ್ನು ಭಾಷಿಕ ಭ್ರಷ್ಟಾಚಾರದ ಭಾಗವಾಗಿಸುತ್ತಾರೆ. ತಂತಮ್ಮ ಸಂಸದೀಯ ಸ್ಥಾನಮಾನದ ಘನತೆ ಗಾಂಭೀರ್ಯಗಳನ್ನು ಗಾಳಿಗೆ ತೂರುವವರು ರಾಷ್ಟ್ರ ಮತ್ತು ರಾಜ್ಯಗಳಲ್ಲಿ ಮುಂಚೂಣಿ ನಾಯಕರಾಗುತ್ತಿದ್ದಾರೆ; ಕಡೇಪಕ್ಷ ಪ್ರಥಮ ಸ್ಥಾನದ ನೇತಾರರು ಮಾದರಿಯಾಗಿರಬೇಕೆಂಬ ಅಪೇಕ್ಷೆಯೂ ಅಂಚಿಗೆ ಸರಿಯುತ್ತಿದೆ. ಇಂತಹ ಸನ್ನಿವೇಶದಲ್ಲಿ ನನ್ನಲ್ಲೊಂದು ಪ್ರಶ್ನೆ ಮೂಡುತ್ತಿದೆ; ಪ್ರಧಾನಿ ಮತ್ತು ಮುಖ್ಯಮಂತ್ರಿಗಳು ತಂತಮ್ಮ ಪಕ್ಷದ ಪ್ರತಿನಿಧಿಗಳಾಗಿ ಚುನಾವಣೆ ಪ್ರಚಾರ ಮಾಡುವುದು ಸರಿಯೇ?

ನಿಜ; ಬಹುಮತ ಗಳಿಸಿದ ಪಕ್ಷದ ಶಾಸಕಾಂಗ/ ಸಂಸದೀಯ ನಾಯಕರಾಗಿ ಆಯ್ಕೆಯಾದವರು ಮುಖ್ಯಮಂತ್ರಿ/ ಪ್ರಧಾನ ಮಂತ್ರಿ ಆಗುತ್ತಾರೆ. ಆಯ್ಕೆಯಾಗುವವರೆಗೆ ಅವರು ಪಕ್ಷದ ಪ್ರತಿನಿಧಿಗಳು; ಆಯ್ಕೆಯಾದ ಮೇಲೆ ಅವರು ಪಕ್ಷದ ಪ್ರಧಾನಿಯಲ್ಲ, ದೇಶದ ಪ್ರಧಾನಿ; ಪಕ್ಷದ ಮುಖ್ಯಮಂತ್ರಿಯಲ್ಲ, ರಾಜ್ಯದ ಮುಖ್ಯಮಂತ್ರಿ. ತಂತಮ್ಮ ಪಕ್ಷದ ಪ್ರಣಾಳಿಕೆಯ ಅನುಷ್ಠಾನದ ಹೊಣೆ ಅವರ ಮೇಲಿದ್ದರೂ ಅವರು ಕೇವಲ ಪಕ್ಷದವರಾಗಿ ಉಳಿಯುವುದಿಲ್ಲ; ಯಾವುದೇ ಪಕ್ಷಕ್ಕೆ ಸೇರಿದ ಎಲ್ಲ ಜನರ ಒಳಿತಿಗಾಗಿ ದುಡಿಯುವ ಸಮಗ್ರ ಸಂಕೇತವಾಗಿ ಪ್ರಧಾನಿ ಅಥವಾ ಮುಖ್ಯಮಂತ್ರಿ ಸ್ಥಾನವನ್ನು ಪ್ರತಿನಿಧಿಸಬೇಕು. ಆದ್ದರಿಂದ ರಾಷ್ಟ್ರಪತಿ, ಉಪರಾಷ್ಟ್ರಪತಿಗಳಿಗೆ ಅನ್ವಯಿಸಿರುವ ನೀತಿ ನಿಯಮಗಳನ್ನು ಪ್ರಧಾನಿ ಮತ್ತು ಮುಖ್ಯಮಂತ್ರಿಗಳಿಗೂ ಯಾಕೆ ಅನ್ವಯಿಸಬಾರದು?

ಪಕ್ಷಗಳ ಪ್ರತಿನಿಧಿಯಾಗಿ ಸ್ಪರ್ಧಿಸಿದರೂ ಆಯ್ಕೆಯಾದ ಮೇಲೆ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಯವರು ಪಕ್ಷದೂರವಾದ ಪ್ರಜಾಪ್ರಭುತ್ವದ ಪ್ರತಿನಿಧಿಗಳಾಗುತ್ತಾರೆ; ಚುನಾವಣೆ ಪ್ರಚಾರಗಳಿಗಂತೂ ಬರುವಂತಿಲ್ಲ. ಈ ಪದ್ಧತಿಯನ್ನು ರಾಷ್ಟ್ರ ಮತ್ತು ರಾಜ್ಯದ ಪ್ರಜಾಸತ್ತಾತ್ಮಕ ಪ್ರಥಮ ಸ್ಥಾನಿಗಳಾದ ಪ್ರಧಾನಿ ಮತ್ತು ಮುಖ್ಯಮಂತ್ರಿಗಳಿಗೆ ಯಾಕೆ ಅನ್ವಯಿಸಬಾರದು? ಈ ಅಂಶವನ್ನು ಒಂದು ತಿದ್ದುಪಡಿಯಾಗಿ ಸಂವಿಧಾನದಲ್ಲಿ ಸೇರಿಸಬಹುದಲ್ಲವೇ? ಇದು ಮತ್ತಷ್ಟು ಚರ್ಚೆ ಮತ್ತು ಚಿಂತನೆಗಳನ್ನು ಬಯಸುವ ನನ್ನ ಪ್ರಶ್ನೆ.

## ಚುರುಮುರಿ

### ಈ ಮೂರನ್ನು ಬಿಟ್ಟು...

• ಕೆ.ವಿ.ರಾಜಲಕ್ಷ್ಮಿ

**‘ಯಾಕೋ** ಕಾಫಿ ಉಪ್ಪುಪ್ಪು...’ ಮುಖ ಕಿವುಚಿದೆ.

‘ಅಮ್ಮನ ಕನ್ನಡಕ ಕೈಜಾರಿ ಬಿತ್ತು, ಸಕ್ಕರೆ, ಉಪ್ಪು ವ್ಯತ್ಯಾಸ ತಿಳಿದೆ ಹೀಗಾಯ್ತು, ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ’ ನನ್ನವಳ ಬಿನ್ನಹ.

‘ಏನಾದ್ರೂ ಮಾಡಿ, ನನಗೆ ಇನ್ನೊಂದು ಕನ್ನಡಕ ಅರ್ಜೆಂಟಾಗಿ ಬೇಕು. ಕನ್ನಡಕ ಹಾಕದಿದ್ರೆ ನನಗೆ ಏನೂ ಕಾಣವಲ್ದು. ಅದಕ್ಕೇ ಹೀಗೆ ಎಡವಟ್ಟು’ ಅತ್ತೆ ಅಲವತ್ತುಕೊಂಡರು.

ನಿಜ, ಸುಲೋಚನಾರಹಿತ ಅತ್ತೆಯನ್ನು ನೋಡಲಾಗದು ಆದರೆ...

‘ಈ ಲಾಕ್‌ಡೌನ್‌ನಲ್ಲಿ ಒದಗಿಸೋದು ಕಷ್ಟವೇ. ಯಾಕಂದ್ರೆ ಮಾರ್ಗಸೂಚಿಯಲ್ಲಿ ಕಾಣಿಸಿರೋ ಹಾಲು, ತರಕಾರಿ, ದಿನಸಿ, ಔಷಧಿ ಬ್ರ್ಯಾಕೆಟ್ಟಿಗೆ ಅದು ಸೇರೋಲ್ಲ. ಅಂದ್ರೆ ಕನ್ನಡಕ ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಇಲ್ಲ. ಹಾಗೊಮ್ಮೆ ಅಗತ್ಯ ಅಂದ್ರೂ ಕನ್ನಡಕದ ಅಂಗಡಿ ತೆಗೆಯೋದು ಹತ್ತು ಗಂಟೆ ಮೇಲೆ. ನಿಮಗೆ ಗೊತ್ತಿರೋ ಹಾಗೆ ಹತ್ತರ ಮೇಲೆ ಕತ್ತು ಹೊರಹಾಕಿದರೆ ಕುತ್ತು ಗ್ಯಾರಂಟಿ’ ಹೊರಗೆ ಹೋಗಲಾಗದು ಎಂದು ಮೆಲ್ಲಗೆ ಜಾರಿಕೊಂಡೆ.

‘ಅಗತ್ಯ ಅನ್ನೋದು ಸಂದರ್ಭಾನುಸಾರ ರಿಲೇಟಿವ್ ಟರ್ಮ್ ಅಲ್ವೇನಪ್ಪಾ? ಉದಾಹರಣೆಗೆ ನಮಗೆ ಮೊಬೈಲ್, ಇಂಟರ್ನೆಟ್’ ಪುಟ್ಟಿಯ ಸಮರ್ಥನೆ.

ಅಷ್ಟರಲ್ಲೇ ಕಣ್ಣು ಮಾತ್ರ ಕಾಣಿಸುವಂತೆ ಮುಖಗವಸು ಎಳೆದುಕೊಂಡು ಕಂಠಿ ಬಂದ.

‘ಬಾಸ್‌ಗೂ ಮೇಡಂಗೂ ಲಸಿಕೆಗೆ ಟೋಕನ್ ತಗೊಂಡು ಬಂದೆ. ಆ ಕೆಲಸ ಮುಗಿದರೆ ಒಂದಷ್ಟು ಕಿಸೆ ತುಂಬುತ್ತೆ’ ಹೊಟ್ಟೆಯುರಿಸಿದ.

‘ನಿಮ್ಮಿಂದ ಒಂದು ಉಪಕಾರವಾಗಬೇಕಿತ್ತು’ ನನ್ನವಳು ನನ್ನನ್ನು ಬೈಪಾಸ್ ಮಾಡಿದಳು.

‘ಆಮ್ಲಜನಕ, ಆಂಬುಲೆನ್ಸ್, ಆಸ್ಪತ್ರೇಲಿ ಮಂಚ ಮೂರು ಹೊರತುಪಡಿಸಿ ಏನಾದ್ರೂ ಕೇಳಬಹುದು’ ಎಂದ.

‘ಅಯ್ಯೋ ಅಷ್ಟು ದೊಡ್ಡ ತುರ್ತು ಇಲ್ಲ, ಕೇವಲ ಕನ್ನಡಕವಷ್ಟೇ. ಅದಿಲ್ಲದೇ ಅಡುಗೆಮನೆಯಲ್ಲಿ ಕೊಂಚ ಅನಾಹುತ’.

‘ಹಾಗಿದ್ರೆ ಮರೆತುಬಿಡಿ, ನಾನು ವ್ಯವಸ್ಥೆ ಮಾಡ್ತೀನಿ’ ಎಂದ.

‘ಫ್ರೆಶ್ ಡಿಕಾಕ್ಷನ್ ಕಾಫಿ ತಂದೆ, ಕುಡಿದು ಹತ್ತರ ಒಳಗೆ ಮನೆ ಸೇರ್ಕೊಳ್ಳಿ’ ಕ್ಷಣಾರ್ಧದಲ್ಲಿ ಬಿಸಿಯಾಡುವ ಕಾಫಿ ಕಂಠಿಯ ಕೈಯಲ್ಲಿತ್ತು.

## ಸಂಗತ

# ಬೇಕಾಗಿದೆ ಸಮತೋಲಿತ ಶಿಕ್ಷಣ

**ಎಲ್ಲಾ ಸಾಮಾಜಿಕ ಹಿನ್ನೆಲೆಯ ಮಕ್ಕಳು ಇರುವ ಶಾಲೆಗಳಲ್ಲಿ ಕಲಿಯುವವರು ಉತ್ತಮ ವ್ಯಕ್ತಿತ್ವ ಕಟ್ಟಿಕೊಳ್ಳಲು ನೆರವಾಗುವ ಅನುಭವಗಳನ್ನು ಹೊಂದುತ್ತಾರೆ**

• ಡಾ. ಎಚ್.ಬಿ.ಚಂದ್ರಶೇಖರ್

**ರಾಜ್ಯದ** ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯ ಚಿತ್ರಣದ ವಿಶ್ಲೇಷಣೆ ಕುತೂಹಲಕಾರಿ ಅಂಶಗಳನ್ನು ಹೊರಗೆಡಹುತ್ತದೆ. 2015- 16ರಲ್ಲಿ 1ರಿಂದ 10ನೇ ತರಗತಿಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು 101.14 ಲಕ್ಷ ಇತ್ತು. 2019- 20ರಲ್ಲಿ ಈ ಸಂಖ್ಯೆಯು 104.35 ಲಕ್ಷದಷ್ಟಾಗಿದೆ. ನಾಲ್ಕು ವರ್ಷಗಳ ಅವಧಿಯಲ್ಲಿ 3.21 ಲಕ್ಷದಷ್ಟು ವಿದ್ಯಾರ್ಥಿಗಳು ಹೆಚ್ಚಾದಾಗ್ಯೂ ಸರ್ಕಾರಿ ಶಾಲೆ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯಲ್ಲಿ ಕುಸಿತ ಕಂಡಿದೆ.

ಇದೇ ಅವಧಿಯಲ್ಲಿ ರಾಜ್ಯ ಹಾಗೂ ಕೇಂದ್ರ ಪಠ್ಯಕ್ರಮ ಬೋಧಿಸುವ ಒಟ್ಟು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು 49.86 ಲಕ್ಷದಿಂದ 45.83 ಲಕ್ಷಕ್ಕೆ, ಅಂದರೆ 4.03 ಲಕ್ಷದಷ್ಟು ಇಳಿಕೆಯಾಗಿದೆ. ಅನುದಾನಿತ ಶಾಲೆಗಳಲ್ಲಿ ಇಳಿಕೆಯ ಪ್ರಮಾಣ 1.97 ಲಕ್ಷದಷ್ಟಿದೆ. ಆದರೆ ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು 36.51 ಲಕ್ಷದಿಂದ 45.34 ಲಕ್ಷಕ್ಕೆ, ಅಂದರೆ 8.83 ಲಕ್ಷದಷ್ಟು ಏರಿಕೆಯಾಗಿದೆ.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕುಸಿತದ ಟ್ರೆಂಡ್ ಹಲವಾರು ವರ್ಷಗಳಿಂದ ಇರುವುದನ್ನು ಗಮನಿಸಬಹುದಾಗಿದೆ. 2006- 07ರಿಂದ 2015- 16ರವರೆಗೆ, ಅಂದರೆ 9 ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯಲ್ಲಿ 15.59 ಲಕ್ಷದಷ್ಟು ಹಾಗೂ ಅನುದಾನಿತ ಶಾಲೆಗಳಲ್ಲಿ 0.77 ಲಕ್ಷದಷ್ಟು ಕಡಿಮೆಯಾಗಿದೆ. ಆದರೆ ಇದೇ ಅವಧಿಯಲ್ಲಿ ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 13.97 ಲಕ್ಷದಷ್ಟು ಹೆಚ್ಚಾಗಿದೆ.

2006- 07ರಿಂದ 2019- 20ರವರೆಗಿನ 13 ವರ್ಷಗಳ ಅವಧಿಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಕ್ರಮವಾಗಿ 19.62 ಲಕ್ಷ ಹಾಗೂ 2.74 ಲಕ್ಷ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಇದೇ ಅವಧಿಯಲ್ಲಿ ಅನುದಾನರಹಿತ ಶಾಲೆಗಳಲ್ಲಿ 22.80 ಲಕ್ಷದಷ್ಟು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗಿದೆ. ಸರ್ಕಾರಿ ಶಾಲೆಗಳಲ್ಲಿ ವಾರ್ಷಿಕ 1.50 ಲಕ್ಷದಷ್ಟು ವಿದ್ಯಾರ್ಥಿಗಳ ಸಂಖ್ಯೆ ಇಳಿಕೆಯಾಗಿದ್ದರೆ, ಅನುದಾನರಹಿತ ಶಾಲೆಗಳಲ್ಲಿ 1.75 ಲಕ್ಷದಷ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ.

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯ ನಷ್ಟ ತಡೆಗಟ್ಟಲು ಗಂಭೀರ ಪ್ರಯತ್ನಗಳ ಅಗತ್ಯವನ್ನು ಈ ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ. ಸರ್ಕಾರದ ಪ್ರಯತ್ನಗಳ ಜೊತೆಗೆ ನಾಗರಿಕ ಸಮಾಜದ ಸಕ್ರಿಯ ಭಾಗವಹಿಸುವಿಕೆಯಿಂದ ಮಾತ್ರ ಸರ್ಕಾರಿ ಶಾಲೆಗಳನ್ನು ಆಕರ್ಷಣೀಯಗೊಳಿಸಲು ಸಾಧ್ಯ. ಜನರ ವಿಶ್ವಾಸವನ್ನು ಮರಳಿ ಪಡೆಯುವ ಮೂಲಕ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯ.

ಸಾಮಾಜಿಕ ವರ್ಗವಾರು ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯ ವಿಶ್ಲೇಷಣೆಯಲ್ಲಿ ಕಂಡುಬಂದಂತೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಲಿಯುತ್ತಿದ್ದಾರೆ. ಕುತೂಹಲದ ವಿಷಯವೆಂದರೆ, ಇದಕ್ಕೆ ವ್ಯತಿರಿಕ್ತವಾಗಿ ಮುಸ್ಲಿಂ ಸಮುದಾಯದ ಹೆಚ್ಚು ಮಕ್ಕಳು ಅನುದಾನರಹಿತ ಶಾಲೆಗಳಲ್ಲಿ ಕಲಿಯುತ್ತಿರುವುದು.

2019-20ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ವಿಧದ ಶಾಲೆಗಳ 1ರಿಂದ 10ನೇ ತರಗತಿಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮುಸ್ಲಿಂ ವಿದ್ಯಾರ್ಥಿಗಳ ವಿವರಗಳನ್ನು ಗಮನಿಸೋಣ. ಪರಿಶಿಷ್ಟ ಜಾತಿಯ ಒಟ್ಟು 19.83 ಲಕ್ಷದಷ್ಟು ವಿದ್ಯಾರ್ಥಿಗಳು ಕಲಿಯುತ್ತಿದ್ದು, ಅವರಲ್ಲಿ ಸರ್ಕಾರಿ ಶಾಲೆಗಳಲ್ಲಿ 11.72 ಲಕ್ಷ (ಶೇ 59), ಅನುದಾನಿತ ಶಾಲೆಗಳಲ್ಲಿ 2.89 ಲಕ್ಷ (ಶೇ 14.57) ಹಾಗೂ ಅನುದಾನರಹಿತ ಶಾಲೆಗಳಲ್ಲಿ 5.21 ಲಕ್ಷ (ಶೇ 26.27) ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ.

ಪರಿಶಿಷ್ಟ ಪಂಗಡದ ಒಟ್ಟು 7.96 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದು, ಅವರಲ್ಲಿ ಸರ್ಕಾರಿ ಶಾಲೆಗಳಲ್ಲಿ 5.28 ಲಕ್ಷ (ಶೇ 66.3), ಅನುದಾನಿತ ಶಾಲೆಗಳಲ್ಲಿ 0.96 ಲಕ್ಷ (ಶೇ 12) ಹಾಗೂ ಅನುದಾನರಹಿತ ಶಾಲೆಗಳಲ್ಲಿ 1.71 ಲಕ್ಷ (ಶೇ 21.5) ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಮುಸ್ಲಿಂ ಸಮುದಾಯದ ಒಟ್ಟು 16.55 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದು ಅವರಲ್ಲಿ ಸರ್ಕಾರಿ ಶಾಲೆಗಳಲ್ಲಿ 6.05 ಲಕ್ಷ (ಶೇ 36.58), ಅನುದಾನಿತ ಶಾಲೆಗಳಲ್ಲಿ 2.24 ಲಕ್ಷ (ಶೇ 13.58) ಹಾಗೂ ಅನುದಾನರಹಿತ ಶಾಲೆಗಳಲ್ಲಿ 8.24 ಲಕ್ಷ (ಶೇ 49.8) ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಶಾಲೆ ಒಂದು ಚಿಕ್ಕ ಸಮಾಜ. ಯಾವ ಶಾಲೆಯಲ್ಲಿ ಎಲ್ಲಾ ಸಾಮಾಜಿಕ ಹಿನ್ನೆಲೆಯ ಮಕ್ಕಳು ಇರುತ್ತಾರೋ ಅಂತಹ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ಕಟ್ಟಿಕೊಳ್ಳಲು ನೆರವಾಗುವ ಅನುಭವಗಳನ್ನು ಹೊಂದುತ್ತಾರೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಶೇ 73.57, ಪರಿಶಿಷ್ಟ ಪಂಗಡದ ಶೇ 78.3ರಷ್ಟು ವಿದ್ಯಾರ್ಥಿಗಳು ಇರುವುದನ್ನು ಅಸಮತೋಲನದ ಸಂಕೇತವಾಗಿ ಗಮನಿಸಬಹುದು.

ವಿದ್ಯಾರ್ಥಿಗಳ ದಾಖಲಾತಿ ಚಿತ್ರಣದ ವಿಶ್ಲೇಷಣೆಯ ಆಧಾರದ ಮೇಲೆ ಮುಂದಿನ ಹತ್ತು ವರ್ಷಗಳ ಅವಧಿಗೆ ಶಿಕ್ಷಣ ಕ್ಷೇತ್ರದ ಸಮತೋಲಿತ ಬೆಳವಣಿಗೆಯ ಅಗತ್ಯವನ್ನು ಮನಗಾಣಬೇಕಾಗಿದೆ. ಅದಕ್ಕೆ ತಕ್ಕಂತೆ ವಿವಿಧ ರೀತಿಯ ಶಾಲೆಗಳ ಬೆಳವಣಿಗೆ ಹಾಗೂ ವಿವಿಧ ಸಾಮಾಜಿಕ ವರ್ಗದ ವಿದ್ಯಾರ್ಥಿಗಳು ಎಲ್ಲಾ ವಿಧದ ಶಾಲೆಗಳಲ್ಲಿ ದಾಖಲಾಗುವಂತೆ ಅಗತ್ಯ ಉಪಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ.

## ವಾಚಕರ ವಾಣಿ

### ಅಂಚೆ ಕಚೇರಿ ಎಟಿಎಂ ಜನಸ್ನೇಹಿಯಾಗಲಿ

ಅಂಚೆ ಕಚೇರಿಗಳಲ್ಲಿ ಎಟಿಎಂಗಳನ್ನು ತೆರೆದಿರುವುದು ಸರಿಯಷ್ಟೆ. ಆದರೆ ಅವು ಕೇವಲ ಮುಖ್ಯ ಕಚೇರಿಗೆ ಮೀಸಲಾಗಿರಬಾರದು. ಹೆಚ್ಚಿನ ಅಂಚೆ ಕಚೇರಿಗಳಲ್ಲಿ ಈ ವ್ಯವಸ್ಥೆ ಜಾರಿಯಾಗಿ ಅದು ಜನರ ಸೇವೆಗೆ ಅನುವಾಗಬೇಕು. ಅಲ್ಲದೆ ಇರುವ ಕೆಲವೇ ಎಟಿಎಂಗಳಲ್ಲಿ ಹೆಚ್ಚಿನವು ಕೆಟ್ಟು ಹೋಗಿರುತ್ತವೆ. ಹೀಗಾಗಿ, ಸಾಧ್ಯವಾದಷ್ಟೂ ಅವುಗಳನ್ನು ದುರಸ್ತಿ ಮಾಡಿಸಿ ಸಾರ್ವಜನಿಕರ ಉಪಯೋಗಕ್ಕೆ ಬರುವಂತೆ ಮಾಡಿದರೆ ಒಳ್ಳೆಯದು.

**ಬಾಲಕೃಷ್ಣ ಎಂ.ಆರ್.,** ಬೆಂಗಳೂರು

### ಅವೈಜ್ಞಾನಿಕ ಸಮಯ ಮಿತಿ

ಪ್ರಸಕ್ತ ಲಾಕ್‌ಡೌನ್ ಅವಧಿಯಲ್ಲಿ ಅಗತ್ಯ ವಸ್ತುಗಳ ಖರೀದಿಗೆ ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ಅವಕಾಶ ನೀಡಿರುವುದು ಅತ್ಯಂತ ಅವೈಜ್ಞಾನಿಕವಾದುದು. ಇದರಿಂದ ನಿಗದಿತ ಅವಧಿಯೊಳಗೆ ಸಾರ್ವಜನಿಕರೆಲ್ಲರೂ ಮಾರುಕಟ್ಟೆಗೆ ಬರುವುದು ಅನಿವಾರ್ಯವಾಗಿ, ಸಹಜವಾಗಿಯೇ ಜನದಟ್ಟಣೆ ಉಂಟಾಗುತ್ತದೆ. ಮತ್ತದೇ ಲಾಠಿಚಾರ್ಜ್, ಮತ್ತದೇ ಗೋಳು. ಕಳೆದ ವರ್ಷವೂ ಇಂಥದ್ದೇ ತೀರ್ಮಾನ ತೆಗೆದುಕೊಂಡಾಗ ಆದ ಸಮಸ್ಯೆಗಳು ಸರ್ಕಾರದ ಗಮನದಲ್ಲಿ ಇಲ್ಲವೇ?

ತರಕಾರಿ, ದಿನಸಿ ವ್ಯಾಪಾರಕ್ಕೆ ದಿನವಿಡೀ ಅವಕಾಶ ನೀಡಿದರೆ ಸಾರ್ವಜನಿಕರು ಅಂತರ ಕಾಯ್ದುಕೊಂಡು ಬೇರೆ ಬೇರೆ ಸಮಯದಲ್ಲಿ ಮಾರುಕಟ್ಟೆಗೆ ಬಂದು ಹೋಗಲು ಅನುಕೂಲವಾಗುತ್ತದೆ. ಇದರಿಂದ ಜನಸಾಂದ್ರತೆಯನ್ನು ಬಹುತೇಕ ಕಡಿಮೆ ಮಾಡಬಹುದು. ಪೊಲೀಸರಿಗೂ ತಲೆಬಿಸಿ ಕಡಿಮೆಯಾಗುತ್ತದೆ.

**ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ,** ಕೊಪ್ಪಳ

### ಅವರವರ ಅಭಿಪ್ರಾಯ ಅವರವರದು

ದಕ್ಷಿಣ ಕನ್ನಡ ಜಿಲ್ಲೆಯ ವ್ಯಕ್ತಿಯೊಬ್ಬರು ಫೇಸ್‌ಬುಕ್ ಖಾತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅವಹೇಳನಕಾರಿಯಾಗಿ ಪೋಸ್ಟ್ ಹಾಕಿದ್ದಾರೆ. ಅವರ ಮೇಲೆ ಕಾನೂನಿನ ವ್ಯಾಪ್ತಿಯಲ್ಲಿ ಅವಕಾಶಗಳಿದ್ದರೆ ಕ್ರಮ ಕೈಗೊಳ್ಳಲು ಯಾರದೂ ಅಭ್ಯಂತರವಿಲ್ಲ. ಆದರೆ ಈ ಪ್ರಕರಣವನ್ನು ಮುಂದೆ ಮಾಡಿ ಅವರ ಪತ್ನಿಯನ್ನು ಬ್ಯಾರಿ ಸಾಹಿತ್ಯ ಅಕಾಡೆಮಿ ನಾಮನಿರ್ದೇಶಿತ ಸದಸ್ಯ ಸ್ಥಾನದಿಂದ ವಜಾಗೊಳಿಸಲಾಗಿದೆ. ಅಕಾಡೆಮಿಯ ಅಧ್ಯಕ್ಷರ ನಿರ್ದೇಶನದ ಮೇರೆಗೆ ರಿಜಿಸ್ಟ್ರಾರ್ ಈ ಕ್ರಮ ಕೈಗೊಂಡಿದ್ದಾರೆ. ಗಂಡ ತಪ್ಪು ಮಾಡಿದ್ದರೆ ಹೆಂಡತಿಗೆ ಶಿಕ್ಷೆ ಕೊಡುವುದು ಯಾವ ನ್ಯಾಯ? ಪ್ರತಿಯೊಬ್ಬರೂ ತಮ್ಮದೇ ಆದ ಅಭಿಪ್ರಾಯವನ್ನು ಹೊಂದಿರುತ್ತಾರೆ. ಗಂಡ ತಪ್ಪು ಮಾಡಿದ ಎಂದು ಹೇಳಿ ಹೆಂಡತಿಯ ಮೇಲೆ ಕ್ರಮ ಕೈಗೊಳ್ಳುವುದು ಅಥವಾ ಹೆಂಡತಿ ತಪ್ಪು ಮಾಡಿದಳು ಎಂದು ಗಂಡನ ಮೇಲೆ ಕ್ರಮ ಕೈಗೊಳ್ಳುವುದನ್ನು ಯಾರೂ ಒಪ್ಪಲಾಗದು. ಅವರವರ ಅಭಿಪ್ರಾಯ ಅವರವರದಾಗಿರುತ್ತದೆ.

ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಅಂಥ ಸಂದರ್ಭದಲ್ಲೆಲ್ಲ ಅವರ ಸಂಬಂಧಿಕರ ಮೇಲೆ ಕ್ರಮ ಜರುಗಿಸುವುದು ಕಾನೂನುಬಾಹಿರವಾಗಿರುತ್ತದೆ. ಇದನ್ನು ಇಲ್ಲಿಗೇ ಬಿಟ್ಟರೆ ಅನೇಕರ ಮೇಲೆ ಇಂಥ ಕ್ರಮಗಳನ್ನು ಜರುಗಿಸುವ ಪ್ರಯತ್ನಗಳು ನಡೆಯಬಹುದು. ಆದ್ದರಿಂದ ರಿಜಿಸ್ಟ್ರಾರ್ ಕೂಡಲೇ ತಮ್ಮ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು.

**ಈ.ಬಸವರಾಜು,** ಬೆಂಗಳೂರು

### ಹೀಗೆ ಮಾಡಿ...

ಕೋವಿಡ್ ಕೈಗೆ ಸಿಕ್ಕಿ
ಆಕ್ಸಿಜನ್ ಪಡೆದು
ಬದುಕಿ ಬಂದವರೇ
ಖಂಡಿತ ಇದನ್ನು
ತಪ್ಪದೇ ಮಾಡಿ,
ನಿಮ್ಮ ಜೀವಮಾನದಲ್ಲಿ
ಎಲ್ಲೆಲ್ಲಿ ಎಷ್ಟೆಷ್ಟು
ಸಾಧ್ಯವೋ
ಅಷ್ಟಷ್ಟು
ಗಿಡಗಳನ್ನು ನೆಡಿ.

**ಶಾಂತಿನಾಥ ಕೆ. ಹೋತಪೇಟಿ**
ಹುಬ್ಬಳ್ಳಿ

### ಅಂಬಿಗನ ಔದಾರ್ಯಕ್ಕೆ ಸಾಟಿಯಿಲ್ಲ

ಚಂದ್ರಯಾನದ ಅಪೊಲೊ-11 ನೌಕೆಯ ಪೈಲಟ್ ಮೈಕೆಲ್ ಕಾಲಿನ್ಸ್ ವಿಧಿವಶರಾಗಿದ್ದು (ಪ್ರ.ವಾ., ಏ. 29) ವ್ಯಥೆ ತಂದಿತು. ‘ನೀವು ನೀಲ್ ಮತ್ತು ಆಲ್ಡ್ರಿನ್‌ರನ್ನು ಚಂದ್ರನಲ್ಲಿ ಇಳಿಸಿದಿರಿ, ಆದರೆ ನೀವು ಇಳಿಯದಿದ್ದಕ್ಕೆ ಬೇಸರವಾಗಲಿಲ್ಲವೇ’ ಎಂಬ ಪ್ರಶ್ನೆಗೆ ಕಾಲಿನ್ಸ್ ಅಂದು ಪ್ರತಿಕ್ರಿಯಿಸಿದ್ದು ಎಂತಹವರನ್ನೂ ಮೂಕರನ್ನಾಗಿಸುವಂಥದ್ದು. ‘ಅವರಿಬ್ಬರನ್ನೂ ಇಳಿಸಿ ಪುನಃ ಸುರಕ್ಷಿತವಾಗಿ ಧರೆಗೆ ಕರೆತಂದೆನಲ್ಲ. ಈ ತೃಪ್ತಿ ನನ್ನ ಪಾಲಿಗೆ ಚಂದ್ರನಲ್ಲಿ ಕಾಲೂರುವುದಕ್ಕಿಂತಲೂ ದೊಡ್ಡದು’ ಎಂದು ಅವರು ಹೇಳಿದ್ದರು. ನಿತ್ಯವೂ ಪರಸ್ಪರ ನಿಂದನೆ, ಆರೋಪ, ಪೈಪೋಟಿಯ ಸುದ್ದಿಗಳನ್ನು ಓದಿ, ಕೇಳಿ ಬೇಸತ್ತಿದ್ದ ಮನಸ್ಸಿಗೆ ಕಾಲಿನ್ಸ್ ಅವರ ಹೇಳಿಕೆಯ ಮೆಲುಕು ನೀಡಿದ ಮುದ ಅಷ್ಟಿಷ್ಟಲ್ಲ.

**ಬಿಂಡಿಗನವಿಲೆ ಭಗವಾನ್,** ಬೆಂಗಳೂರು

### ಅಂತಿಮ ಯಾತ್ರೆಗೆ ಐವರ ಮಿತಿ: ಅವಾಸ್ತವಿಕ ನಿಯಮ

ಕೊರೊನಾ ಸೋಂಕು ತಡೆಗಟ್ಟುವ ದಿಸೆಯಲ್ಲಿ ಸರ್ಕಾರ ತೆಗೆದುಕೊಳ್ಳುತ್ತಿರುವ ಕಠಿಣ ಕ್ರಮಗಳು ಸ್ವಾಗತಾರ್ಹ. ಆದರೆ ಕರ್ನಾಟಕ ಎಂದರೆ ಕೇವಲ ಬೆಂಗಳೂರಲ್ಲ, ಸಾವಿರಾರು ಹಳ್ಳಿಗಳಿರುವ ವಿಶಾಲವಾದ ಭೂಪ್ರದೇಶ ಎಂಬ ಎಚ್ಚರದಿಂದ ನೂತನ ನಿಯಮಾವಳಿಗಳನ್ನು ಜಾರಿಗೆ ತರಬೇಕು.

ನಮ್ಮ ದೇಶದ ಹಳ್ಳಿಗಳಿಗೆ ಆಂಬುಲೆನ್ಸ್ ಸೌಲಭ್ಯ ಇಲ್ಲ. ಜಾತಿಗೊಂದು, ಧರ್ಮಕ್ಕೊಂದು ಸ್ಮಶಾನ ಇರುವ ಹಳ್ಳಿಗಳಿವೆ. ಕೆಲವು ಹಳ್ಳಿಗಳಲ್ಲಿ ಮೃತದೇಹವನ್ನು ಆ ಹಳ್ಳಿಯಿಂದ ಸ್ಮಶಾನಕ್ಕೆ ಒಯ್ಯಬೇಕಾದರೆ ಬಿದಿರಿನ ಚಟ್ಟ ಬಳಸಿ, ಹೆಗಲ ಮೇಲೆ ನಾಲ್ಕು ಜನ ಮೂರ್ನಾಲ್ಕು ಕಿ.ಮೀ. ಹೊತ್ತೊಯ್ಯಬೇಕು. ಆ ಸಮಯದಲ್ಲಿ ಆ ನಾಲ್ಕು ಜನ ಬದಲಾವಣೆ ಆಗುತ್ತ ಸಾಗಲು ಎಂಟು ಜನ ಬೇಕಾಗುತ್ತದೆ. ಪುರೋಹಿತರು, ಕಟ್ಟಿಗೆ ಒಯ್ಯುವವರು, ಸಂಪ್ರದಾಯ ಪಾಲಿಸುವ ಕುಟುಂಬದ ಜನ ಸೇರಿದಂತೆ ಇಪ್ಪತ್ತು ಜನರಾದರೂ ಆಗೇ ಆಗುತ್ತಾರೆ. ವಾಸ್ತವ ಹೀಗಿರುವಾಗ, ಅಂತಿಮ ಯಾತ್ರೆಗೆ ಕೇವಲ ಐದು ಜನರ ನಿರ್ಬಂಧ ಸರಿಯಲ್ಲ. ಕೆಲವು ಸಂದರ್ಭಗಳಲ್ಲಿ, ಅಸುನೀಗಿದವರ ಮಕ್ಕಳ ಸಂಖ್ಯೆಯೇ ಐದು ಅಂಕೆ ದಾಟಿರುತ್ತದೆ! ಇವೆಲ್ಲವನ್ನೂ ಪರಿಗಣಿಸಿ ಕನಿಷ್ಠ ಹದಿನೈದು ಜನಕ್ಕಾದರೂ ಅಂತಿಮ ಯಾತ್ರೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬೇಕು.

**ಬೀರಣ್ಣ ನಾಯಕ ಮೊಗಟಾ,** ಯಲ್ಲಾಪುರ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

## ರಾಜ್ಯದಲ್ಲಿ ಕೊರೊನಾ ಪರಿಸ್ಥಿತಿ ನಿಭಾಯಿಸಲು ವೈದ್ಯಕೀಯ ತುರ್ತು ಪರಿಸ್ಥಿತಿ ಹೇರುವ ಅಗತ್ಯ ಇದೆಯೇ?

# ಆರೋಗ್ಯ ಸೇವೆ ವ್ಯವಹಾರ ಅಲ್ಲ



**ಜಗನ್ಮಾರಿ ಅಲೆಯು ಹೊಡೆತ ಮುಗಿಯುವ ತನಕ ಎಲ್ಲ ಆಸ್ಪತ್ರೆ ಸೇವೆಗಳು ಸರ್ಕಾರದ ವಶದಲ್ಲಿರುತ್ತವೆ ಎಂದು ರಾಜ್ಯ ಸರ್ಕಾರ ಪ್ರಕಟಿಸಿದ್ದರೆ, ಇವತ್ತು ಕಾಣಿಸುತ್ತಿರುವ ತಳಮಟ್ಟದ ಹೆಚ್ಚಿನ ಸಮಸ್ಯೆಗಳು ಇಷ್ಟು ತೀವ್ರವಾಗಿ ಇರುತ್ತಿರಲಿಲ್ಲ. ಕೊರೊನಾ ಮತ್ತು ಕೊರೋನೇತರ ಚಿಕಿತ್ಸೆಗಳೆರಡನ್ನೂ ಸರ್ಕಾರ ತನ್ನ ನಿಗಾದಡಿಯಲ್ಲೇ ತಕ್ಕಮಟ್ಟಿಗೆ ಸುಸೂತ್ರವಾಗಿ ನಿಭಾಯಿಸಬಹುದಿತ್ತು; ವೈದ್ಯರುಗಳನ್ನೂ ಆವಶ್ಯಕತೆ ಇರುವೆಡೆಗೆ ಹರಡಿ ಹಂಚಬಹುದಿತ್ತು. ಇಡಿಯ ವ್ಯವಸ್ಥೆಗೆ ಅದರ ಮಿತಿಯೊಳಗೇ ಒಂದು ಸಂತುಲನ ಬರುತ್ತಿತ್ತು.**

● ರಾಜಾರಾಂ ತಲ್ಲೂರು



**ಫೆಬ್ರವರಿ** ಮೊದಲ ವಾರದಿಂದೀಚೆಗೆ ಕೊರೊನಾ ಪ್ರಕರಣಗಳ ಎರಡನೇ ಅಲೆ ಏರುಗತಿ ಕಾಣತೊಡಗಿದ ಬಳಿಕ, ಸಾರ್ವಜನಿಕವಾಗಿ ಎದ್ದಿರುವ ಎರಡು ಮಹತ್ವದ ಸವಾಲುಗಳೆಂದರೆ ಚಿಕಿತ್ಸೆಯ ಲಭ್ಯತೆ ಮತ್ತು ಅದರ ವೆಚ್ಚ. ಬಹಳ ಸೀಮಿತವಾದ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಹೊಂದಿರುವ ಭಾರತದಲ್ಲಿ, ಒಂದು ಮಿತಿ ದಾಟಿದ ಬಳಿಕ ವ್ಯವಸ್ಥೆ ಸಂಪೂರ್ಣವಾಗಿ ಹದಗೆಡುವುದು ನಿರೀಕ್ಷಿತ. ಕೊರೊನಾದ ಈ ಎರಡನೇ ಅಲೆ ಕ್ಷಿಪ್ರ ಗತಿಯಲ್ಲಿ ಮೇಲ್ಮುಖವಾಗಿರುವುದರಿಂದ, ದೇಶದ ಹಲವೆಡೆ ವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಸಾಲುಸಾಲು ವರದಿಗಳು ಕಾಣಿಸಿಕೊಳ್ಳುತ್ತಿವೆ. ಇಂತಹದೊಂದು ಅಭೂತಪೂರ್ವ ಸನ್ನಿವೇಶದಲ್ಲಿ ಜನರ ಜೀವ ಉಳಿಸುವುದಕ್ಕೆ ಏನು ಮಾಡಬೇಕಿತ್ತು?

ಕೊರೊನಾ ನೂರಕ್ಕೆ ನೂರು ಮಾರಣಾಂತಿಕ ರೋಗವೇನಲ್ಲ. ಭಾರತದಲ್ಲಿ ಈವತ್ತಿನ ತನಕ, ಸರ್ಕಾರಿ ಲೆಕ್ಕಾಚಾರಗಳ ಪ್ರಕಾರ ಕೊರೊನಾ ರೋಗಿಗಳ ಸಾವಿನ ಪ್ರಮಾಣ ಶೇ 1.12 ಮಾತ್ರ. ವಾಸ್ತವ ಅಂಕಿಸಂಖ್ಯೆಗಳು ಇದಕ್ಕಿಂತಲೂ ಹೆಚ್ಚಿರಬಹುದು. ಆದರೆ, ಸಾವಿರಬಹುದು [illegible] ದೇಶದ ಜನಸಂಖ್ಯೆ, ಮತ್ತು ಆದ್ಯತೆಗಳಿಗನುಗುಣವಾದ ಗಾತ್ರದಲ್ಲಿಲ್ಲದ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು. ಆರೋಗ್ಯ ರಕ್ಷಣಾ ವ್ಯವಸ್ಥೆಯ ಮಿತಿಯನ್ನು ಮೀರಿ ರೋಗಿಗಳ ಒಳಹರಿವು ಆರಂಭ ಆದಾಗ, ಬದುಕಿಸಬಹುದಾಗಿದ್ದ ಹಲವು ಜೀವಗಳು ಇಲ್ಲವಾಗುತ್ತವೆ ಎಂಬುದೇ ಕೊರೊನಾ ಜಗನ್ಮಾರಿಯ ಕುರಿತ ಆತಂಕಕ್ಕೆ ಮೂಲ ಕಾರಣ ಮತ್ತು ಅದು ನಿಜ ಎಂಬುದು ದೇಶದ ಹಲವೆಡೆ ಕಳೆದೊಂದು ವಾರದಿಂದ ಸಾಬೀತಾಗತೊಡಗಿದೆ. ಹೀಗಾಗಿ ಅದು ಕೊರೊನಾ ಕುರಿತು [illegible] ಪರಿಗಣಿಸಿ ಆಗಬೇಕು.

ಸಂವಿಧಾನದ ಏಳನೇ ಪರಿಚ್ಛೇದದ ಅಡಿಯಲ್ಲಿ ಸಾರ್ವಜನಿಕ ಆರೋಗ್ಯ, ಶುಚಿತ್ವ, ಆಸ್ಪತ್ರೆಗಳು ರಾಜ್ಯಪಟ್ಟಿಯಲ್ಲಿ ಬರುತ್ತವೆ. ಜಗನ್ಮಾರಿಯ ಸನ್ನಿವೇಶದಲ್ಲಿ ಇದಕ್ಕೆ ಒಂದು ಒಕ್ಕೂಟ ವ್ಯವಸ್ಥೆಯ ಭಾಗವಾಗಿ, ಕೇಂದ್ರದ ಸಹಾಯಹಸ್ತ ಬೇಕಾಗಬಹುದು. ಆದರೆ, ಕಳೆದೊಂದು ವರ್ಷದಿಂದ ಕೇಂದ್ರ ಸರ್ಕಾರದ ತಾಳಕ್ಕೆ ರಾಜ್ಯಗಳು ಕುಣಿಯತೊಡಗಿರುವುದು, ಸದ್ಯದ ಎಲ್ಲ ಗೊಂದಲಗಳಿಗೆ ಮೂಲ ಕಾರಣ ಅನ್ನಿಸುತ್ತಿದೆ. ಭಾರತದಂತಹ ವಿಸ್ತಾರವಾದ, ವೈವಿಧ್ಯಗಳಿಂದೊಡಗೂಡಿದ ದೇಶದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ 'ಒಂದು ದೇಶ ಒಂದು ನಿಯಮ' ಅಪಾಯಕಾರಿ. ಲಾಕ್‌ಡೌನ್, ಕಾರ್ಮಿಕರ ವಲಸೆ, ಆರ್ಥಿಕತೆಯ ಸಂರಕ್ಷಣೆ, ಆಸ್ಪತ್ರೆ ಸೇವೆ ಸೇರಿದಂತೆ ಎಲ್ಲ ರಂಗಗಳಲ್ಲೂ ಇದು ಮತ್ತೆ ಮತ್ತೆ ಸಾಬೀತಾಗಿದೆ. ಜಗತ್ತಿನ ಹಲವು ಸಣ್ಣ ದೇಶಗಳು ಇದನ್ನು ಕೊರೊನಾ ನಿಯಂತ್ರಣದಲ್ಲಿ ಯಶಸ್ಸಿನ ಮೂಲಕ ಸಾಬೀತು ಮಾಡಿ ತೋರಿಸಿವೆ. ಆದರೆ ಅದರಿಂದ ಪಾಠ ಕಲಿಯಲು ನಮಗಿನ್ನೂ ಸಾಧ್ಯವಾಗಿಲ್ಲ.

ಕಳೆದ ವರ್ಷ ಮೊದಲ ಅಲೆಯ ವೇಳೆ, ತಯಾರಿಯಲ್ಲಿ ಕೊರತೆಗೆ ಹೊರತಾಗಿಯೂ, ರಾಜ್ಯ ಸರ್ಕಾರ ಖಾಸಗಿ ಆಸ್ಪತ್ರೆಗಳಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ತನ್ನ ಸುಪರ್ದಿಗೆ ಪಡೆದಿತ್ತು. ಅಲೆಯ ತೀವ್ರತೆ ಕಂಠಮಟ್ಟ ಮಾತ್ರ ಬಂದಿದ್ದುದರಿಂದ, ವ್ಯವಸ್ಥೆಯನ್ನು ನಿಭಾಯಿಸುವಲ್ಲಿ ಎದ್ದುಕಾಣುವ ಸಮಸ್ಯೆಗಳೇನೂ ತೋರಿಬರಲಿಲ್ಲ. ಆದರೆ ಈ ಬಾರಿ, ಅಲೆಯ ತೀವ್ರತೆಯಿಂದಾಗಿ ರಾಜ್ಯದ ಹಲವು ನಗರಗಳಲ್ಲಿ, ಅದರಲ್ಲೂ ಬೆಂಗಳೂರಿನಲ್ಲಿ, ಆರಂಭದಲ್ಲೇ ಅವ್ಯವಸ್ಥೆ ಎದ್ದು ಕಾಣತೊಡಗಿದೆ. ಜನಸಾಮಾನ್ಯರು ಆರೋಗ್ಯ ಸೇವೆಯಿಂದ (ಅದು ಖಾಸಗಿಯಿರಲಿ-ಸರ್ಕಾರಿ ಇರಲಿ) ನಿರೀಕ್ಷಿಸುವುದು ಕನಿಷ್ಠ ಸ್ಪಂದನೆ- ಸಾಂತ್ವನವನ್ನು. ಅದೂ ದೊರೆಯದಿದ್ದಾಗ ಹಾಹಾಕಾರ ಖಚಿತ. ಅದೇ ಈಗ ಆಗುತ್ತಿರುವುದು. ಬೆಂಗಳೂರಿನಲ್ಲೇ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಕೊಡಬೇಕಾಗಿರುವ ನಂಬರ್ ಪಡೆಯುವುದರಿಂದ ಆರಂಭಿಸಿ, ಬೆಡ್ ಸಿಗುವುದು, ಆಕ್ಸಿಜನ್ ಸಿಗುವುದು, ವೈದ್ಯರ ನಿಕಟನಿಗಾ ಸಿಗುವುದು, ವೆಂಟಿಲೇಟರ್ ಸಿಗುವುದು, ಔಷಧಿ ಸಿಗುವುದು... ಹೀಗೆ, ಆರೋಗ್ಯ ಸೇವೆಯ ಪ್ರತಿಯೊಂದು ಹಂತದಲ್ಲೂ ಅಡಚಣೆಗಳು ಕಾಣಿಸಿಕೊಳ್ಳುತ್ತಿವೆ.

ಆರೋಗ್ಯ ಎಂಬುದು 'ಸೇವೆ'. ಅದು ಒಂದು 'ವ್ಯವಹಾರ' ಅಲ್ಲ. ಯಾವುದೇ ಸೇವೆ ಖಾಸಗೀಕರಣಗೊಳ್ಳುವಾಗ, ಅದರ ಸಮರ್ಥಕರ ಆಶಯ ಇರುವುದು, ಆ ಸೇವೆಯ ಮೊನಚು ಹೆಚ್ಚಿಸಬೇಕೆಂಬುದು. ಅದಕ್ಕೆ ಆರೋಗ್ಯವೂ ಹೊರತಲ್ಲ. ಆದರೆ ಆರೋಗ್ಯವನ್ನು ಖಾಸಗೀಕರಿಸಿ, ಶುದ್ಧ ವ್ಯವಹಾರವಾಗಿ ನೋಡತೊಡಗಿದಾಗ, ಸರ್ಕಾರವೂ ಅದಕ್ಕೆ ಪೂರಕವಾಗಿ ವರ್ತಿಸತೊಡಗಿದಾಗ, ಸಾಂವಿಧಾನಿಕವಾದ ಬದುಕುವ ಹಕ್ಕೂ ಆತಂಕಕ್ಕೊಳಗಾಗುತ್ತದೆ. ಬಹಳ ಸರಳವಾಗಿ, ಜಗನ್ಮಾರಿ ಅಲೆಯ ಹೊಡೆತ ಮುಗಿಯುವ ತನಕ ಎಲ್ಲ ಆಸ್ಪತ್ರೆ ಸೇವೆಗಳು ಸರ್ಕಾರದ ವಶದಲ್ಲಿರುತ್ತವೆ ಎಂದು ರಾಜ್ಯ ಸರ್ಕಾರ ಪ್ರಕಟಿಸಿದ್ದರೆ, ಇವತ್ತು ಕಾಣಿಸುತ್ತಿರುವ ತಳಮಟ್ಟದ ಹೆಚ್ಚಿನ ಸಮಸ್ಯೆಗಳು ಇಷ್ಟು ತೀವ್ರವಾಗಿ ಇರುತ್ತಿರಲಿಲ್ಲ. ಕೊರೊನಾ ಮತ್ತು ಕೊರೋನೇತರ ಚಿಕಿತ್ಸೆಗಳೆರಡನ್ನೂ ಸರ್ಕಾರ ತನ್ನ ನಿಗಾದಡಿಯಲ್ಲೇ ತಕ್ಕಮಟ್ಟಿಗೆ ಸುಸೂತ್ರವಾಗಿ ನಿಭಾಯಿಸಬಹುದಿತ್ತು; ವೈದ್ಯರುಗಳನ್ನೂ ಆವಶ್ಯಕತೆ ಇರುವೆಡೆಗೆ ಹರಡಿ ಹಂಚಬಹುದಿತ್ತು. ಇಡಿಯ ವ್ಯವಸ್ಥೆಗೆ ಅದರ ಮಿತಿಯೊಳಗೇ ಒಂದು ಸಂತುಲನ ಬರುತ್ತಿತ್ತು.

ಈಗೇನಾಗುತ್ತಿದೆ? ಸರ್ಕಾರಿ ವ್ಯವಸ್ಥೆಯಲ್ಲಿ ಕಾಲುಭಾಗಕ್ಕಿಂತಲೂ ಹೆಚ್ಚು ವೈದ್ಯರು ಚಿಕಿತ್ಸೆ ನೀಡುವ ಬದಲು, ಕೊರೊನಾದ ಆಡಳಿತಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಹಾಗಾಗಿ, ಮೊದಲೇ ಮಾನವ ಸಂಪನ್ಮೂಲ ಕೊರತೆ ಇರುವ ಸರ್ಕಾರಿ ಆರೋಗ್ಯ ವ್ಯವಸ್ಥೆ ಶಿಥಿಲಗೊಂಡಿದೆ. ಖಾಸಗಿಯಲ್ಲಿ 30ಕ್ಕಿಂತ ಹೆಚ್ಚು ಹಾಸಿಗೆಗಳಿರುವ ಅಂದಾಜು 483 ಆಸ್ಪತ್ರೆಗಳಲ್ಲಿ, ಶೇ 80ರಷ್ಟು ಹಾಸಿಗೆಗಳನ್ನು ಕೊರೊನಾ ರೋಗಿಗಳಿಗೆ ಕಾಯ್ದಿರಿಸಲು ಸರ್ಕಾರ ಸೂಚಿಸಿದ್ದು, ಅದಕ್ಕೆ ರೆಫರಲ್ ಸಿಸ್ಟಂನಂತಹ ಲೇವಾದೇವಿ ವಿಧಿಸುವ ಮೂಲಕ ಅನಗತ್ಯ ವ್ಯವಹಾರಗಳಿಗೆ, ಔಷಧಿಗಳ ಕಾಳಸಂತೆಗೆ ದಾರಿ ಮಾಡಿಕೊಡಲಾಗಿದೆ. ರೆಫರಲ್ ವಿಧಾನದಿಂದಾಗಿ, ಹಲವೆಡೆ ಆರೋಗ್ಯ ಸೇವೆಯ ನಿಯತ್ತಿನ ಪ್ರಶ್ನೆಗಳು ಉದ್ಭವವಾಗತೊಡಗಿವೆ. ಖಾಸಗಿ ವ್ಯವಸ್ಥೆಯಲ್ಲಿ, ಸರ್ಕಾರಿ ರೆಫರೆನ್ಸ್ ಇಲ್ಲದೆ ನೇರವಾಗಿ ಬಂದ ಕೊರೊನಾ ರೋಗಿಗಳ ಚಿಕಿತ್ಸೆ ಖಾಸಗಿಯವರ ಪಾಲಿಗೆ ಅತ್ಯಂತ ಲಾಭದಾಯಕ ಮತ್ತು ನಿರಪಾಯಕಾರಿ ಎಂಬುದು ಕಳೆದ ಅಲೆಯ ವೇಳೆ ಸಾಬೀತಾಗಿದೆ. ಖಾಸಗಿ ಆಸ್ಪತ್ರೆಗಳು ರೂಢಿಸಿಕೊಂಡಿರುವ 'ಸೇವೆ'ಯ ಅಪಾರದರ್ಶಕ ಮಾಡೆಲ್‌ನ ಕಾರಣದಿಂದಾಗಿ, ರೋಗಿಯ ಆರೈಕೆದಾರರು-ಕುಟುಂಬಿಕರಿಗೆ ಯಾವುದೂ ಗೋಚರವಿರುವುದಿಲ್ಲ. ಇದನ್ನೇ ಬಳಸಿಕೊಂಡು, ಅಲ್ಪಸ್ವಲ್ಪ ರೋಗಲಕ್ಷಣಗಳಿರುವವರನ್ನು ಗುಡ್ಡೆಹಾಕಿಕೊಂಡು, ಪಿಪಿಇ ಕಿಟ್ ಇತ್ಯಾದಿ ಹೆಸರಿನಲ್ಲಿ ಸಮೃದ್ಧ ಫಸಲು ತೆಗೆದ ಹಲವಾರು ಪ್ರಕರಣಗಳು ಕಳೆದಬಾರಿ ಜನಸಾಮಾನ್ಯರಲ್ಲಿ ಕೊರೊನಾ ಚಿಕಿತ್ಸೆಯ ಬಗ್ಗೆಯೇ ಅಪನಂಬಿಕೆಗಳನ್ನು ಹುಟ್ಟಿಸಿದ್ದವು.

ಇದರ ಬದಲು, ರಾಜ್ಯ ಸರ್ಕಾರ ಎಲ್ಲ ಸರ್ಕಾರಿ-ಖಾಸಗಿ ಆಸ್ಪತ್ರೆಗಳ ಉಸ್ತುವಾರಿಯನ್ನು ತಾನೇ ಹೊತ್ತಿದ್ದಲ್ಲಿ, ಈ ರೀತಿಯ ಅಪಸವ್ಯಗಳು ಉಂಟಾಗುತ್ತಿರಲಿಲ್ಲ. ಶೇ 80ರಷ್ಟನ್ನು ನಿಭಾಯಿಸುವ ಧೈರ್ಯ ಇರುವವರಿಗೆ, ಮತ್ತೊಂದು ಶೇ 20ರಷ್ಟು ಹೆಚ್ಚಲ್ಲ. ಒಂದುವೇಳೆ ಈ ಹಂತದಲ್ಲೂ, ರಾಜ್ಯಸರ್ಕಾರ ಇಂತಹದೊಂದು ನಿರ್ಧಾರ ಕೈಗೊಂಡರೆ, ಖಾಸಗಿ ಆಸ್ಪತ್ರೆಗಳು ಅಬ್ಬಬ್ಬಾ ಎಂದರೆ, ತಮ್ಮ ಆರು ತಿಂಗಳ ಆದಾಯದಲ್ಲಿ ಕೆಲವಂಶ ಕಳೆದುಕೊಂಡಾವು; ಅಷ್ಟೇ. ಕನಿಷ್ಠ ಜಗನ್ಮಾರಿ ಹಿಡಿತಕ್ಕೆ ಬರುವ ತನಕ, ನಾಡಿನ ಜನರ ಜೀವಗಳು ಸುರಕ್ಷಿತವಾಗುವ ತನಕ, ಆರೋಗ್ಯವು 'ಸೇವೆ' ಆಗಿ ಉಳಿಯಬೇಕಾದುದು, ವೈದ್ಯರು ತಮ್ಮ ಹಿಪೊಕ್ರೆಟಿಕ್ ಪ್ರತಿಜ್ಞೆಗೆ ಬದ್ಧರಾಗಿರಬೇಕಾದುದು ಅನಿವಾರ್ಯ. ಅದಕ್ಕಾಗಿ ಯಾವುದೇ ಬೆಲೆ ತೆರುವುದಕ್ಕೆ ರಾಜ್ಯ ಸರ್ಕಾರ ಸನ್ನದ್ಧವಾಗಬೇಕು.

ಖಾಸಗಿ ವ್ಯವಸ್ಥೆಯೂ ನಾಡಿನ, ದೇಶದ ಹಿತದೃಷ್ಟಿಯಿಂದ ಜಗನ್ಮಾರಿಯ ವಿರುದ್ಧದ ಈ ಯುದ್ಧಕಾಲದಲ್ಲಿ ಜನಪರವಾಗಿ ಕೈಜೋಡಿಸ ಬೇಕು. ಇಲ್ಲದಿದ್ದಲ್ಲಿ ಮೇ ಅಂತ್ಯದ ಹೊತ್ತಿಗೆ, ಪರಿಸ್ಥಿತಿ ಕೈಮೀರಿದರೆ ಗಂಡಾಂತರವಾದೀತು, ಮತ್ತದು ಹಾಗಾದಲ್ಲಿ, ಒಟ್ಟು ಆರೋಗ್ಯ ವ್ಯವಸ್ಥೆಯ ಮೇಲೆ ಅಳಿಸಲಾಗದ ಶಾಶ್ವತ ಕಪ್ಪುಚುಕ್ಕಿಯಾದೀತು.

ಲೇಖಕ: ಸಾಮಾಜಿಕ ವಿಶ್ಲೇಷಕ

# ಕಳಪೆ ನಿರ್ವಹಣೆಗೆ ಯಾರು ಹೊಣೆ?

**ನಮ್ಮ ಲೆಕ್ಕಾಚಾರಗಳು ತಪ್ಪಿದ್ದು ಎಲ್ಲಿ? ಕೋವಿಡ್ ಕಾರ್ಯಪಡೆಯು ಕರ್ನಾಟಕ ಸರ್ಕಾರಕ್ಕೆ ನೀಡಿದ ಅಂದಾಜು ಸರಿ ಇರಲಿಲ್ಲವೇ? ಕಾರ್ಯಪಡೆಯು ಕೋವಿಡ್ ಹರಡುವಿಕೆ ಪ್ರಮಾಣವನ್ನು ಕಡಿಮೆಯಾಗಿ ಅಂದಾಜು ಮಾಡಿತೇ ಎಂಬುದು ನಿಗೂಢ. ಒಟ್ಟು ಪರಿಸ್ಥಿತಿಯನ್ನು ಕೆಟ್ಟದಾಗಿ ನಿಭಾಯಿಸಿದ್ದರ ಹೊಣೆಯನ್ನು ಈಗ ವಹಿಸಿಕೊಳ್ಳುವವರು ಯಾರು?**

● ಡಾ. ಎಚ್.ಎಂ. ಪ್ರಸನ್ನ



**ಎಲ್ಲರ** ಊಹೆ ಅಥವಾ ಲೆಕ್ಕಾಚಾರವನ್ನೂ ಮೀರಿ ಕೋವಿಡ್-19 ಪ್ರಕರಣಗಳು ಕರ್ನಾಟಕದಲ್ಲಿ ಹೆಚ್ಚುತ್ತಿವೆ. ಬೆಂಗಳೂರು ನಗರದಲ್ಲಿಯೇ ಶೇ 70ರಷ್ಟು ಪ್ರಕರಣಗಳು ದೃಢಪಡುತ್ತಿವೆ. ಸತತ ಮೂರು ದಿನಗಳಿಂದ ಪ್ರತಿ ದಿನ 20 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಇಲ್ಲಿ ವರದಿಯಾಗಿವೆ. ರಾಜ್ಯದಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಸಕ್ರಿಯ ಪ್ರಕರಣಗಳಿವೆ. ಅವುಗಳ ಪೈಕಿ ಶೇ 10ರಷ್ಟು ರೋಗಿಗಳು ಆಸ್ಪತ್ರೆಗೆ ದಾಖಲಾಗುವ ಅಗತ್ಯ ಇದೆ. 30 ಸಾವಿರ ಮಂದಿ ಈಗ ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ. 18 ಸಾವಿರ ಮಂದಿ ಬೆಂಗಳೂರಿನ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಮ್ಮ ಲೆಕ್ಕಾಚಾರಗಳು ತಪ್ಪಿದ್ದು ಎಲ್ಲಿ? ಕೋವಿಡ್ ಕಾರ್ಯಪಡೆಯು ಕರ್ನಾಟಕ ಸರ್ಕಾರಕ್ಕೆ ನೀಡಿದ ಅಂದಾಜು ಸರಿ ಇರಲಿಲ್ಲವೇ? ಕಾರ್ಯಪಡೆಯು ಕೋವಿಡ್ ಹರಡುವಿಕೆ ಪ್ರಮಾಣವನ್ನು ಕಡಿಮೆಯಾಗಿ ಅಂದಾಜು ಮಾಡಿತೇ ಎಂಬುದು ನಿಗೂಢ. ಒಟ್ಟು ಪರಿಸ್ಥಿತಿಯನ್ನು ಕೆಟ್ಟದಾಗಿ ನಿಭಾಯಿಸಿದ್ದರ ಹೊಣೆಯನ್ನು ಈಗ ವಹಿಸಿಕೊಳ್ಳುವವರು ಯಾರು? ಜನರಿಗೆ ಸರಿಯಾದ ಚಿಕಿತ್ಸೆ ದೊರೆಯದೆ ಸಾಯುವುದು ನೋಡುವಾಗ ಹೃದಯ ಒಡೆದು ಹೋಗುತ್ತದೆ. ಕೆಲವರಿಗೆ ಆಸ್ಪತ್ರೆಗೆ ದಾಖಲಾಗುವುದಕ್ಕೂ ಸಾಧ್ಯವಾಗುತ್ತಿಲ್ಲ.

ಕೋವಿಡ್ ಎರಡನೇ ಅಲೆಯ ಅತ್ಯಂತ ದೊಡ್ಡ ಸಮಸ್ಯೆ ಎಂದರೆ, ಯುವಜನರೇ ಸೋಂಕು ಮತ್ತು ಆರೋಗ್ಯ ತೊಂದರೆಗಳಿಗೆ ಹೆಚ್ಚು ಹೆಚ್ಚು ಒಳಗಾಗುತ್ತಿರುವುದು. ಅವರಲ್ಲಿ ಶ್ವಾಸಕೋಶಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತಿವೆ. ಅವರ ಸ್ಥಿತಿ ಅತ್ಯಂತ ವೇಗವಾಗಿ ಹದಗೆಡುತ್ತಿದೆ. ಐಸಿಯು ಹಾಸಿಗೆಗಳ ಬೇಡಿಕೆ ಹತ್ತು ಪಟ್ಟು ಹೆಚ್ಚಳವಾಗಿದೆ. ಅಂದರೆ, ಐಸಿಯುನಲ್ಲಿ ಆರೈಕೆ ಅಗತ್ಯ ಇರುವ ಹತ್ತು ಮಂದಿಯಲ್ಲಿ ಒಬ್ಬರಿಗೆ ಮಾತ್ರ ಆ ಸೌಲಭ್ಯ ಸಿಗುತ್ತಿದೆ ಎಂದು ಅರ್ಥ. ಉಳಿದ ಶೇ 90ರಷ್ಟು ರೋಗಿಗಳಿಗೆ ಎಲ್ಲಿ ಆರೈಕೆ ಮಾಡೋಣ? ಸರ್ಕಾರ ಮತ್ತು ಕೋವಿಡ್ ಕಾರ್ಯಪಡೆ ಈ ಸಮಸ್ಯೆಗೆ ತ್ವರಿತ ಪರಿಹಾರ ಕಂಡುಕೊಳ್ಳಬೇಕು ಮತ್ತು ಅದು ಅಸಾಧ್ಯ.

ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆ ಸಂಖ್ಯೆ ಹೆಚ್ಚಿಸುವುದು ಸುಲಭವಲ್ಲ. ಮೂಲಸೌಕರ್ಯ ಅಷ್ಟೇ ಅಲ್ಲ, ಅದನ್ನು ನಿರ್ವಹಿಸುವ ಮಾನವ ಸಂಪನ್ಮೂಲವನ್ನು ಹೊಂದಿಸುವುದು ದೊಡ್ಡ ಸವಾಲು. ಸರ್ಕಾರವು ಕೆಲವು ಸಾವಿರ ವೆಂಟಿಲೇಟರ್‌ಗಳನ್ನು ಖರೀದಿಸಿದೆ. ಆರು ತಿಂಗಳು ಸಮಯ ಇದ್ದಾಗ ಅವುಗಳನ್ನು ಅಳವಡಿಸುವ ಮತ್ತು ಅಗತ್ಯ ಮಾನವ ಸಂಪನ್ಮೂಲ ಹೊಂದಿಸುವ ಕೆಲಸ ಮಾಡಿಲ್ಲ? ಸರ್ಕಾರದ ಅಸಡ್ಡೆ ಮತ್ತು ಹೊಣೆಗೇಡಿತನದಿಂದಾಗಿ ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ಅಮೂಲ್ಯ ಜೀವಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಸಮಯ ಜಾರುತ್ತಿದೆ, ಸಂಬಂಧಪಟ್ಟ ಎಲ್ಲರೂ ಸಮರೋಪಾದಿಯಲ್ಲಿ ಕೆಲಸ ಮಾಡಿ ಹಾನಿಯನ್ನು ಕನಿಷ್ಠಗೊಳಿಸಲು ಶ್ರಮಿಸಬೇಕಿದೆ.

ಮಹಾರಾಷ್ಟ್ರದ ನಂದೂರ್‌ಬಾರ್ ಜಿಲ್ಲೆಯ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಬಾರೂಡ್ ಮಾಡಿದ ಅತ್ಯುತ್ತಮ ಕೆಲಸವನ್ನು ನೋಡಿದರೆ ಹೃದಯ ತುಂಬಿ ಬರುತ್ತದೆ. ಆ ಜಿಲ್ಲೆಯಲ್ಲಿ 1,200 ಐಸಿಯು ಹಾಸಿಗೆಗಳು, 5,000 ಪ್ರತ್ಯೇಕವಾಸದ ಹಾಸಿಗೆಗಳು ಮತ್ತು ಎರಡು ಆಮ್ಲಜನಕ ಘಟಕಗಳನ್ನು ಸ್ಥಾಪಿಸಿದ್ದಾರೆ. ಅಲ್ಲಿ ಹಾಸಿಗೆಗಾಗಲಿ, ಆಮ್ಲಜನಕಕ್ಕಾಗಲಿ ಕೊರತೆ ಇಲ್ಲ. ಲಸಿಕೆ ಕಾರ್ಯಕ್ರಮವೂ ಅತ್ಯುತ್ತಮವಾಗಿ ನಡೆದಿದೆ. ಈ ಮಾದರಿಯು ಸರ್ಕಾರದ ಕಣ್ಣು ತೆರೆಸಬೇಕು.

ಮುಂದಿನ ದಾರಿ ಏನು? ಬೆಂಗಳೂರಿನ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು. ಈ ವರೆಗೆ ಆ ಕೆಲಸ ಆಗಿಲ್ಲ. ಅಲ್ಲಿನ ಪಿಎಂಎಸ್‌ಎಸ್‌ವೈ ವಿಭಾಗದಲ್ಲಿ 50 ಐಸಿಯು ಹಾಸಿಗೆಗಳನ್ನು ಗೋದಾಮಿನಲ್ಲಿಟ್ಟು ಬೀಗ ಹಾಕಲಾಗಿದೆ. ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿನ ಐಸಿಯು ಹಾಸಿಗೆಗಳ ಸಂಖ್ಯೆ ಹೆಚ್ಚಿಸಿ. ಸುಲಭವಾಗಿ 10 ಸಾವಿರ ಐಸಿಯು ಹಾಸಿಗೆಗಳು ದೊರೆಯುತ್ತವೆ. ಈ ಕಾಲೇಜುಗಳಲ್ಲಿ ಅಪಾರ ಮಾನವ ಸಂಪನ್ಮೂಲವೂ ಇದೆ. ಇಲ್ಲಿಗೆ ಅಗತ್ಯವಾದ ಹಣಕಾಸಿನ ನೆರವನ್ನು ಸರ್ಕಾರ ನೀಡಬೇಕು. ಈ ಕೇಂದ್ರಗಳನ್ನು ನಿಭಾಯಿಸಲು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಬೇಕು ಮತ್ತು ಹೊಣೆಗಾರಿಕೆ ನಿಗದಿ ಮಾಡಬೇಕು.

ಐಸಿಯು ಮತ್ತು ಎಚ್‌ಡಿಯು (ಹೆಚ್ಚು ಅವಲಂಬನೆಯ ಘಟಕ) ಹಾಸಿಗೆಗಳ ಸಂಖ್ಯೆ ಹೆಚ್ಚಿಸಲು ಖಾಸಗಿ ಕ್ಷೇತ್ರಕ್ಕೆ ಸರ್ಕಾರ ಪ್ರೋತ್ಸಾಹ ನೀಡಬೇಕು. ಆಮ್ಲಜನಕ ವ್ಯವಸ್ಥೆ ಇಲ್ಲದ ಹಾಸಿಗೆಗಳ ಅಗತ್ಯ ಈಗ ಇಲ್ಲ. ಎಲ್ಲ ಹಾಸಿಗೆಗಳನ್ನು ಎಚ್‌ಡಿಯು ಹಾಸಿಗೆಗಳಾಗಿ ಪರಿವರ್ತಿಸಬೇಕು. ಮಾನವ ಸಂಪನ್ಮೂಲ ಮತ್ತು ಮೂಲಸೌಕರ್ಯ ಹೆಚ್ಚಳಕ್ಕೆ ನೆರವಿನ ಅಗತ್ಯ ಇದೆ.

ಆಮ್ಲಜನಕ ತಯಾರಿಕಾ ಘಟಕಗಳ ಸ್ಥಾಪನೆ ಕೆಲಸ ಸಮರೋಪಾದಿಯಲ್ಲಿ ನಡೆಯಬೇಕು. ಈಗ ಪ್ರತಿ ದಿನ 1,400 ಟನ್ ಆಮ್ಲಜನಕ ಬೇಕು ಎಂದು ಅಂದಾಜಿಸಲಾಗಿದೆ. ಕೇಂದ್ರ ಸರ್ಕಾರ ನಮಗೆ ಹಂಚಿಕೆ ಮಾಡಿರುವುದು 800 ಟನ್ ಮಾತ್ರ.

ನರ್ಸ್‌ಗಳು ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಯ ಕೊರತೆ ದೊಡ್ಡ ಸಮಸ್ಯೆಯಾಗಿದೆ. ಖಾಸಗಿ ಆಸ್ಪತ್ರೆಗಳಷ್ಟೇ ಅಲ್ಲ, ಸರ್ಕಾರಿ ಆಸ್ಪತ್ರೆಗಳೂ ಶೇ 50ರಷ್ಟು ಸಿಬ್ಬಂದಿಯೊಂದಿಗೆ ಕೆಲಸ ಮಾಡುತ್ತಿವೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ.

ಕೊನೆಯದಾಗಿ, ಸಾಕಷ್ಟು ಪ್ರಮಾಣದಲ್ಲಿ ಲಸಿಕೆಗಳನ್ನು ಖರೀದಿಸಿ, ಲಸಿಕಾ ಅಭಿಯಾನಕ್ಕೆ ವೇಗ ತುಂಬಬೇಕಾಗಿದೆ. ಅತ್ಯಂತ ವೇಗವಾಗಿ ಎಷ್ಟು ಸಾಧ್ಯವೋ ಅಷ್ಟು ಜನರನ್ನು ತಲುಪಬೇಕು. ಲಸಿಕಾ ಅಭಿಯಾನದ ಜತೆಗೆ, ಸೋಂಕಿನ ಸರಣಿಯನ್ನು ಮುರಿಯಲು ಕಟ್ಟುನಿಟ್ಟಾದ ಲಾಕ್‌ಡೌನ್ ಅನ್ನು ಜಾರಿ ಮಾಡಬೇಕು. ಗಂಭೀರವಲ್ಲದ, ಈ ಅರೆ ಲಾಕ್‌ಡೌನ್‌ಗಳು ಹಾಸ್ಯಾಸ್ಪದ.

ಒಂದು ಜವಾಬ್ದಾರಿಯುತ ಸಂಘಟನೆಯಾಗಿ 'ಫನಾ', ಶೇ 50ರಷ್ಟು ಬೆಡ್‌ಗಳನ್ನು ಎಸ್‌ಎಎಸ್‌ಟಿ ಅಡಿ ಸರ್ಕಾರ ಸೂಚಿಸಿದ ರೋಗಿಗಳಿಗೆ ಹಂಚಿಕೆ ಮಾಡಲು ಬದ್ಧವಾಗಿದೆ. ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದೆ; ಖಾಸಗಿ ಕೋವಿಡ್ ಆರೈಕೆ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಆಮ್ಲಜನಕ ಹಾಗೂ ರೆಮ್‌ಡಿಸಿವಿರ್ ಔಷಧವು ರೋಗಿಗಳಿಗೆ ಸರಿಯಾಗಿ ಲಭ್ಯವಾಗುವಂತೆ ಮಾಡಲು ಸರ್ಕಾರಕ್ಕೆ ನೆರವು ನೀಡಲಾಗುತ್ತಿದೆ.

ಎಲ್ಲಾ ವರ್ಗಗಳಲ್ಲಿ ಹಾಸಿಗೆ ಲಭ್ಯತೆಯ ಬಗ್ಗೆ ಕ್ಷಣಕ್ಷಣದ ಮಾಹಿತಿಯನ್ನು ನೀಡಲು ಶೀಘ್ರದಲ್ಲೇ ಫನಾ ಒಂದು ಪೋರ್ಟಲ್ ಆರಂಭಿಸಲಿದೆ. ಇದರಿಂದ ಹಾಸಿಗೆಯ ಹುಡುಕಾಟದಲ್ಲಿ ರೋಗಿಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವುದನ್ನು ತಪ್ಪಿಸಬಹುದು.

ಲೇಖಕ: ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್‌ಹೋಮ್‌ಗಳ ಸಂಘದ (ಫನಾ) ಅಧ್ಯಕ್ಷ

# ಮಂಗ ಬುದ್ಧಿಯ ಮಾನವ

ಮಂಗನಿಗೂ ಮಾನವನಿಗೂ ಅವಿನಾಭಾವ ಸಂಬಂಧವಿದೆ. ಮಂಗನಿಂದ ಮಾನವನಾದ ಅನ್ನೋ ವೈಜ್ಞಾನಿಕ ಕತೆ ಏನೇ ಇರಲಿ, ಅವನ ವರ್ತನೆಯಂತೂ ಮಂಗನಿಗಿಂತ ಭಿನ್ನವಾಗಿಲ್ಲ. ಮನುಷ್ಯನ ಮನಸನ್ನು ಮರ್ಕಟಕ್ಕೆ ಹೋಲಿಸಲಾಗುತ್ತದೆ. ಇದಂತೂ ಅಕ್ಷರಶಃ ಸತ್ಯ. ಸದಾ ಚಂಚಲಗೊಳ್ಳುವ, ಕೋತಿಯಂತೆಯೇ ಚೇಷ್ಟೆ ಮಾಡುವ ಮನುಷ್ಯನ ಮನಸ್ಥಿತಿ ಗಮನಿಸಿದರೆ, ಅವನಿನ್ನು ಪರಿಪೂರ್ಣ ಮನುಷ್ಯನಾಗಿಲ್ಲ ಅನಿಸುತ್ತೆ. ಮನುಷ್ಯ ಮಂಗನಿಗಿಂತ ಎಷ್ಟೇ ರೂಪಾಂತರವಾದರೂ, ಅವನ ಮನಸು ಮಾತ್ರ ಮಂಗನಂತೆಯೇ ಇದೆ. ಅದು ಬದಲಾಗಲು ಅದೆಷ್ಟು ಯುಗಗಳು ಬೇಕೋ ಗೊತ್ತಿಲ್ಲ. ಅಷ್ಟರೊಳಗೆ ಮಂಗ ಬುದ್ಧಿಯ ಮಾನವನಿಂದ ಎಂತೆಂಥ ಅನಾಹುತಗಳಾಗುವುದೋ ಎಂಬ ಆತಂಕ ಕಾಡುತ್ತಿದೆ.

ಏಕೆಂದರೆ, ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ ಭಗವಂತ ಮಾನವನ ಮತಿಗೆ ಒಂದಿಷ್ಟು ಬುದ್ಧಿ ಕೊಟ್ಟಿದ್ದಾನೆ. ಇಷ್ಟಕ್ಕೆ ದೇಹದ ಮೇಲೆ ಶಿರಸ್ಸು ನಿಲ್ಲದವನಂತೆ ಆಡುತ್ತಿದ್ದಾನೆ. ಇನ್ನೊಂದಿಷ್ಟು ಬುದ್ಧಿ ಬಲಿತರೆ, ಮನುಷ್ಯನ ಕುಚೇಷ್ಟೆ ಮತ್ತಷ್ಟು ಹೆಚ್ಚುವ ಅಪಾಯವಿದೆ. ಆತ ಏನಾದರೊಂದು ಮಾಡದೆ ತೆಪ್ಪಗಿರುವುದಿಲ್ಲ. ಸದಾ ಏನಾದರೊಂದು ಕಿತಾಪತಿ ಮಾಡಲು ಅವನ ಮನಸು ಹೊಂಚು ಹಾಕುತ್ತಿರುತ್ತೆ. ಇಂತಹ ಮರ್ಕಟ ಮನಸಿನ ಜನರಿಂದಲೇ ಜಗತ್ತಿನ ಎಲ್ಲಾ ಅನಾಹುತಗಳು ಉದ್ಭವವಾಗುತ್ತಿವೆ. 'ಕೋತಿ ತಾನು ಕೆಡದೆ, ವನವನ್ನೆಲ್ಲಾ ಕೆಡಿಸಿತು' ಅನ್ನೋ ಗಾದೆ ಮಾತಿನಂತೆ; ಮರ್ಕಟ ಮನಸಿನ ಮನುಷ್ಯರು ತಾವು ಕೆಡುವುದಲ್ಲದೆ ತಮ್ಮ ಸುತ್ತಲಿನ ಸಮಾಜವನ್ನೂ ಕೆಡಿಸುತ್ತಿದ್ದಾರೆ.

ಸದಾ ಸ್ವಾರ್ಥ ಪರರಾಗಿ ಯೋಚಿಸುವ ಜನ ಕೋತಿಗಳಂತೆಯೇ ತಿನ್ನುವುದಕ್ಕೂ ಕಿತ್ತಾಡುತ್ತಾರೆ. ಎಲ್ಲಾ ತನಗೇ ಬೇಕೆಂಬ ದುರಾಸೆಯಿಂದ ಬಾಯೊಳಗೆ ತುರುಕಿಕೊಂಡು ಒದ್ದಾಡುತ್ತಾರೆ. ಮಂಗಗಳಂತೆ ಮಗುಮ್ಮಾಗಿ ಮೆಲ್ಲುವ ಮಾನವರು ಈಗ ಜಗತ್ತಿನೆಲ್ಲೆಡೆ ಹೆಚ್ಚಾಗುತ್ತಿದ್ದಾರೆ. ತನ್ನ ಕತ್ತಿನ ಮೇಲೆ ಕತ್ತಿ ಬೀಳುವುದನ್ನು ಅರಿಯದ ಕುರಿ, ಹುಲ್ಲು ಮೆಲ್ಲಲು ಹಾತೊರೆಯುವಂತೆ ಮಾನವ ತನ್ನ ಬೆನ್ನ ಹಿಂದಿರುವ ಯಮನ ನೆರಳು ಕಾಣದೆ ಎದುರಿನ ಬಿಳಲು ಕಡಿಯಲು ತವಕಿಸುತ್ತಿದ್ದಾನೆ. ಇಂದು ಬೇರೆಯವರಿಗೆ ಬಂದ ಸಾವು, ತನಗೆ ಬರುವುದೇ ಇಲ್ಲವೆಂಬಂತೆ ವರ್ತಿಸುತ್ತಿದ್ದಾನೆ. ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸದವರನ್ನು ಮನುಷ್ಯ ಅಂಥ ಕರೆಯಲು ಸಾಧ್ಯವೇ ಇಲ್ಲ. ಹೀಗಾಗಿ ವಾನರ ಮಾನವನಾಗಿ ಇನ್ನೂ ಬದಲಾಗಿಲ್ಲ. ಅವನಿನ್ನು ಮೃಗೀಯ ಮಂಗಬುದ್ಧಿಯಲ್ಲೇ ಇದ್ದಾನೆ ಅನ್ನೋದನ್ನ ಕವಿ ಡಿವಿಜಿ ಚೆನ್ನಾಗಿ ಅರ್ಥೈಸಿ 'ಮಂಕುತಿಮ್ಮನ ಕಗ್ಗ' ಬರೆದಿದ್ದರು.

ಮಂಗಬುದ್ಧಿಯ ಜನ ಹಣ ಬರುವುದನ್ನು ರೂಢಿಸಿಕೊಂಡಿರುತ್ತಾರೆಯೇ ಹೊರತು, ವೃತ್ತಿಪರ ಕೆಲಸದೆಡೆ ನಿಷ್ಠೆ ಇರುವುದಿಲ್ಲ. ಶ್ರಮವಿಲ್ಲದೆ ಫಲ ಬಯಸುವ, ದಿಢೀರನೇ ಶ್ರೀಮಂತಿಕೆಯಲ್ಲಿ ಮೆರೆಯುವ ದುರಾಸೆ ಜನ ಯಾರನ್ನೂ ಚೆನ್ನಾಗಿರಲು ಬಿಡುವುದಿಲ್ಲ. ಇಂಥ ಕೊಂಕು ಬುದ್ಧಿ ಜನ ತಮ್ಮ ಕುಟುಂಬದಲ್ಲೂ ನೆಮ್ಮದಿಯಾಗಿರುವುದಿಲ್ಲ. ತಮ್ಮ ಸುತ್ತಲಿರುವ ಸಮಾಜದಲ್ಲೂ ಸ್ನೇಹಜೀವಿಯಾಗಿರುವುದಿಲ್ಲ. ತಾನು ಮಾಡುವ ಕೆಲಸದಲ್ಲೂ ಉತ್ತಮವಾಗಿರುವುದಿಲ್ಲ. ವೃತ್ತಿಯಲ್ಲಿ ನೈಪುಣ್ಯ ತೋರಿಸದಿದ್ದರೂ, ಉತ್ತಮವಾಗಿ ಕೆಲಸ ಮಾಡುವ ಸಹೋದ್ಯೋಗಿಗಳ ಚಿತಾವಣೆಯಲ್ಲಿ ನಿಸ್ಸೀಮರಾಗಿರುತ್ತಾರೆ.

ಕೆಲಸ ಬಾರದವ ತನ್ನ ಮನೆಯ ಸೂರುಗಳ ಕಿತ್ತ ಎಂಬಂತೆ, ಸಹೋದ್ಯೋಗಿಯೊಬ್ಬನ ಹಣಿಯಲು ತಮಗೆ ಅನ್ನ ನೀಡುವ ಸಂಸ್ಥೆಯನ್ನೆ ಹಾಳು ಮಾಡುತ್ತಾರೆ. ಇದೆಲ್ಲಾ ದುರ್ಬಲ ಬುದ್ಧಿಯವರ ಕುಚೇಷ್ಟೆ ಅಂತ ಭಾವಿಸಿದರೆ ತಪ್ಪಾಗುತ್ತದೆ. ಇವರೆಲ್ಲ ಪದವೀಧರರಾಗಿರುತ್ತಾರೆ. ಏನೊ ಎಳೆವಯಸ್ಸು ಒಂದಿಷ್ಟು ತಿಳಿವಳಿಕೆ ಇಲ್ಲದೆ ಮಾಡಿದ್ದಾರೆಂದುಕೊಂಡರೆ, ಅವರ ವಯಸ್ಸು ವೃದ್ಧಾಪ್ಯದತ್ತ ದಾಪುಗಾಲಿಟ್ಟಿರುತ್ತದೆ.

ಮಾನವರ ಪೂರ್ವ ಜನ್ಮದ ಮಂಗಬುದ್ಧಿ ಫಲ ಹೀಗೆಲ್ಲಾ ಆಡಿಸುತ್ತಿದೆ. ಇದರ ನಿವಾರಣೆಗೆ ಮಾನವರೆಲ್ಲಾ ಸ್ವಾರ್ಥ ಬುದ್ಧಿ ಬಿಟ್ಟು, ಧರ್ಮ-ಕರ್ಮಗಳಲ್ಲಿ ಶ್ರದ್ಧೆ ಇಟ್ಟು, ಭಗವಂತನ ಧ್ಯಾನದಲ್ಲಿದ್ದರೆ ಸಂಕುಚಿತ ಬುದ್ಧಿ ಅಳಿದು, 'ಸಚ್ಚಿದಾನಂದ' ಬುದ್ಧಿ ಪ್ರಾಪ್ತವಾಗುತ್ತದೆ. ●

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ನಾಗಪುರದ ಇಂದಿರಾ ಗಾಂಧಿ** ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸೆಗಾಗಿ ದಾಖಲಾಗಿದ್ದ, ಆರ್‌ಎಸ್‌ಎಸ್‌ನ ಸ್ವಯಂಸೇವಕ 85 ವರ್ಷದ ನಾರಾಯಣ ದಭಾಡ್ಕರ್ ಅವರು ಬೇರೆ ವ್ಯಕ್ತಿಗೆ ಹಾಸಿಗೆ ಬಿಟ್ಟುಕೊಟ್ಟಿದ್ದರು. 40 ವರ್ಷದ ಕೋವಿಡ್ ರೋಗಿಯೊಬ್ಬರಿಗೆ ಹಾಸಿಗೆ ಸಿಗದ ಕಾರಣ, ಆ ವ್ಯಕ್ತಿಯ ಪತ್ನಿ ಆಸ್ಪತ್ರೆ ಸಿಬ್ಬಂದಿಯನ್ನು ಅಂಗಲಾಚುತ್ತಿದ್ದರು. ಅದನ್ನು ನೋಡಿ ನಾರಾಯಣ ತನ್ನ ಹಾಸಿಗೆ ಬಿಟ್ಟುಕೊಟ್ಟಿದ್ದರು. ಹಾಸಿಗೆ ಬಿಟ್ಟುಕೊಟ್ಟ ನಾಲ್ಕೇ ದಿನದಲ್ಲಿ ನಾರಾಯಣ ಮೃತರಾದರು ಎಂದು ಹಲವು ಮಾಧ್ಯಮಗಳು ವರದಿ ಮಾಡಿದ್ದವು. ಇದು ವೈರಲ್ ಸಹ ಆಗಿತ್ತು.

**ಆದರೆ, ಇದು ಸುಳ್ಳು ಸುದ್ದಿ** ಎಂದು ಇಂದಿರಾ ಗಾಂಧಿ ಆಸ್ಪತ್ರೆಯ ಸಿಬ್ಬಂದಿ ಹೇಳಿದ್ದಾರೆ. ನಾರಾಯಣ ಅವರು ಗುಣಮುಖರಾದ ನಂತರ ಆಸ್ಪತ್ರೆಯಿಂದ ಮನೆಗೆ ತೆರಳಿದ್ದರು. ಅವರು ಮನೆಗೆ ಹೋದ ದಿನ ಇಂತಹ ಯಾವುದೇ ಘಟನೆ ನಡೆದಿರಲಿಲ್ಲ. ಅಲ್ಲದೆ ಅಂದು ಕೋವಿಡ್ ರೋಗಿಗಳಿಗೆಂದು ಮೀಸಲಿರಿಸಿದ್ದ ಹಾಸಿಗೆಗಳಲ್ಲಿ, ನಾಲ್ಕು ಹಾಸಿಗೆಗಳು ಖಾಲಿಯೇ ಇದ್ದವು. ವೈರಲ್ ಆಗಿರುವ ಸುದ್ದಿಯಲ್ಲಿ ಇರುವ ಮಾಹಿತಿ ಸುಳ್ಳು ಎಂದು ಆಸ್ಪತ್ರೆಯು ಪ್ರಕಟಣೆ ಹೊರಡಿಸಿದೆ.

## ಗುಂಡಣ್ಣ




## ದಿನ ಭವಿಷ್ಯ

ಶನಿವಾರ 1 ಮೇ 2021

**ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ಪಂಚಮಿ ಗಂ. 39-53 (ರಾ. 10-04) ಶನಿವಾರ ನಿತ್ಯ ನಕ್ಷತ್ರ ಮೂಲ ಗಂ. 23-4 (ಹ. 3-20) ಶಿವ ನಾಮ ಯೋಗ ಗಂ 8-26 ಕೌಲವ ಕರಣ ಗಂ. 12-28 ವಿಷ ಗಂ. 19-16 ಪುರ್ವಷ ಗಂ. 45-53 ಅಮೃತ ಗಂ. 8-22 :** ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-03 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 1, 8

**ಮೇಷ:** ಮಕ್ಕಳೊಂದಿಗೆ ವಾದ, ವಿವಾದ ಮಾಡದಿರುವುದು ಉತ್ತಮ. ವಾಹನ ಚಾಲನೆ, ಸ್ತ್ರೀಯರೊಂದಿಗೆ ವ್ಯವಹರಿಸುವಾಗ ಎಚ್ಚರಿಕೆ ಅಗತ್ಯ. ಬಂಧುಗಳೊಂದಿಗಿನ ಭಿನ್ನಾಭಿಪ್ರಾಯ ದೂರಾಗಿ ಬಾಂಧವ್ಯ ವೃದ್ಧಿಯಾಗಲಿದೆ.

**ವೃಷಭ:** ತಾಳ್ಮೆಯಿಂದ ಕಾರ್ಯಸಿದ್ಧಿ. ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಎಚ್ಚರಿಕೆ ವಹಿಸಿ. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಮಹಿಳೆಯರು ಮಾತನಾಡುವುದಕ್ಕಿಂತ ಮೌನ ವಹಿಸುವುದು ಕ್ಷೇಮ.

**ಮಿಥುನ:** ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ. ಜಂಟಿ ವ್ಯವಹಾರಗಳಿಗೆ ಕೈ ಹಾಕದಿರುವುದು ಉತ್ತಮ. ಬಂಧು ಮಿತ್ರರೊಂದಿಗೆ ಶುಭಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ. ದೈನಂದಿನ ವ್ಯವಹಾರಗಳಲ್ಲಿ ಸಂತಸ.

**ಕರ್ಕಾಟಕ:** ಸಾಂಸಾರಿಕ ಜೀವನದಲ್ಲಿ ಸಂತೃಪ್ತಿ. ಮಹಿಳೆಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಕುಟುಂಬದ ಸದಸ್ಯರೊಂದಿಗೆ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಾಧ್ಯತೆ. ಅತಿಯಾದ ಕೋಪ ಬೇಡ.

**ಸಿಂಹ:** ವಿವಾಹಾಕಾಂಕ್ಷಿಗಳಿಗೆ ಸಂಬಂಧಗಳು ಕೂಡಿ ಬರುವ ಸಾಧ್ಯತೆ. ಹಲವಾರು ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಿರಿ. ನೂತನ ವಾಹನ ಖರೀದಿ ಮಾಡಲಿದ್ದೀರಿ.

**ಕನ್ಯಾ:** ಬಹುಕಾಲದ ಬಯಕೆಗಳು ಈಡೇರಲಿವೆ. ಋಣ ಪರಿಹಾರದಿಂದಾಗಿ ಸಂತೃಪ್ತಿ. ವೈಯಕ್ತಿಕ ವಿಚಾರಗಳನ್ನು ಬಹಿರಂಗ ಪಡಿಸದೇ ಗುಪ್ತವಾಗಿರಿಸುವುದು ಕ್ಷೇಮ. ವಸ್ತ್ರ ವ್ಯಾಪಾರಗಳಿಗೆ ಹೆಚ್ಚಿನ ಆದಾಯ ತರಲಿದೆ.

**ತುಲಾ:** ಉದ್ಯೋಗದಲ್ಲಿರುವವರಿಗೆ ಮೇಲಧಿಕಾರಿಗಳಿಂದ ಪ್ರೋತ್ಸಾಹದೊಂದಿಗೆ ಪ್ರಶಂಸೆ. ಮಹಿಳೆಯರ ಇಷ್ಟಾರ್ಥಗಳು ಈಡೇರಿ ಸಂತಸ. ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗಿ ಹೊಸ ಬದುಕಿಗೆ ನಾಂದಿಯಾಗಲಿದೆ.

**ವೃಶ್ಚಿಕ:** ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಗೃಹ ನಿರ್ಮಾಣ ಅಥವಾ ಖರೀದಿ ಸಾಧ್ಯತೆ. ಮಹಿಳೆಯರಿಗೆ ಸಾಮಾಜಿಕ ಗೌರವಾದರಗಳು ದೊರಕಲಿವೆ. ರಾಜಕೀಯದಲ್ಲಿ ಯಶಸ್ಸಿನ ಹೆಜ್ಜೆ ತುಳಿಯಲಿದ್ದೀರಿ.

**ಧನು:** ದೂರಾಲೋಚನೆಯಿಂದ ಮಾಡಿದ ಕಾರ್ಯಗಳಲ್ಲಿ ಯಶಸ್ಸು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ಹರಿಸಬೇಕಾದ ಅನಿವಾರ್ಯ. ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ದೂರಪ್ರಯಾಣ ಮಾಡದಿರುವುದು ಒಳಿತು.

**ಮಕರ:** ಸಾಮಾಜಿಕ ಕಾರ್ಯಗಳಲ್ಲಿ ತುರುಸಿನಿಂದ ತೊಡಗಿಕೊಳ್ಳುವಿರಿ. ಹಣಕಾಸಿನ ವಿಚಾರದಲ್ಲಿ ಅತ್ಯಂತ ಜಾಗರೂಕತೆ ಅವಶ್ಯ. ಮಕ್ಕಳ ಆರೋಗ್ಯದ ಕಡೆ ತುಸು ಗಮನ ವಹಿಸಿ. ಮಾನಸಿಕ ನೆಮ್ಮದಿಗಾಗಿ ದೇವರ ದರ್ಶನ ಮಾಡಿ.

**ಕುಂಭ:** ಆರ್ಥಿಕ ಅನುಕೂಲತೆ. ಮಕ್ಕಳಿಂದ ನೆಮ್ಮದಿ. ವಿದೇಶ ಪ್ರಯಾಣ ಯೋಗ. ದಿನನಿತ್ಯದ ಕೆಲಸಗಳಲ್ಲಿ ಉತ್ಸಾಹ ಮೂಡಿಬರಲಿದೆ. ಮಿತ್ರರ ಸಹಾಯ ಸಹಕಾರಗಳಿಂದಾಗಿ ವ್ಯವಹಾರಗಳು ಸುಧಾರಿಸಲಿವೆ.

**ಮೀನ:** ದೈನಂದಿನ ಕಾರ್ಯಗಳಲ್ಲಿ ಆಸಕ್ತಿ. ಆಸ್ತಿ ವಿಷಯದಲ್ಲಿ ಕಲಹ ಎದುರಾಗುವ ಸಾಧ್ಯತೆ. ನೌಕರಿಯಲ್ಲಿರುವವರಿಗೆ ವರ್ಗಾವಣೆಯಿಂದ ಸ್ಥಾನಪಲ್ಲಟವಾಗುವ ಸಾಧ್ಯತೆ. ಅಮೂಲ್ಯ ವಸ್ತುಗಳ ಸಂಗ್ರಹಣೆ ಮಾಡಲಿದ್ದೀರಿ.

**ನಿಮ್ಮ ಜನ್ಮದಿನ 1-ಮೇ** ಈ ದಿನ ಅತ್ಯಂತ ಶುಭಕರ. ಕೂಡು ವ್ಯವಹಾರದಿಂದಾಗಿ ಹೆಚ್ಚಿನ ಲಾಭ. ಅನುಕೂಲಕರ ಆರ್ಥಿಕ ಬೆಳವಣಿಗೆ ನಿಮ್ಮದಾಗಲಿದೆ. ಆಸ್ತಿ ಅಭಿವೃದ್ಧಿಯಾಗುವ ಸಾಧ್ಯತೆ. ರಾಜಕೀಯದಲ್ಲಿರುವವರಿಗೆ ಉತ್ತಮ ಯಶಸ್ಸು. ಪುತ್ರ ವ್ಯಾಮೋಹದಿಂದಾಗಿ ಕಳಂಕ.

## ಪದಬಂಧ 4583 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ವಿಷ್ಣುವಿನ ಹಾರ (4)
3.ವಾರಸುದಾರ ಇಲ್ಲಿದ್ದಾನೆ (4)
5.ನೂರು ಸಾವಿರವುಳ್ಳ ಶುಭಚಿಹ್ನೆ! (3)
6.ವ್ಯವಸಾಯಗಾರನಿಗಾದ ಅಳಲು (3)
8.ಗುಲಾಬಿ ಹಿಡಿದಿರುವ ಸೇವಕ (3)
9.ಕೆಟ್ಟ ಕೆಲಸ ಮಾಡಿದವ ತಿರುಗಿದ್ದಾನಲ್ಲಾ? (2)
10.ಹಸುವಿನ ಮರಿಯಿದು (2)
11.ಹುಲ್ಲು ತರುವಾಗ ಕೂಗಾಟದ ಬೊಬ್ಬೆ! (3)
12.ಮಾದರಿ ಇಲ್ಲಿದೆ (3)
14.ಹೀಗೆ ನೆನಪು ಮಾಡಿಕೊಳ್ಳು (3)
16.ಯತಿಗೆ ಸಿಕ್ಕಿದ ಸೋಡಿ! (4)
17.ಕನ್ನಡಿಗ ಧರಿಸಿರುವ ಹೆಲ್ಮೆಟ್ (4)

**ಮೇಲಿಂದ ಕೆಳಕ್ಕೆ**
1.ಗಂಡನನ್ನು ಕಳೆದುಕೊಂಡ ಸ್ಥಿತಿ (3)
2.ತಿಕ್ಕಲ ಹಿಡಿದಿರುವ ಎಳ್ಳು (2)
3.ಹರಿವಾಣದಲ್ಲಿರುವ ದುಡ್ಡು (2)
4.ಕನ್ನಡಿಗನ ಲೆನ್ಸು ಉಲ್ಟಾ ಕಾಣುತ್ತಿದೆ (3)
7.ಹಾಸ್ಯಾಸ್ಪದವಾಗುವಿಕೆ (5)
8.ಗುಣವನ್ನು ಹೊಗಳುವುದು (5)
11.ಕೊಡಗಿನ ಸುಗ್ಗಿ ಹಬ್ಬ (3)
13.ಒನಪು ತೋರಿದಾಗ ಬಂದಿರುವ ಸ್ಮರಣೆ (3)
14.ತಂದೆ ಕಡೆಯ ಬಂಧು (2)
15.ಹರಸುತಲಿದ್ದಾಗ ಬಂದಿರುವ ಮಗ (2)



## 4582ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಅಭ್ಯಂಜನ 3.ಊರ್ಣನಾಭ 5.ಟಗರು 7.ಪತಿ 8.ಕತೆ 11.ಮತ 13.ಶಂಕೆ 14.ರಕುತ 16.ರಿಕ್ತಹಸ್ತ 17.ತಿರುಗಣೆ
**ಮೇಲಿಂದ ಕೆಳಕ್ಕೆ:** 1.ಅತಿರೇಕ 2.ನಟ 3.ಊರು 4.ಭರತ 6.ಗವಾಕ್ಷಿ 7.ಪರಂಧಾಮ 9.ತೆಗಳಿಕೆ 10.ಚಬುಕು 12.ತವದೊಣೆ 13.ಶಂಕರಿ 14.ರಸ್ತ 15.ತತ

## ಸುಡೊಕು 4969

| | | | | | | | | |
|---|---|---|---|---|---|---|---|---|
| | 2 | | | 5 | | 8 | 4 | |
| 8 | | | 3 | | 9 | | | |
| | 4 | | | 1 | | | | 7 |
| | 3 | 2 | | | | 7 | | 6 |
| | | | | 7 | | | 9 | |
| 7 | 9 | | | | | | | 5 |
| 3 | 1 | | 9 | | | | 7 | |
| | 7 | | | 8 | | 1 | 6 | 9 |
| | 6 | 9 | | | 1 | | 3 | |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## 4968 ಸುಡೊಕು

| | | | | | | | | |
|---|---|---|---|---|---|---|---|---|
| 4 | 2 | 1 | 3 | 8 | 9 | 5 | 6 | 7 |
| 8 | 7 | 9 | 1 | 5 | 6 | 4 | 2 | 3 |
| 3 | 6 | 5 | 4 | 2 | 7 | 9 | 8 | 1 |
| 6 | 8 | 7 | 5 | 9 | 4 | 3 | 1 | 2 |
| 2 | 1 | 4 | 7 | 6 | 3 | 8 | 5 | 9 |
| 5 | 9 | 3 | 8 | 1 | 2 | 6 | 7 | 4 |
| 9 | 3 | 2 | 6 | 7 | 8 | 1 | 4 | 5 |
| 1 | 4 | 8 | 2 | 3 | 5 | 7 | 9 | 6 |
| 7 | 5 | 6 | 9 | 4 | 1 | 2 | 3 | 8 |

## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 14,894 |
| ಇಂದಿನ ಅಂತ್ಯ | 14,631 |
| ▼ | 263 |
| ದಿನದ ಗರಿಷ್ಠ | 14,855 |

## ವಿನಿಮಯ ದರ

| | |
|---|---|
| $ ಡಾಲರ್ | 74.09 |
| £ ಪೌಂಡ್ | 102.97 |
| € ಯುರೊ | 89.6 |
| ¥ ಯೆನ್ (100ಕ್ಕೆ) | 67.86 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹425 |
| 12 ಮೊಟ್ಟೆಗೆ | ₹58 |
| ಮೈಸೂರು | |
| 100 ಮೊಟ್ಟೆಗೆ | ₹427 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1565 (1570) |
| ಸೋಯಾ (ರಿಫೈನ್ಡ್) | ₹1400(1400) |
| ಸೂರ್ಯಕಾಂತಿ (ರಿಫೈನ್ಡ್) | ₹1720 (1720) |
| ಪಾಮೋಲಿನ್ | ₹1312 (1295) |

## ಕೊಬ್ಬರಿ ಧಾರಣೆ

| | |
|---|---|
| ಬೆಂಗಳೂರು | ₹15000-15966 |
| ತುರುವೇಕೆರೆ | ₹15500-19500 |

## ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

| | |
|---|---|
| ದೊಡ್ಡ | ₹1200-1400 |
| ಮಧ್ಯಮ | ₹800-1200 |
| ಸಣ್ಣ | ₹500-800 |


## 10ನೇ ವರ್ಷದ ಚಿರಸ್ಮರಣೆ

ಶ್ರೀ ಕೆ. ರಾಮಯ್ಯನವರು

ಮಾಜಿ ನಗರಸಭಾ ಸದಸ್ಯರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜನನ: 02.04.1933 ಮರಣ: 01.05.2011
ಸಂಸ್ಥಾಪಕರು: ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ,
ಚಿಕ್ಕಆಡುಗೋಡಿ, ಬೆಂಗಳೂರು

ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ....

ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮಕ್ಕಳು.

## 10ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಲ್.ನಾರಾಯಣಸ್ವಾಮಿಯವರು
(ಮಾಜಿ ಛೇರ್ಮನ್, ರಾಚೇನಹಳ್ಳಿ, ಬೆಂಗಳೂರು-77)

ನೀವು ನಮ್ಮನಗಲಿ ಇಂದಿಗೆ 10 ವರ್ಷವಾಯಿತು (01.05.2011) ನಿಮ್ಮ ಸವಿನೆನಪುಗಳು ನಮ್ಮ ಹೃದಯಗಳಲ್ಲಿ ಸದಾ ಅಚ್ಚಳಿಯದೇ ಉಳಿದಿದೆ.

ಇಂತಿ ಸದಾ ನಿಮ್ಮ ನೆನಪಿನಲ್ಲಿ
ಧರ್ಮಪತ್ನಿ:
ಶ್ರೀಮತಿ ಟಿ.ಎನ್.ನಾಗರತ್ನಮ್ಮ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು


## ಮುಂಬೈ ಧಾರಣೆ

### ಶೇಂಗಾ

30-04-2021

| | |
|---|---|
| ಜಾವಾ 70/80(ಹೊಸ) | 10150-10200 |
| ಜಾವಾ 80/90(ಹೊಸ) | 9400-9450 |
| ದಪ್ಪ ಮಧ್ಯಪ್ರದೇಶ(ಹೊಸ) | 9900-9950 |
| ದಪ್ಪ ಗುಜರಾತ್(ಹೊಸ) | 9100-9200 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1575 (1580) |
| ಒಂದು ವಾರದ ಡೆಲಿವರಿ | 1570 (1575) |
| ಸೋಯಾ ಕಚ್ಚಾ | 1395 (1402) |
| ಪಾಮ್ ವಾರದ ಡೆಲಿವರಿ | 1310 (1293) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1670 (1670) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,800 (46,600)
ಬೆಳ್ಳಿ ಕೆ.ಜಿ
67,900 (68,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಏಲಕ್ಕಿ ಧಾರಣೆ**
**ಸಕಲೇಶಪುರ**

| | |
|---|---|
| ಕೂಳೆ | 900 - 9050 |
| ನಡುಗೋಲು | 1,000-1,050 |
| ರಾಶಿ | 1,200-1,300 |
| ರಾಶಿ ಉತ್ತಮ | 1,300-1,400 |
| ಜರಡಿ | 1,500-1,550 |
| ಹೆರಕಿದ್ದು | 1,900-2,000 |
| ಹಸಿರು ಸಾಧಾರಣ | 1,300-1,400 |
| ಹಸಿರು ಉತ್ತಮ | 1,700-1,750 |
| ಹಸಿರು ಅತಿ ಉತ್ತಮ | 1,900-2,000 |
| ಕಾಳು ಮೆಣಸು | 350 |

**ಅಡಿಕೆ**
**ಬಂಟ್ವಾಳ**

| | |
|---|---|
| ಹೊಸತು | 23500-40000 |
| ಹಳತು | 42500-50000 |

**ಹೊಳಲ್ಕೆರೆ**

| | |
|---|---|
| ರಾಶಿ | 34950-42408 |

**ಕಾರ್ಕಳ**

| | |
|---|---|
| ಹೊಸತು | 36000-40000 |

**ಶಿಕಾರಿಪುರ**

| | |
|---|---|
| ರಾಶಿ | 40400-40523 |

**ರೇಷ್ಮೆಗೂಡು ಮಾರುಕಟ್ಟೆ**
**ರಾಮನಗರ**

| | |
|---|---|
| ಮಿಶ್ರ ತಳಿ | 202-331 |
| ದ್ವಿತಳಿ | 252-382 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | | ಹಾಸನ | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 10325 | - | 10300 | -ಸೆಂಟ್ಸ್ |
| ಎಸಿ | 4115 | - | 4020 | |
| ಆರ್‌ಪಿ | 5100 | - | 5150 | ಲಂಡನ್ |
| ಆರ್‌ಸಿ | 3000 | - | 2950 | -ಡಾಲರ್ಸ್ |

# 983 ಅಂಶ ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ನಾಲ್ಕು ದಿನಗಳ ಏರಿಕೆಯ ಹಾದಿಯಿಂದ ಹೊರಳಿದ ದೇಶಿ ಷೇರುಪೇಟೆಗಳು, ಶುಕ್ರವಾರ ಕುಸಿತ ದಾಖಲಿಸಿದವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 983 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 263 ಅಂಶ ಇಳಿಕೆ ಕಂಡವು.

ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಡಿಎಫ್‌ಸಿ, ಐಸಿಐಸಿಐ ಬ್ಯಾಂಕ್, ಕೋಟಕ್ ಬ್ಯಾಂಕ್, ಏಷ್ಯನ್ ಪೇಂಟ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಿಸಿಎಸ್, ಎಚ್‌ಯುಎಲ್ ಮತ್ತು ಮಾರುತಿ ಷೇರುಗಳು ಇಳಿಕೆ ಕಂಡವು.

ಒಎನ್‌ಜಿಸಿ, ಸನ್ ಫಾರ್ಮಾ, ಡಾ ರೆಡ್ಡೀಸ್ ಮತ್ತು ಬಜಾಜ್ ಆಟೊ ಷೇರುಗಳು ಮೌಲ್ಯ ಹೆಚ್ಚಿಸಿಕೊಂಡವು.

‘ಹಣಕಾಸು ವಲಯದ ಷೇರುಗಳ ಮಾರಾಟ ಜೋರಾಗಿ ನಡೆಯಿತು. ಹಾಗೆಯೇ ಜಾಗತಿಕ ಮಟ್ಟದಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು. ಇದರಿಂದಾಗಿ ದೇಶಿ ಸೂಚ್ಯಂಕಗಳು ಇಳಿಕೆಯ ಹಾದಿ ಹಿಡಿದವು’ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಬಿನೋದ್ ಮೋದಿ ಹೇಳಿದರು.

ಕೋವಿಡ್–19 ಪ್ರಕರಣಗಳ ಸಂಖ್ಯೆ ಕಡಿಮೆ ಆಗುತ್ತಿಲ್ಲ. ಕೋವಿಡ್‌ನಿಂದಾಗಿ ಜನ ದೊಡ್ಡ ಸಂಖ್ಯೆಯಲ್ಲಿ ಸಾವನ್ನಪ್ಪುತ್ತಿದ್ದಾರೆ. ಈ ಎರಡು ಸಂಗತಿಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಳವಳಕ್ಕೆ ಕಾರಣವಾಗಿವೆ. ಆರ್ಥಿಕ ಚಟುವಟಿಕೆಗಳ ಮೇಲೆ ಯಾವುದೇ ಸಂದರ್ಭದಲ್ಲಿ ಇನ್ನಷ್ಟು ನಿರ್ಬಂಧಗಳು ಜಾರಿಗೆ ಬರುವ ಸಾಧ್ಯತೆ ಇದೆ. ಕೋವಿಡ್–19 ಪ್ರಕರಣಗಳು ಕಡಿಮೆ ಆಗುವವರೆಗೂ ಮಾರುಕಟ್ಟೆಯಲ್ಲಿ ಅನಿಶ್ಚಿತ ಸ್ಥಿತಿ ಮುಂದುವರಿಯಲಿದೆ ಎಂದು ಮೋದಿ ವಿವರಿಸಿದರು.


## ಏಳನೇಯ ವರ್ಷದ ಚಿರಸ್ಮರಣೆ

ಶ್ರೀಯುತ ಎಸ್.ಎನ್.ಬಚ್ಚಣ್ಣನವರು
ಜನನ: 18-01-1944 ನಿಧನ: 01-05-2014

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷವಾಗಿದೆ, ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ.

ಶ್ರೀಮತಿ ರಾಧಮ್ಮ ಮತ್ತು ಕುಟುಂಬದವರು
ಶ್ರೀ ಎಸ್.ಎನ್.ಆನಂದಮೂರ್ತಿ ಮತ್ತು ಕುಟುಂಬದವರು


# ಚಿನ್ನದ ಬೆಲೆ ₹ 191ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಶುಕ್ರವಾರ ಪ್ರತಿ 10 ಗ್ರಾಂಗೆ ₹ 191ರಷ್ಟು ಕಡಿಮೆ ಆಗಿ, ₹ 46,283ರಂತೆ ಮಾರಾಟವಾಗಿದೆ. ಬೆಳ್ಳಿಯ ಬೆಲೆಯು ಪ್ರತಿ ಕಿಲೋ ಗ್ರಾಂಗೆ ₹ 1,062ರಂತೆ ಇಳಿಕೆ ಕಂಡು, ₹ 67,795ಕ್ಕೆ ಮಾರಾಟವಾಗಿದೆ.

# ಮಣಿಪಾಲ್ ತೆಕ್ಕೆಗೆ ಸೇರಿದ ಕೊಲಂಬಿಯಾ ಏಷ್ಯಾ

ನವದೆಹಲಿ (ಪಿಟಿಐ): ಕೊಲಂಬಿಯಾ ಏಷ್ಯಾ ಹಾಸ್ಪಿಟಲ್ಸ್ ಸಮೂಹದ ಭಾರತದಲ್ಲಿನ ಆಸ್ಪತ್ರೆಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಆರೋಗ್ಯಸೇವಾ ವಲಯದ ಪ್ರಮುಖ ಕಂಪನಿಯಾದ ‘ಮಣಿಪಾಲ್ ಹಾಸ್ಪಿಟಲ್ಸ್’ ಶುಕ್ರವಾರ ತಿಳಿಸಿದೆ.

ಕೊಲಂಬಿಯಾ ಏಷ್ಯಾ ಹಾಸ್ಪಿಟಲ್ಸ್‌ನ ಶೇಕಡ 100ರಷ್ಟು ಷೇರುಗಳನ್ನು ಮಣಿಪಾಲ್ ಹಾಸ್ಪಿಟಲ್ಸ್ ಖರೀದಿಸಿದೆ. ಈ ಖರೀದಿಯೊಂದಿಗೆ ಮಣಿಪಾಲ್ ಹಾಸ್ಪಿಟಲ್ಸ್ ಸಮೂಹವು ಭಾರತದ ಎರಡನೆಯ ಅತಿದೊಡ್ಡ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಗಳ ಸಮೂಹವಾಗಿ ಹೊರಹೊಮ್ಮಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

‘ಆರೋಗ್ಯಸೇವಾ ವಲಯದ ಈ ಎರಡು ಸಂಸ್ಥೆಗಳು (ಮಣಿಪಾಲ್ ಮತ್ತು ಕೊಲಂಬಿಯಾ ಏಷ್ಯಾ) ಒಂದಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಎಲ್ಲ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದೇವೆ’ ಎಂದು ಮಣಿಪಾಲ್ ಶಿಕ್ಷಣ ಮತ್ತು ಆರೋಗ್ಯ ಸಮೂಹದ ಅಧ್ಯಕ್ಷ ರಂಜನ್ ಪೈ ಹೇಳಿದ್ದಾರೆ.

ಎರಡೂ ಕಂಪನಿಗಳನ್ನು ಒಗ್ಗೂಡಿಸಿದರೆ 14 ನಗರಗಳಲ್ಲಿ ಒಟ್ಟು ಏಳು ಸಾವಿರ ಹಾಸಿಗೆಗಳ ಸಾಮರ್ಥ್ಯದ 26 ಆಸ್ಪತ್ರೆಗಳು, ನಾಲ್ಕು ಸಾವಿರಕ್ಕೂ ಹೆಚ್ಚಿನ ವೈದ್ಯರು ಇದ್ದಾರೆ ಎಂದು ಮಣಿಪಾಲ್ ಹಾಸ್ಪಿಟಲ್ಸ್ ತಿಳಿಸಿದೆ.

# ಮೂಲಸೌಕರ್ಯ ವಲಯಗಳಲ್ಲಿ ಬೆಳವಣಿಗೆ

ನವದೆಹಲಿ (ಪಿಟಿಐ): ಎಂಟು ಪ್ರಮುಖ ಕೈಗಾರಿಕಾ ವಲಯಗಳು ಮಾರ್ಚ್ ತಿಂಗಳಲ್ಲಿ ಶೇಕಡ 6.8ರಷ್ಟು ಬೆಳವಣಿಗೆ ಕಂಡಿವೆ. ಇದು 32 ತಿಂಗಳುಗಳ ಗರಿಷ್ಠ ಬೆಳವಣಿಗೆ.

ಮೂಲಸೌಕರ್ಯಕ್ಕೆ ಸಂಬಂಧಿಸಿದ ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಉತ್ಪಾದನಾ ವಲಯಗಳ ಮಾರ್ಚ್ ತಿಂಗಳ ಬೆಳವಣಿಗೆ ಪ್ರಮಾಣವು ಹಿಂದಿನ ವರ್ಷದ ಮಾರ್ಚ್ ತಿಂಗಳಲ್ಲಿ ಶೇ (–)8.6 ಆಗಿತ್ತು.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ನೀಡಿರುವ ಮಾಹಿತಿ ಪ್ರಕಾರ ನೈಸರ್ಗಿಕ ಅನಿಲ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಉತ್ಪಾದನಾ ವಲಯಗಳಲ್ಲಿನ ಉತ್ಪಾದನೆಯ ಪ್ರಮಾಣದಲ್ಲಿ ಈ ವರ್ಷದ ಮಾರ್ಚ್ ತಿಂಗಳಲ್ಲಿ ಕ್ರಮವಾಗಿ ಶೇ 12.3, ಶೇ 23, ಶೇ 32.5 ಮತ್ತು ಶೇ 21.6ರಷ್ಟು ಬೆಳವಣಿಗೆ ಆಗಿದೆ. ಈ ವಲಯಗಳು ಹಿಂದಿನ ವರ್ಷದ ಇದೇ ತಿಂಗಳಲ್ಲಿ ನಕಾರಾತ್ಮಕ ಬೆಳವಣಿಗೆ ದಾಖಲಿಸಿದ್ದವು.

ಕಲ್ಲಿದ್ದಲು, ಕಚ್ಚಾತೈಲ, ಸಂಸ್ಕರಣಾ ಉತ್ಪನ್ನಗಳು ಮತ್ತು ರಸಗೊಬ್ಬರ ವಲಯಗಳು ನಕಾರಾತ್ಮಕ ಬೆಳವಣಿಗೆ ಕಂಡಿವೆ.

2020-21ನೆಯ ಆರ್ಥಿಕ ವರ್ಷದಲ್ಲಿ ಈ ಎಂಟು ವಲಯಗಳು ಶೇ (–) 7ರಷ್ಟು ಕುಸಿತ ಕಂಡಿವೆ. 2019–20ರಲ್ಲಿ ಈ ವಲಯಗಳಲ್ಲಿ ಶೇ 0.4ರ ಬೆಳವಣಿಗೆ ಕಂಡುಬಂದಿತ್ತು.

# ರಿಲಯನ್ಸ್ ಲಾಭ ₹ 13 ಸಾವಿರ ಕೋಟಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾರ್ಚ್ ತ್ರೈಮಾಸಿಕದ ನಿವ್ವಳ ಲಾಭ ಎರಡು ಪಟ್ಟು ಹೆಚ್ಚಳ ಕಂಡಿದೆ. ಈ ವರ್ಷದ ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯು ₹ 13,227 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹ 6,348 ಕೋಟಿ ಲಾಭ ಗಳಿಸಿತ್ತು.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ಆದಾಯದಲ್ಲಿ ಶೇಕಡ 13.6ರಷ್ಟು ಹೆಚ್ಚಳ ಆಗಿ, ₹ 1.72 ಲಕ್ಷ ಕೋಟಿಗೆ ತಲುಪಿದೆ.

ರಿಲಯನ್ಸ್ ಸಮೂಹದ ಪ್ರಮುಖ ಕಂಪನಿಯಾದ ‘ಜಿಯೊ’ದ ನಿವ್ವಳ ಲಾಭದಲ್ಲಿ ಶೇ 47.5ರಷ್ಟು ಹೆಚ್ಚಳ ಆಗಿದ್ದು, ಕಂಪನಿಯು ₹ 3,508 ಕೋಟಿ ಲಾಭ ಗಳಿಸಿದೆ. ಈ ಅವಧಿಯಲ್ಲಿ ಕಂಪನಿಯು 1.54 ಕೋಟಿಗೂ ಹೆಚ್ಚು ಹೊಸ ಚಂದಾದಾರರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಆದರೆ, ಕಂಪನಿಯು ಪ್ರತಿ ಗ್ರಾಹಕನಿಂದ ಪಡೆಯುವ ಆದಾಯವು ₹ 138ಕ್ಕೆ ಇಳಿದಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ಪ್ರತಿ ಗ್ರಾಹಕನಿಂದ ₹ 151 ಆದಾಯ ಸಂಗ್ರಹಿಸುತ್ತಿತ್ತು.

ಕೋವಿಡ್–19 ಕಾರಣದಿಂದಾಗಿ ಜನರ ಜೀವನೋಪಾಯಕ್ಕೆ ಏಟು ಬಿದ್ದರೂ, ರಿಲಯನ್ಸ್ ಸಮೂಹವು ಅರ್ಥ ವ್ಯವಸ್ಥೆಯಲ್ಲಿ 75 ಸಾವಿರ ಉದ್ಯೋಗ ಸೃಷ್ಟಿಸಿದೆ ಎಂದು ಕಂಪನಿಯ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ. ಉದ್ಯೋಗ ಸೃಷ್ಟಿ ಕುರಿತು ಹೆಚ್ಚಿನ ವಿವರಗಳನ್ನು ಅವರು ನೀಡಿಲ್ಲ.


IN LOVING MEMORY
BNG RUKMINI
Age: 90 Years
W/o. BN Govindaiah Setty
Left for Vaikunta
on 30-04-2021
Inserted by
Dr. Lakshmi & Dr. Ravi Makam
Jayashree Rajanahally
Rohit Makam
Sejal & Dr Arjun Makam
Meghana Rajanahally
Varsha Rajanahally
Sanaya & Anushri Makam

## 20ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಸಿ. ನಾರಾಯಣ ರೆಡ್ಡಿ ವಿಧಾನ ಪರಿಷತ್ ಸದಸ್ಯರಾಗಿದ್ದವರು
ಸಂಸ್ಥಾಪಕರು: ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಾಲಯ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು.
ಇವರು ಸ್ವರ್ಗಸ್ಥರಾಗಿ ತಾ॥ 01.05.2021ಕ್ಕೆ 20 ವರ್ಷಗಳಾದವು

ಯದ್ಯದಾಚರತಿ ಶ್ರೇಷ್ಠ: ತತ್ತದೇವೇತರೋ ಜನ: ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥
(ಭಗವದ್ಗೀತೆ – 3.21)

ಶ್ರೇಷ್ಠ ಪುರುಷನು ಮಾಡಿದುದನ್ನು ಉಳಿದ ಜನರೂ ಅನುಕರಣೆ ಮಾಡುತ್ತಾರೆ. ಯಾವುದನ್ನು ಅವನು ಸರಿಯೆಂದು ಮಾಡುತ್ತಾನೋ, ಇತರರೂ ಅದನ್ನೇ ಅನುಸರಿಸುತ್ತಾರೆ.

ತಮ್ಮ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಸದಾ ಪ್ರಾರ್ಥಿಸುವ

ಶ್ರೀಮತಿ ಸುಶೀಲ ನಾರಾಯಣ ರೆಡ್ಡಿ,
ಶ್ರೀಮತಿ ವನಿತಾ ಮತ್ತು ಶ್ರೀ ಎನ್. ಸ್ವರೂಪ್ ಕುಮಾರ್,
ಶ್ರೀಮತಿ ಪ್ರಿಯಾಂಕ ಮತ್ತು ಶ್ರೀ ಎನ್. ಶಶಾಂಕ್ ಕುಮಾರ್,
ನಾರಾಯಣ್ ಸ್ವರೂಪ್, ನವರತನ್ ಸ್ವರೂಪ್, ಆಯನ ಶಶಾಂಕ್,
ಅರ್ಹ ವಿಹಾನ ಶಶಾಂಕ್,
ಬಂಧುಗಳು ಹಾಗೂ ಆಪ್ತರು.



ಪ್ರಜಾವಾಣಿ
## ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

**ರಿಯಲ್ ಎಸ್ಟೇಟ್ ಸೆಲ್ಲಿಂಗ್**

**Farm House/ Land/ Resorts**

**Nelamangala**

FARMLAND FOR Sale 5/10 Guntas Near Nelamangala. Suitable for Dairy Farming and Farm House Contact 9448119275/ 7829134000

**Sites**

**Hesaraghatta**

CNR DEVELOPERS and Builders BMRDA Sites Available.Contact 9448119275 / 7829134000

**ಉದ್ಯೋಗಾವಕಾಶ**

**General**

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

**Part-Time Jobs**

ಮನೆಯಿಂದಲೇ ಕಂಪ್ಯೂಟರ್ ಆಫ್ ಲೈನ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ಪ್ರತಿ ದಿನ 3000/- ವಯಸ್ಸಿನ ಮಿತಿಯಿಲ್ಲ 9902603707, 9686115054

**Hospital & Medical Jobs**

REQUIRED NURSES Urgently:Male and Female For COVID DUTY in Bangalore, Hyderabad, Pune and Mumbai, Salary:30,000 to 50,000, Experience:0 to10 years (Gap accepted) for more details: careers@majhealthcare.in, Contact: 9606221218, 9606347575, 6364557575, 7022399993

**ವ್ಯಾಪಾರ**

**Business to Business**

**Hotel & Restaurant**

BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/9606701007

**ಭವಿಷ್ಯ**

**Astrology**

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಸ್ಪೆಷಲಿಸ್ಟ್★ ಜನವಶೀಕರಣ, ಧನವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ನಾವುದೇ ಕಠಿಣ ಸಮಸ್ಯೆಗಳಿಗೆ ಫೋನಿನಲ್ಲೇ ಪರಿಹಾರ. ಮಂಜುನಾಥ ಗುರೂಜಿ 9886999747

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement


## ಸಂಕ್ಷಿಪ್ತ ಸುದ್ದಿ

### ‘ಆಮ್ಲಜನಕ ವ್ಯವಸ್ಥೆ ವಿಸ್ತರಿಸಲು ಒತ್ತು’

ವಾಷಿಂಗ್ಟನ್: ಭಾರತದಲ್ಲಿ ವೈದ್ಯಕೀಯ ಆಮ್ಲಜನಕ ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ವಿಸ್ತರಿಸಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ ಮುಂದಾಗಿದೆ. ಈ ಮೂಲಕ ಕೋವಿಡ್–19ನಿಂದ ಬಳಲುತ್ತಿರುವವರ ಜೀವ ಉಳಿಸಲು ನೆರವಾಗುವ ಉದ್ದೇಶವಿದೆ ಎಂದು ಯುಎಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲೆಪ್‌ಮೆಂಟ್ (ಯುಎಸ್‌ಎಐಡಿ) ಹೇಳಿದೆ.

‘ಭಾರತದಲ್ಲಿ ಕೋವಿಡ್–19 ರೋಗಿಗಳ ಸಂಖ್ಯೆ ಅಧಿಕವಾಗಿದ್ದು, ಈ ಸಂಖ್ಯೆ ದಿನೇದಿನೇ ಹೆಚ್ಚುತ್ತಲೇ ಇರುವುದು ಕಳವಳಕಾರಿ’ ಎಂದು ಯುಎಸ್‌ಎಐಡಿಯ ಹಿರಿಯ ಸಲಹೆಗಾರ ಜೆರೆಮಿ ಕೋನಿಂಡಿಕ್ ಹೇಳಿದ್ದಾರೆ.

‘ಚಿಕಿತ್ಸೆಗಾಗಿ ದಾಖಲಾಗುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಆಸ್ಪತ್ರೆಗಳು ಒತ್ತಡಕ್ಕೆ ಒಳಗಾಗಿವೆ. ಹೀಗಾಗಿ ಆಮ್ಲಜನಕ, ಜೀವರಕ್ಷಕ ಔಷಧಿಗಳ ತುರ್ತು ಪೂರೈಕೆ ಆಗಬೇಕಾಗಿದೆ ಎಂದು ಸಂಸ್ಥೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ’ ಎಂದು ಜೆರೆಮಿ ಹೇಳಿದ್ದಾರೆ.

### 2,184 ಆಮ್ಲಜನಕ ಪರಿಕರಗಳು ರವಾನೆ

ಹ್ಯೂಸ್ಟನ್/ವಾಷಿಂಗ್ಟನ್: ಸೇವಾ ಇಂಟರ್‌ನ್ಯಾಷನಲ್ ಎಂಬ ಭಾರತೀಯ-ಅಮೆರಿಕನ್ ಸ್ವಯಂ ಸೇವಾ ಸಂಸ್ಥೆಯು ಅಟ್ಲಾಂಟಾದಿಂದ 2,184 ಆಮ್ಲಜನಕ ಪೂರೈಕೆ ಪರಿಕರಗಳನ್ನು ಭಾರತಕ್ಕೆ ರವಾನಿಸಿದೆ.

ಸೇವಾ ಸಂಸ್ಥೆಯು ಸಾಮಾಜಿಕ ಜಾಲತಾಣಗಳ ಮೂಲಕ ‘ಕೋವಿಡ್ ಪರಿಹಾರ ನಿಧಿ’ಗಾಗಿ ₹ 37.02 ಕೋಟಿ ಸಂಗ್ರಹಿಸುವ ಗುರಿಯನ್ನು ಹೊಂದಿತ್ತು. ಇದೀಗ ಈ ಮೊತ್ತವನ್ನು ₹74.04 ಕೋಟಿಗೆ ಹೆಚ್ಚಿದೆ. ಈಗಾಗಲೇ ಸಂಸ್ಥೆಯು ಕೋವಿಡ್ ಪರಿಹಾರಕ್ಕಾಗಿ ₹59.23 ಕೋಟಿ ಸಂಗ್ರಹಿಸಿದೆ.

‘ಬಡ ಕುಟುಂಬಗಳಿಗೆ ಆಹಾರ ಕಿಟ್ ಅನ್ನು ವಿತರಿಸುವ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಕೋವಿಡ್ ಪರಿಹಾರ ನಿಧಿ ಸಂಗ್ರಹಕ್ಕೆ ಸಾಮಾಜಿಕ ಜಾಲತಾಣದಲ್ಲಿ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ’ ಎಂದು ಸಂಸ್ಥೆಯ ವಕ್ತಾರ ಗೀತೇಶ್ ದೇಸಾಯಿ ತಿಳಿಸಿದ್ದಾರೆ.

### ನೆರವು ಹೆಚ್ಚಳಕ್ಕೆ ಬದ್ಧ: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಕೋವಿಡ್–19 ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ನೀಡುತ್ತಿರುವ ನೆರವನ್ನು ಹೆಚ್ಚಿಸಲು ಸಂಸ್ಥೆ ಸಿದ್ಧವಾಗಿದೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಹೇಳಿದ್ದಾರೆ.

ಆ್ಯಂಟೊನಿಯೊ ಗುಟೆರಸ್

‘ಭಾರತದಲ್ಲಿ 1.8 ಕೋಟಿಗೂ ಅಧಿಕ ಜನರು ಕೋವಿಡ್‌ನಿಂದ ಬಳಲುತ್ತಿದ್ದು, 2 ಲಕ್ಷಕ್ಕೂ ಅಧಿಕ ಜನರು ಸಾವನ್ನಪ್ಪಿದ್ದಾರೆ. ಇಂಥ ಕಠಿಣ ಸಮಯದಲ್ಲಿ ವಿಶ್ವಸಂಸ್ಥೆಯು ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾರತದೊಂದಿಗೆ ನಿಲ್ಲಲಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

### ನೆರವಿಗೆ ಸಿದ್ಧ: ಚೀನಾ

ಬೀಜಿಂಗ್: ಭಾರತದಲ್ಲಿ ಕೋವಿಡ್ ಪ್ರಕರಣಗಳ ಏರಿಕೆ ಕುರಿತು ಕಳವಳ ವ್ಯಕ್ತಪಡಿಸಿರುವ ಚೀನಾ, ಸಮಸ್ಯೆ ಎದುರಿಸಲು ಅಗತ್ಯ ನೆರವು ಒದಗಿಸಲು ಸಿದ್ಧವಿರುವುದಾಗಿ ಹೇಳಿದೆ.

ಈ ಸಂಬಂಧ, ಪ್ರಧಾನಿ ನರೇಂದ್ರ ಮೋದಿ ಅವರಿಗೆ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಶುಕ್ರವಾರ ಪತ್ರ ಬರೆದಿದ್ದಾರೆ.

‘ಭಾರತದಲ್ಲಿ ಕೊರೊನಾ ಸೋಂಕಿನ ಪ್ರಮಾಣವನ್ನು ನಿಯಂತ್ರಿಸಲು ಚೀನಾ ಹೆಚ್ಚಿನ ಸಹಕಾರ ನೀಡಲಿದೆ. ಚೀನಾದಲ್ಲಿ ಉತ್ಪತ್ತಿಯಾಗುವ ಸಾಂಕ್ರಾಮಿಕ ವಿರೋಧಿ ವಸ್ತುಗಳನ್ನು ಭಾರತಕ್ಕೆ ತ್ವರಿತವಾಗಿ ರವಾನಿಸಲಾಗುವುದು’ ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಹೇಳಿದ್ದಾರೆ.

## ಕೊರೊನಾ ಸಾಂತ್ವನ

### ‘ಸಕಾರಾತ್ಮಕ ಆಲೋಚನೆ ಜತೆ ಮುನ್ನೆಚ್ಚರಿಕೆ ಇರಲಿ’



‘ಕೋವಿಡ್ ಎರಡನೇ ಅಲೆಯಲ್ಲಿ ವೈರಾಣು ವೇಗವಾಗಿ ಹರಡುತ್ತಿದೆ. ಹೀಗಾಗಿ, ಅಗತ್ಯ ಸುರಕ್ಷತಾ ಕ್ರಮಗಳನ್ನು ಪಾಲಿಸುವ ಜತೆಗೆ ಕಾಯಿಲೆಯ ತೀವ್ರತೆ ಕಡಿಮೆ ಮಾಡಲು ಸಹಕಾರಿಯಾಗಿರುವ ಲಸಿಕೆ ಪಡೆದುಕೊಳ್ಳಬೇಕು. ಅನಗತ್ಯವಾಗಿ ಭಯ, ಆತಂಕಕ್ಕೆ ಒಳಗಾಗುವ ಬದಲು ಸಕಾರಾತ್ಮಕ ಆಲೋಚನೆಯೊಂದಿಗೆ ಉತ್ತಮ ಜೀವನಶೈಲಿ ಅಳವಡಿಸಿಕೊಳ್ಳಬೇಕು.’

‘ಲಸಿಕೆ ಪಡೆಯುವ ಮೊದಲು ದೇಹಕ್ಕೆ ವಿಶ್ರಾಂತಿ ನೀಡಬೇಕು. 6ರಿಂದ 8 ಗಂಟೆವರೆಗೆ ನಿದ್ದೆ ಮಾಡುವುದು ಉತ್ತಮ. ಇದರಿಂದ ದೇಹ ಮತ್ತು ಮನಸ್ಸು ಶಾಂತಗೊಳ್ಳಲಿದೆ. ಕೋವಿಡೇತರ ಕಾಯಿಲೆಗೆ ನಿಯಮಿತವಾಗಿ ಔಷಧ ತೆಗೆದುಕೊಳ್ಳುತ್ತಿದ್ದರೆ ಅಥವಾ ಜ್ವರ, ಕೆಮ್ಮು, ಮೈಕೈ ನೋವಿನಂತಹ ಲಕ್ಷಣಗಳು ಕಾಣಿಸಿಕೊಂಡಿದ್ದಲ್ಲಿ ವೈದ್ಯರನ್ನು ಸಂಪರ್ಕಿಸಿ, ಲಸಿಕೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಅನಾರೋಗ್ಯ ಸಮಸ್ಯೆಗಳು ಸಂಪೂರ್ಣ ಕಡಿಮೆಯಾದ ಬಳಿಕ ಲಸಿಕೆ ಹಾಕಿಸಿಕೊಳ್ಳಬೇಕು. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಕಾರಿಯಾದ ಪೌಷ್ಟಿಕ ಆಹಾರ ಸೇವಿಸಬೇಕು.’

‘ಸದ್ಯ ದೇಶದಲ್ಲಿ ಬಳಕೆಯಲ್ಲಿರುವ ಲಸಿಕೆಗಳು ಸುರಕ್ಷಿತವಾಗಿವೆ. ಲಸಿಕೆಯ ಬಗೆಗಿನ ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು. ಕೆಲವರಿಗೆ ಸಣ್ಣ ಪ್ರಮಾಣದಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಾಮಾನ್ಯ. ಲಸಿಕೆ ಪಡೆಯುವ ದಿನ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಕುಡಿಯಬೇಕು. ಇಲ್ಲವಾದರೆ ದೇಹದಲ್ಲಿ ನೀರಿನ ಕೊರತೆ (ನಿರ್ಜಲೀಕರಣ) ಉಂಟಾಗಿ, ತಲೆ ತಿರುಗುವಿಕೆ, ದಣಿವು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುವ ಅನುಭವವಾಗುತ್ತದೆ.’

‘ಲಸಿಕೆ ಪಡೆದ ಬಳಿಕ ಕೂಡ ಆರೋಗ್ಯದ ಮೇಲೆ ನಿಗಾ ಇಡಬೇಕಾಗುತ್ತದೆ. ವಾಂತಿ, ಮೂರ್ಛೆ, ಜ್ವರ, ಮೈಕೈ ನೋವು, ಚುಚ್ಚುಮದ್ದು ನೀಡಿದ ಜಾಗದಲ್ಲಿ ತುರಿಕೆ ಸೇರಿದಂತೆ ವಿವಿಧ ಸಮಸ್ಯೆಗಳು ತೀವ್ರ ಸ್ವರೂಪದಲ್ಲಿ ಕಾಣಿಸಿಕೊಂಡಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು. ಲಸಿಕೆ ಪಡೆಯುವ ದಿನ ಮದ್ಯಪಾನ ಮಾಡದಿರುವುದು ಉತ್ತಮ. ಆದರೆ, ಈ ಬಗ್ಗೆ ವೈಜ್ಞಾನಿಕ ಅಧ್ಯಯನಗಳು ನಡೆದಿಲ್ಲ. ಲಸಿಕೆ ಪಡೆದ ಬಳಿಕ ನೋವಿನ ಅನುಭವವಾದರೂ ನೋವು ನಿವಾರಕ ಮಾತ್ರೆಗಳನ್ನು ಸೇವಿಸಬಾರದು. ಇದು ರೋಗನಿರೋಧಕ ವ್ಯವಸ್ಥೆಗೆ ಅಡ್ಡಿಪಡಿಸುವ ಜತೆಗೆ ಅಡ್ಡ ಪರಿಣಾಮಗಳಿಗೆ ಕಾಣವಾಗುತ್ತದೆ.’

‘ಮೊದಲ ಡೋಸ್ ಲಸಿಕೆ ಪಡೆದ 4ರಿಂದ 12 ವಾರಗಳ ಅವಧಿಯಲ್ಲಿ ಎರಡನೇ ಡೋಸ್ ಲಸಿಕೆಯನ್ನು ಪಡೆದುಕೊಳ್ಳಬೇಕು. ಲಸಿಕೆ ಪಡೆದ ಬಳಿಕ ಕೊರೊನಾ ಸೋಂಕು ತಗುಲುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಸೋಂಕಿತರಾದರೂ ಅದರ ತೀವ್ರತೆ ಕಡಿಮೆ ಇರುತ್ತದೆ. ಹಾಗಾಗಿ, ಮುಖಗವಸು ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ವಿವಿಧ ನಿಯಮಗಳನ್ನು ಪಾಲಿಸಬೇಕು.’

|ಡಾ. ಪ್ರುಥು ನರೇಂದ್ರ ಧೇಕನೆ, ಸಾಂಕ್ರಾಮಿಕ ರೋಗಗಳ ಸಲಹೆಗಾರ, ಫೋರ್ಟಿಸ್ ಆಸ್ಪತ್ರೆ


## ಚಿರಸ್ಮರಣೆ

ಶ್ರೀಮತಿ. ಸರೋಜಿನಿ ಕಾರ್ಲೆ
ನಿಧನ: 01–05–2019

ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.

ಸದಾ ಸ್ಮರಿಸುವ
ಕುಟುಂಬ ವರ್ಗದವರು

Classifieds
Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

REMEMBRANCE & OBITUARIES
If you wish to pay homage to your loved ones who have left for their heavenly abode or just want to express gratitude to your kith and kin, we would be honoured to guide you with all that is necessary to express your wishes in our esteemed newspapers,
DECCAN HERALD & PRAJAVANI
Please contact us at :
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
E-mail: dhclassifieds@deccanherald.co.in


# ಸಲಿಂಗಿಗಳ ಪ್ರಕರಣ: ನ್ಯಾಯಮೂರ್ತಿಯಿಂದ ಮನೋವಿಜ್ಞಾನ ಅಧ್ಯಯನ

ಚೆನ್ನೈ (ಪಿಟಿಐ): ಸಲಿಂಗಿಗಳ ನಡುವಿನ ಸಂಬಂಧ ಪ್ರಕರಣ ಕುರಿತು ಆದೇಶ ಹೊರಡಿಸುವುದಕ್ಕೂ ಮುನ್ನ ಈ ವಿಷಯವಾಗಿ ಮನೋವಿಜ್ಞಾನಕ್ಕೆ ಸಂಬಂಧಪಟ್ಟ ಶಿಕ್ಷಣ ಪಡೆಯಲು ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿ ಎನ್.ಆನಂದ್ ವೆಂಕಟೇಶ ನಿರ್ಧರಿಸಿದ್ದಾರೆ.

‘ಇಂಥ ಪ್ರಕರಣಗಳಲ್ಲಿ ಆದೇಶ ಹೊರಡಿಸುವುದಕ್ಕೂ ಮೊದಲು ಸಲಿಂಗಿಗಳ ಸಂಬಂಧ ಕುರಿತು ಮನೋವೈಜ್ಞಾನಿಕವಾಗಿ ತಿಳಿದುಕೊಳ್ಳುವುದು ಮುಖ್ಯ. ಈ ವಿಷಯವಾಗಿ ವಿಚಾರ ಮಂಥನಕ್ಕೆ ನನ್ನನ್ನೇ ಒಡ್ಡಿಕೊಳ್ಳುವೆ’ ಎಂದು ಅವರು ಹೇಳಿದ್ದಾರೆ.

ಸಲಿಂಗಿ ಜೋಡಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, ‘ಇಂಥ ಪ್ರಕರಣಗಳಲ್ಲಿ ಬುದ್ಧಿ ಬದಲಾಗಿ ಹೃದಯದಿಂದ ಪದಗಳು ಹೊರಹೊಮ್ಮಬೇಕು. ಈ ಪರಿಕಲ್ಪನೆ ಬಗ್ಗೆ ನನಗೆ ಅರಿವು ಇಲ್ಲದೇ ಹೋದರೆ ಹೃದಯದಿಂದ ಪದಗಳು ಹೊರಡಲು ಸಾಧ್ಯ ಇಲ್ಲ’ ಎಂದು ಪ್ರತಿಪಾದಿಸಿದರು.

‘ಈ ವಿಷಯವಾಗಿ ನನಗೆ ಮನೋವಿಜ್ಞಾನಿ ವಿದ್ಯಾ ದಿನಕರನ್ ಅವರು ಶಿಕ್ಷಣ ನೀಡಲಿದ್ದಾರೆ’ ಎಂದು ಹೇಳಿದ ಅವರು, ವಿಚಾರಣೆಯನ್ನು ಜೂನ್ 7ಕ್ಕೆ ಮುಂದೂಡಿದರು.

## ‘ಮುಂದಿನ ವಾರ ಕೋವಿಡ್ ಸಂಖ್ಯೆಯಲ್ಲಿ ಹೆಚ್ಚಳ’

ನವದೆಹಲಿ (ರಾಯಿಟರ್ಸ್): ಭಾರತದಲ್ಲಿ ಮುಂದಿನ ವಾರ ಕೋವಿಡ್–19 ಪ್ರಕರಣಗಳ ಸಂಖ್ಯೆ ಹೆಚ್ಚಾಗಬಹುದು ಎಂದು ವಿಜ್ಞಾನಿಗಳ ತಂಡ ತಿಳಿಸಿದೆ.

ನಿರೀಕ್ಷೆಗೂ ಮೀರಿ ವೈರಸ್ ವೇಗದಲ್ಲಿ ಹಬ್ಬಿರುವುದರಿಂದ ಮೇ 3ರಿಂದ 5ರ ಅವಧಿಯಲ್ಲಿ ಈ ಸಂಖ್ಯೆಗಳು ಹೆಚ್ಚಾಗಲಿವೆ ಎಂದು ಗಣಿತದ ಮಾದರಿಯನ್ನು ಅನುಸರಿಸಿ ವಿಜ್ಞಾನಿಗಳ ತಂಡ ವಿಶ್ಲೇಷಿಸಿದೆ.

‘ಮುಂದಿನ ವಾರ ದೇಶದಾದ್ಯಂತ ಪ್ರತಿ ದಿನ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತದೆ ಎನ್ನುವುದು ನಮ್ಮ ಅಭಿಪ್ರಾಯ’ ಎಂದು ಸೋಂಕಿನ ಕುರಿತು ಅಧ್ಯಯನಕ್ಕೆ ಸರ್ಕಾರ ನೇಮಿಸಿರುವ ವಿಜ್ಞಾನಿಗಳ ತಂಡದ ಮುಖ್ಯಸ್ಥ ಎಂ. ವಿದ್ಯಾಸಾಗರ ಹೇಳಿದ್ದಾರೆ.

‘ಮುಂದಿನ ನಾಲ್ಕು ಅಥವಾ ಆರು ವಾರಗಳಲ್ಲಿ ಯಾವ ರೀತಿಯ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತೇವೆ ಎನ್ನುವುದು ಮುಖ್ಯವಾಗುತ್ತದೆ’ ಎಂದು ಹೇಳಿದ್ದಾರೆ.

### ಮೊದಲ ಹಂತದಲ್ಲಿ 75 ಸಾವಿರ ಚುಚ್ಚುಮದ್ದುಗಳು ಭಾರತಕ್ಕೆ ತಲುಪುವ ನಿರೀಕ್ಷೆ

# 4.5 ಲಕ್ಷ ರೆಮ್‌ಡಿಸಿವಿರ್ ಆಮದು

ಪ್ರಜಾವಾಣಿ ವಾರ್ತೆ

ನವದೆಹಲಿ: ರೆಮ್‌ಡಿಸಿವಿರ್‌ನ ತೀವ್ರ ಅಭಾವ ಇರುವುದರಿಂದ ಬೇರೆ ದೇಶಗಳಿಂದ 4.5 ಲಕ್ಷ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಭಾರತ ಆಮದು ಮಾಡಿಕೊಳ್ಳಲಿದೆ. ಮೊದಲ ಹಂತದಲ್ಲಿ 75 ಸಾವಿರ ಚುಚ್ಚುಮದ್ದುಗಳು ಭಾರತಕ್ಕೆ ತಲುಪುವ ನಿರೀಕ್ಷೆ ಇದೆ.

‘ಅಮೆರಿಕದ ಗಿಲ್ಯಾಡ್ ಸೈನ್ಸಸ್ ಕಂಪನಿ ಹಾಗೂ ಈಜಿಪ್ಟ್‌ನ ಇವಿಎ ಫಾರ್ಮಾದಿಂದ 4.5 ಲಕ್ಷ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಖರೀದಿಸಲು ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ ಆದೇಶಿಸಿದೆ’ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯವು ಶುಕ್ರವಾರ ತಿಳಿಸಿದೆ.

‘ಒಂದೆರಡು ದಿನಗಳಲ್ಲಿ ಗಿಲ್ಯಾಡ್ ಸೈನ್ಸಸ್ ಕಂಪನಿಯು 75 ಸಾವಿರದಿಂದ 1 ಲಕ್ಷ ಚುಚ್ಚುಮದ್ದುಗಳನ್ನು ಭಾರತಕ್ಕೆ ರವಾನಿಸಲಿದೆ. ಮೇ 15ಕ್ಕೂ ಮುನ್ನ ಇನ್ನೂ 1 ಲಕ್ಷ ಚುಚ್ಚುಮದ್ದುಗಳನ್ನು ಪೂರೈಸಲಿದೆ’ ಎಂದು ಸಚಿವಾಲಯವು ಮಾಹಿತಿ ನೀಡಿದೆ.

‘ಇವಿಎ ಫಾರ್ಮಾ ಆರಂಭಿಕ ಹಂತದಲ್ಲಿ ಸುಮಾರು 10 ಸಾವಿರ ಚುಚ್ಚುಮದ್ದುಗಳನ್ನು ಪೂರೈಸಲಿದ್ದು, ನಂತರ ಪ್ರತಿ 15 ದಿನಗಳಿಗೊಮ್ಮೆ ಅಥವಾ ಜುಲೈವರೆಗೆ 50 ಸಾವಿರ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಪೂರೈಸಲಿದೆ. ಭಾರತದಲ್ಲೂ ರೆಮ್‌ಡಿಸಿವಿರ್ ಚುಚ್ಚುಮದ್ದುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ’ ಎಂದೂ ಸಚಿವಾಲಯವು ತಿಳಿಸಿದೆ.

## 12ರಿಂದ 15 ವರ್ಷದವರಿಗೆ ಲಸಿಕೆ: ಮನವಿ

ಬ್ರಸೆಲ್ಸ್ (ಎಪಿ): ಕೋವಿಡ್ ಲಸಿಕೆಯನ್ನು 12ರಿಂದ 15 ವರ್ಷದ ಮಕ್ಕಳಿಗೆ ನೀಡಲು ಅನುಮೋದನೆ ನೀಡುವಂತೆ ಫೈಜರ್ ಮತ್ತು ಬಯೊಟೆಕ್ ಕಂಪನಿಗಳು ಐರೋಪ್ಯ ಒಕ್ಕೂಟದ ಔಷಧ ನಿಯಂತ್ರಣ ಸಂಸ್ಥೆಗೆ ಮನವಿ ಸಲ್ಲಿಸಿವೆ.

2,000ಕ್ಕೂ ಹೆಚ್ಚು ಮಂದಿ ಹದಿಹರೆಯದವರಲ್ಲಿ ಲಸಿಕೆಯನ್ನು ಪರೀಕ್ಷಿಸಿದ್ದು, ಅದು ಸುರಕ್ಷಿತ ಮತ್ತು ಪರಿಣಾಮಕಾರಿ ಎಂದು ಅಧ್ಯಯನದಿಂದ ದೃಢಪಟ್ಟಿರುವುದರಿಂದ ಅನುಮೋದನೆ ನೀಡುವಂತೆ ಯೂರೋಪಿಯನ್ ಮೆಡಿಸಿನ್ ಏಜೆನ್ಸಿಗೆ ಮನವಿ ಮಾಡಲಾಗಿದೆ ಎಂದು ಕಂಪನಿಗಳು ತಿಳಿಸಿವೆ.

ಲಸಿಕೆ ಪರೀಕ್ಷೆಗೆ ಒಳಪಡಿಸಿದ ಹದಿಹರೆಯದವರ ಆರೋಗ್ಯದ ಬಗ್ಗೆ ಇನ್ನೂ ಎರಡು ವರ್ಷಗಳ ಕಾಲ ನಿಗಾ ಇರಿಸಲಾಗುವುದು ಎಂದೂ ತಿಳಿಸಿದೆ.

ಲಸಿಕೆಯನ್ನು 12ರಿಂದ 15 ವರ್ಷ ವಯಸ್ಸಿನವರಿಗೆ ತುರ್ತು ಬಳಕೆಗೆ ಅನುಮತಿ ನೀಡಬೇಕೆಂದು ಈ ಹಿಂದೆ ಫೈಜರ್ ಮತ್ತು ಬಯೊಟೆಕ್ ಕಂಪನಿಗಳು ಅಮೆರಿಕದ ಆಹಾರ ಮತ್ತು ಔಷಧ ಆಡಳಿತ ಮಂಡಳಿಗೆ ಮನವಿ ಸಲ್ಲಿಸಿತ್ತು.

## ಆಮ್ಲಜನಕ ವ್ಯರ್ಥಗೊಳಿಸಬೇಡಿ: ಕೇಂದ್ರದ ಸೂಚನೆ

ನವದೆಹಲಿ (ಪಿಟಿಐ): ಆಮ್ಲಜನಕ ಮತ್ತು ಸಾರ್ವಜನಿಕ ಆರೋಗ್ಯ ಪರಿಕರಗಳನ್ನು ವ್ಯರ್ಥ ಮಾಡದೆ ಅಗತ್ಯಕ್ಕೆ ಅನುಗುಣವಾಗಿ ಬಳಸುವಂತೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ.

‘ದೇಶದಲ್ಲಿ ಆಮ್ಲಜನಕದ ಕೊರತೆ ಇಲ್ಲ. ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಿಡಲಾಗಿದೆ. ಸಾರ್ವಜನಿಕರು ಆಮ್ಲಜನಕದ ಲಭ್ಯತೆಯ ಬಗ್ಗೆ ಆತಂಕಪಡುವ ಅಗತ್ಯವಿಲ್ಲ’ ಎಂದು ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಪಿಯೂಷ್ ಗೋಯಲ್ ಹೇಳಿದ್ದಾರೆ.

‘ದೇಶದಲ್ಲಿ ವೈದ್ಯಕೀಯ ಆಮ್ಲಜನಕದ ಉತ್ಪಾದನೆಯನ್ನು ಶೇಕಡ 125 ರಷ್ಟು ಹೆಚ್ಚಿಸಲಾಗಿದೆ. ಪ್ರತಿದಿನ 7,500 ಮೆಟ್ರಿಕ್ ಟನ್‌ನಷ್ಟು ದ್ರವ ಆಮ್ಲಜನಕ ಉತ್ಪಾದಿಸುವ ಸಾಮರ್ಥ್ಯ ಇದೆ. ಸರ್ಕಾರವು ವೈದ್ಯಕೀಯ ಆಮ್ಲಜನಕವನ್ನು ಆಮದು ಮಾಡಿಕೊಳ್ಳುತ್ತಿದೆ’ ಎಂದು ಮಾಹಿತಿ ನೀಡಿದರು.

## ದೆಹಲಿ: ಆಸ್ಪತ್ರೆ ಹೊರಗೆ ಸತ್ತವರ ಸಂಖ್ಯೆ ಲೆಕ್ಕಕ್ಕಿಲ್ಲ

• ಸಿದ್ದಯ್ಯ ಹಿರೇಮಠ

ನವದೆಹಲಿ: ಕೊರೊನಾ ಸೋಂಕಿನ ಹಾವಳಿ ಮಿತಿ ಮೀರಿರುವ ರಾಷ್ಟ್ರ ರಾಜಧಾನಿಯಲ್ಲಿ ಸಾವಿನ ಸಂಖ್ಯೆ ನಿತ್ಯವೂ ಹೆಚ್ಚುತ್ತಲೇ ಇದೆ. ಆದರೆ, ಆಸ್ಪತ್ರೆಗೆ ದಾಖಲಾಗದೇ ಸತ್ತವರ ಸಂಖ್ಯೆ ಮತ್ತು ಮಾಹಿತಿ ಅಧಿಕೃತವಾಗಿ ದಾಖಲಾಗುತ್ತಿಲ್ಲ.

ಉಸಿರಾಟದ ತೀವ್ರ ಸಮಸ್ಯೆ ಎದುರಿಸುತ್ತಿರುವ ನೂರಾರು ರೋಗಿಗಳು ಕಳೆದ ಮೂರು ವಾರಗಳಿಂದ ಹಾಸಿಗೆಗಳ ಅಭಾವದಿಂದಾಗಿ ಆಸ್ಪತ್ರೆಗೆ ದಾಖಲಾಗಲು ಸಾಧ್ಯವಾಗದೇ, ಚಿಕಿತ್ಸೆಯೂ ದೊರೆಯದೇ ಮನೆಗಳಲ್ಲಿ, ಆಸ್ಪತ್ರೆಗಳ ಎದುರು, ಮಾರ್ಗಮಧ್ಯೆ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಂಥವರ ಸಾವು ಕೋವಿಡ್ ಸಾವಿನ ಲೆಕ್ಕಕ್ಕೆ ಜಮೆಯಾಗುತ್ತಿಲ್ಲ.

ಗುರುವಾರ ದೆಹಲಿಯಲ್ಲಿ ಕೋವಿಡ್‌ನಿಂದ 396 ಮಂದಿ ಸತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಆದರೆ, ಆಸ್ಪತ್ರೆಗೆ ದಾಖಲಾಗದೇ ಸತ್ತವರ ಸಂಖ್ಯೆ ಸೇರಿದರೆ ಈ ಪ್ರಮಾಣ ಮತ್ತಷ್ಟು ಹೆಚ್ಚಲಿದೆ ಎಂದು ಹೇಳಲಾಗುತ್ತಿದೆ.

ಕೊರೊನಾ ಲಕ್ಷಣಗಳಿಂದ ತೀವ್ರ ಸಮಸ್ಯೆ ಎದುರಿಸುತ್ತಿದ್ದರೂ, ಪರೀಕ್ಷಾ ಕೇಂದ್ರಗಳಿಗೆ ತೆರಳಿ, ಅಲ್ಲಿನ ಸರದಿಯಲ್ಲಿ ನಿಂತು ಪರೀಕ್ಷೆ ಮಾಡಿಸಿಕೊಳ್ಳಲು ತ್ರಾಣವಿಲ್ಲದಂಥ ರೋಗಿಗಳು ಮನೆಗಳಲ್ಲೇ ಪ್ರಾಣ ಕಳೆದುಕೊಂಡಿದ್ದಾರೆ.

ಚಿತಾಗಾರಗಳಲ್ಲಿ ನೋಂದಣಿ ವ್ಯವಸ್ಥೆ ಇದೆಯಾದರೂ ಆಸ್ಪತ್ರೆಗಳ ಪತ್ರವಿಲ್ಲದೇ ಅಂತ್ಯಕ್ರಿಯೆಗೆ ತರುತ್ತಿರುವ ಶವಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳುತ್ತಿಲ್ಲ. ಅಂಥವುಗಳನ್ನು ಸಾಮಾನ್ಯ ಸಾವು ಎಂದೇ ಪರಿಗಣಿಸಲಾಗುತ್ತಿದೆ.

‘ಸತ್ತವರ ಸಂಖ್ಯೆಯನ್ನು ಇದ್ದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತೋರಿಸಬೇಕೆಂಬುದು ನಾವೇನೂ ಹೇಳುತ್ತಿಲ್ಲ. ಆದರೆ ಕೊರೊನಾದಿಂದ ಸತ್ತರೂ ಗಣನೆಗೆ ತೆಗೆದುಕೊಳ್ಳದಿರುವುದು ಸರಿಯಲ್ಲ’ ಎಂದು ಗುರುವಾರ ಆಸ್ಪತ್ರೆ ಎದುರೇ ಮೃತಪಟ್ಟಿರುವ ದೆಹಲಿಯ ಆರ್‌.ಕೆ. ಪುರಂನ ಸೆಕ್ಟರ್–13ರ ನಿವಾಸಿ ಕುಂವರ್ ಬಾದ್‌ಶಾ ಅವರ ಪುತ್ರ ಸಾರಾಂಶ್ ನೋವು ತೋಡಿಕೊಂಡರು.

‘ಆಸ್ಪತ್ರೆಗೆ ದಾಖಲಾಗದೇ ಸತ್ತವರ ಮಾಹಿತಿ ಸರ್ಕಾರದ ದಾಖಲೆಯಲ್ಲಿ ಸೇರುವಂತಾಗಬೇಕು. ಬಡವರಿಗೆ, ಅವಲಂಬಿತರಿಗೆ ಸರ್ಕಾರ ನೆರವು ನೀಡಲು ಮುಂದಾದರೆ ಅಧಿಕೃತ ದಾಖಲೆಯ ಅಗತ್ಯ ಬೀಳಲಿದೆ’ ಎಂದು ಅವರು ಹೇಳಿದರು.


ಪ್ರಜಾವಾಣಿ
ಜಸ್ಟ್ ಮ್ಯೂಸಿಕ್– ಹಿತಾನುಭವ

ಜೋಗತಿ ಪದ; ಹೆಣ್ತನದ ಹಂಬಲ!
ಗಂಡಾಗಿ ಹುಟ್ಟಿ ಹೆಣ್ಣಿನ ಭಾವನೆಗಳ ಜೊತೆ ಬದುಕುವವರ ಹೆಣ್ತನದ ಹಂಬಲದ ಕತೆ ಇದು. ಜೋಗತಿಯರ ಒಡನಾಟದಲ್ಲಿ ಜನಪದ ಗಾಯಕಿ ಶಿಲ್ಪಾ ಮುಡಬಿ ಕಂಡ ಹಿತಾನುಭವ ಇಲ್ಲಿದೆ.
https://bit.ly/3vxGX3m

ಪ್ರಜಾವಾಣಿ
ಕನ್ನಡ ಧ್ವನಿ
‘ಕನ್ನಡ ಧ್ವನಿ’ ಪಾಡ್‌ಕಾಸ್ಟ್ ಚಾನೆಲ್‌ನ
ಪ್ರತಿ ಶನಿವಾರದ ‘ಹರಟೆ ಕಟ್ಟೆ’
ಲಾಕ್‌ಡೌನ್: ವಲಸೆಕಾರ್ಮಿಕರು ಮತ್ತು ಮರುವಲಸೆ
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ಕುಂ.ವೀರಭದ್ರಪ್ಪ
ಹಿರಿಯ ಚಿಂತಕರು

ಬಿ.ಆರ್.ಪಾಟೀಲ
ಮಾಜಿ ಉಪಸಭಾಪತಿ

ಮಧ್ಯಾಹ್ನ 4 ಗಂಟೆಗೆ
ನೀವೂ ಆಲಿಸಿರಿ,
ಸ್ನೇಹಿತರಿಗೂ ಕೇಳಿಸಿರಿ
https://www.prajavani.net/podcast


### ಸಂಕ್ಷಿಪ್ತ ಸುದ್ದಿ

## ಅಂತರರಾಷ್ಟ್ರೀಯ ವಿಮಾನ ಸಂಚಾರ ಮೇ 31ರವರೆಗೆ ನಿರ್ಬಂಧ

ನವದೆಹಲಿ: ಕೊರೊನಾ ಸೋಂಕು ವ್ಯಾಪಿಸುವುದನ್ನು ನಿಯಂತ್ರಿಸಲು ಅಂತರರಾಷ್ಟ್ರೀಯ ವಿಮಾನಗಳ ಹಾರಾಟದ ಮೇಲೆ ವಿಧಿಸಿರುವ ನಿರ್ಬಂಧವನ್ನು ಮೇ 31ರವರೆಗೂ ವಿಸ್ತರಿಸಿ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಶುಕ್ರವಾರ ಸುತ್ತೋಲೆ ಹೊರಡಿಸಿದೆ.

ಈ ನಿರ್ಬಂಧವು ಅಂತರರಾಷ್ಟ್ರೀಯ ಕಾರ್ಗೊ ವಿಮಾನಗಳ ಕಾರ್ಯಾಚರಣೆಗಳ ಮೇಲೆ ಹಾಗೂ ನಿರ್ದಿಷ್ಟವಾಗಿ ಡಿಜಿಸಿಎ ಅನುಮತಿ ನೀಡಿರುವ ವಿಮಾನಗಳ ಹಾರಾಟಕ್ಕೆ ಅನ್ವಯವಾಗುವುದಿಲ್ಲ.

## ಸ್ಯಾನಿಟೈಸ್, ಔಷಧ ಸಾಗಣೆಗೆ ಡ್ರೋನ್

ಬೆಂಗಳೂರು: ಗರುಡ ಏರೋಸ್ಪೇಸ್ ಕಂಪನಿಯು ನಗರದಲ್ಲಿ ಡ್ರೋನ್ ಯಂತ್ರಗಳ ಮೂಲಕ ತುರ್ತು ಬಳಕೆಯ ಔಷಧಿ ಸಾಗಣೆ, ಸಾರ್ವಜನಿಕ ಸ್ಥಳಗಳನ್ನು ಸ್ಯಾನಿಟೈಸ್ ಮಾಡುವ ಸೇವೆಯನ್ನು ಉಚಿತವಾಗಿ ಒದಗಿಸಲಿದೆ. ಇದಕ್ಕಾಗಿಯೇ 40 ಕೆ.ಜಿ. ಭಾರ ಸಾಗಿಸುವ ಸಾಮರ್ಥ್ಯವುಳ್ಳ ಡ್ರೋನ್‌ಗಳನ್ನು ನಿರ್ಮಿಸಿದೆ.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಶುಕ್ರವಾರ ಸಂಜೆ ಡ್ರೋನ್ ಸೇವೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಪ್ರಾತ್ಯಕ್ಷಿಕೆಯನ್ನೂ ವೀಕ್ಷಿಸಿದರು. ಉಚಿತ ಸೇವೆ ಒದಗಿಸುವುದಕ್ಕಾಗಿ ಗರುಡ ಏರೋಸ್ಪೇಸ್ ಕಂಪನಿಯು ಬಿಬಿಎಂಪಿ ಜತೆ ಒಪ್ಪಂದ ಮಾಡಿಕೊಂಡಿದೆ.

## ಕೋವಿಡ್: ವೇದಾಂತದಿಂದ ₹150 ಕೋಟಿ ನೆರವು

ಚಿತ್ರದುರ್ಗ: ‘ದೇಶದಲ್ಲಿ ಕೋವಿಡ್ ನಿರ್ವಹಣೆಗಾಗಿ ವೇದಾಂತ ಕಂಪನಿಯಿಂದ ₹ 150 ಕೋಟಿ ನೆರವು ನೀಡಲಾಗುವುದು’ ಎಂದು ಕಂಪನಿಯ ಅಧ್ಯಕ್ಷ ಅನಿಲ್ ಅಗರ್ವಾಲ್ ತಿಳಿಸಿದ್ದಾರೆ.

‘ಹಿಂದಿನ ವರ್ಷ ಕೂಡ ವೇದಾಂತ ಸಮೂಹದಿಂದ ಒಟ್ಟು ₹ 210 ಕೋಟಿ ನೀಡಲಾಗಿತ್ತು. ಪ್ರಸಕ್ತ ಬಾರಿ ರಾಷ್ಟ್ರೀಯ ಆರೋಗ್ಯ ವಿಪತ್ತು ನಿರ್ವಹಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಬೆಂಬಲಿಸಲು ಈ ತೀರ್ಮಾನ ಕೈಗೊಳ್ಳಲಾಗಿದೆ’ ಎಂದು ಹೇಳಿದ್ದಾರೆ.

# ಲಸಿಕೆ ನೀಡಿದರಷ್ಟೇ 3ನೇ ಹಂತ ಆರಂಭ

### ಹಲವು ಸರ್ಕಾರಗಳ ಅಸಹಾಯಕತೆ • ₹ 120 ಕೋಟಿ ಅನುದಾನ ಕೇಳಿದ ಮೇಘಾಲಯ ಸರ್ಕಾರ

ನವದೆಹಲಿ (ಪಿಟಿಐ): ಲಸಿಕೆ ಪೂರೈಕೆಯಾದರೆ ಮಾತ್ರ ಮೂರನೇ ಹಂತದ ಲಸಿಕೆ ಕಾರ್ಯಕ್ರಮ ಆರಂಭಿಸಲು ಸಾಧ್ಯ ಎಂದು ಹಲವು ರಾಜ್ಯ ಸರ್ಕಾರಗಳು ಹೇಳಿವೆ. ಲಸಿಕೆ ಪೂರೈಕೆಯಾದರೆ ಮುಂದಿನ ವಾರ ಲಸಿಕೆ ಕಾರ್ಯಕ್ರಮ ಆರಂಭಿಸಬಹುದು ಎಂದು ದೆಹಲಿ ಸರ್ಕಾರ ಹೇಳಿದೆ. ತಮಿಳುನಾಡು ಸರ್ಕಾರ ಸಹ ಇದನ್ನೇ ಹೇಳಿದೆ.

‘ಹಣ ನೀಡಲು ಸಿದ್ಧವಿದ್ದರೂ ಲಸಿಕೆ ಲಭ್ಯವಾಗುತ್ತಿಲ್ಲ. ಸೀರಂ ಕಂಪನಿಯಂತೂ ನಮ್ಮ ಬೇಡಿಕೆಗೆ ಪ್ರತಿಕ್ರಿಯೆಯನ್ನೂ ನೀಡುತ್ತಿಲ್ಲ’ ಎಂದು ಛತ್ತೀಸಗಡ ಸರ್ಕಾರವು ಹೇಳಿದೆ.

**‘₹ 120 ಕೋಟಿ ಅನುದಾನ ನೀಡಿ’:** ಮೂರನೇ ಹಂತದ ಲಸಿಕೆ ಕಾರ್ಯಕ್ರಮವನ್ನು ಆರಂಭಿಸಲು ಅಗತ್ಯವಿರುವಷ್ಟು ಹಣಕಾಸು ರಾಜ್ಯ ಸರ್ಕಾರದ ಬಳಿ ಇಲ್ಲ. ಹೀಗಾಗಿ ರಾಜ್ಯದಲ್ಲಿ 18ರಿಂದ 45 ವರ್ಷದವರಿಗೆ ಲಸಿಕೆ ನೀಡಲು ಕೇಂದ್ರ ಸರ್ಕಾರವು 120 ಕೋಟಿ ಅನುದಾನ ನೀಡಬೇಕು ಎಂದು ಮೇಘಾಲಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ.

‘ನಮ್ಮಲ್ಲಿ 18ರಿಂದ 45 ವರ್ಷದ 15 ಲಕ್ಷ ಜನರು ಇದ್ದಾರೆ. ಅವರಿಗೆಲ್ಲಾ ಲಸಿಕೆ ನೀಡಲು ನಮಗೆ 30 ಲಕ್ಷ ಡೋಸ್ ಲಸಿಕೆ ಅಗತ್ಯವಿದೆ. ಅಷ್ಟು ಲಸಿಕೆಯನ್ನು ಖರೀದಿಸಲು ಕೇಂದ್ರ ಸರ್ಕಾರವು ₹ 120 ಕೋಟಿ ಅನುದಾನವನ್ನು ಕೂಡಲೇ ಮಂಜೂರು ಮಾಡಬೇಕು. ಇಲ್ಲವೇ ಲಸಿಕೆಗಳನ್ನು ₹ 150ಕ್ಕೆ ಮಾರಾಟ ಮಾಡುವಂತೆ ಲಸಿಕೆ ತಯಾರಿಕೆ ಕಂಪನಿಗಳಿಗೆ ಸೂಚನೆ ನೀಡಿ’ ಎಂದು ಮೇಘಾಲಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ.

ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಮುಂಬೈನ ಲಸಿಕೆ ಕೇಂದ್ರವೊಂದರ ಎದುರು ಸರತಿಯಲ್ಲಿ ನಿಂತಿದ್ದ ಜನರು – ಪಿಟಿಐ ಚಿತ್ರ

### ಹಲವೆಡೆ ಮುಂದೂಡಿಕೆ

- ಮಹಾರಾಷ್ಟ್ರದಲ್ಲಿ ಲಸಿಕೆ ಕೊರತೆ ಇರುವ ಕಾರಣ ಮೂರನೇ ಹಂತದ ಕಾರ್ಯಕ್ರಮವನ್ನು ಮೇ 1ರಿಂದ ಆರಂಭಿಸುತ್ತಿಲ್ಲ. ಆದರೆ, ಮೊದಲ ಮತ್ತು ಎರಡನೇ ಹಂತದ ಲಸಿಕೆ ಕಾರ್ಯಕ್ರಮದ ರೂಪುರೇಷೆಯನ್ನೂ ಮೇ 1ರಿಂದ ಬದಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ದೊರೆಯಲಿದೆ. ಪ್ರತಿ ಜಿಲ್ಲೆಯಲ್ಲಿ ಒಂದು ಲಸಿಕಾ ಕೇಂದ್ರವನ್ನು ಮಾತ್ರ ನಡೆಸುತ್ತೇವೆ. ಲಸಿಕೆ ಇಲ್ಲದಿದ್ದರೂ ಜನರು ಲಸಿಕಾ ಕೇಂದ್ರಗಳತ್ತ ಬಂದು ಕಾಯುವುದು ತಪ್ಪುತ್ತದೆ ಎಂದು ಮಹಾರಾಷ್ಟ್ರ ಸರ್ಕಾರ ಹೇಳಿದೆ
- ನಮಗೆ ಅಗತ್ಯವಿರುವಷ್ಟು ಲಸಿಕೆ ಲಭ್ಯವಿಲ್ಲ. ಬೇಡಿಕೆ ಇಟ್ಟಷ್ಟು ಲಸಿಕೆ ಪೂರೈಕೆಯಾಗುತ್ತಿಲ್ಲ. ತಲಾ 25 ಲಕ್ಷ ಡೋಸ್ ನೀಡುವಂತೆ ಎರಡೂ ಕಂಪನಿಗಳಿಗೆ ಮನವಿ ಮಾಡಿದ್ದೆವು. ಸೀರಂ ಕಂಪನಿ ಇನ್ನೂ ಯಾವ ಪ್ರತಿಕ್ರಿಯೆಯನ್ನೂ ನೀಡಿಲ್ಲ. ಭಾರತ್ ಬಯೊಟೆಕ್ ಕೇವಲ 2 ಲಕ್ಷ ಡೋಸ್ ಪೂರೈಸಿದೆ. ಇದರಿಂದ ಮೂರನೇ ಹಂತದ ಲಸಿಕೆ ಕಾರ್ಯಕ್ರಮ ಆರಂಭಿಸಲು ಸಾಧ್ಯವಿಲ್ಲ ಎಂದು ಛತ್ತೀಸಗಡ ಸರ್ಕಾರ ಹೇಳಿದೆ
- ಜಮ್ಮು-ಕಾಶ್ಮೀರಕ್ಕೆ ಅಗತ್ಯವಿರುವಷ್ಟು ಲಸಿಕೆಗಳು ಪೂರೈಕೆಯಾಗಿಲ್ಲ. ಹೀಗಾಗಿ ಮೇ 1ರಿಂದ ಮೂರನೇ ಹಂತದ ಲಸಿಕೆ ಕಾರ್ಯಕ್ರಮ ಆರಂಭಿಸುವುದಿಲ್ಲ. ಲಸಿಕೆ ಕಾರ್ಯಕ್ರಮ ಯಾವಾಗ ಆರಂಭಿಸುತ್ತೇವೆ ಎಂಬುದನ್ನು ಶೀಘ್ರದಲ್ಲೇ ಘೋಷಿಸುತ್ತೇವೆ ಎಂದು ಜಮ್ಮು-ಕಾಶ್ಮೀರ ಆಡಳಿತವು ಶುಕ್ರವಾರ ಘೋಷಿಸಿದೆ

### ‘1 ಕೋಟಿ ಡೋಸ್ ಸಂಗ್ರಹ’

ಲಸಿಕೆ ಕೊರತೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳ ಬಳಿ ಈಗಾಗಲೇ 1 ಕೋಟಿ ಡೋಸ್‌ನಷ್ಟು ಲಸಿಕೆ ಸಂಗ್ರಹವಿದೆ. ಇನ್ನು ಮೂರು ದಿನದಲ್ಲಿ 20 ಲಕ್ಷ ಡೋಸ್ ಲಸಿಕೆ ಪೂರೈಕೆಯಾಗಲಿದೆ ಎಂದು ಹೇಳಿದೆ.

ಮೊದಲ ಮತ್ತು ಎರಡನೇ ಹಂತದ ಲಸಿಕೆ ಕಾರ್ಯಕ್ರಮದಲ್ಲಿ ಬಳಸಲು ಕೇಂದ್ರ ಸರ್ಕಾರವು ಉಚಿತವಾಗಿ ನೀಡಿದ್ದ ಡೋಸ್‌ಗಳಲ್ಲಿ, ರಾಜ್ಯ ಸರ್ಕಾರಗಳ ಬಳಿ ಇರುವ ಡೋಸ್‌ಗಳ ಮಾಹಿತಿಯನ್ನು ಕೇಂದ್ರ ಆರೋಗ್ಯ ಸಚಿವಾಲಯ ನೀಡಿದೆ. ಆದರೆ, ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ ಈ ಲಸಿಕೆಯ ಡೋಸ್‌ಗಳನ್ನು ಮೂರನೇ ಹಂತದ ಲಸಿಕೆ ಕಾರ್ಯಕ್ರಮದಲ್ಲಿ ಬಳಸುವ ಹಾಗಿಲ್ಲ.

ಮೂರನೇ ಹಂತದ ಲಸಿಕೆ ಕಾರ್ಯಕ್ರಮಕ್ಕೆ ಅಗತ್ಯವಿರುವ ಲಸಿಕೆಗಳನ್ನು ರಾಜ್ಯ ಸರ್ಕಾರಗಳು ಕಂಪನಿಗಳಿಂದ ನೇರವಾಗಿ ಖರೀದಿಸಬೇಕು. ಈ ಖರೀದಿಯಲ್ಲಿ ಕೇಂದ್ರ ಸರ್ಕಾರವು ಯಾವುದೇ ರೀತಿಯ ಮಧ್ಯಸ್ಥಿಕೆ ಅಥವಾ ಮೇಲ್ವಿಚಾರಣೆ ನಡೆಸುವುದಿಲ್ಲ. ಹೀಗಾಗಿ ಮೂರನೇ ಹಂತದ ಕಾರ್ಯಕ್ರಮಕ್ಕೆ ಅಗತ್ಯವಿರುವ ಲಸಿಕೆಗಳು ರಾಜ್ಯ ಸರ್ಕಾರಗಳಿಗೆ ಯಾವಾಗ ಪೂರೈಕೆಯಾಗುತ್ತದೆ ಎಂಬುದರ ಮಾಹಿತಿ ಇಲ್ಲ.

### ಸರ್ಕಾರದ ಕ್ರಮವನ್ನು ಟೀಕಿಸಿರುವ ದೆಹಲಿ ಹೈಕೋರ್ಟ್

# ಕೋವಿಡ್ ನಿರ್ವಹಣೆಯಲ್ಲಿ ವಿಫಲ

ನವದೆಹಲಿ (ಪಿಟಿಐ): ಕೋವಿಡ್ ನಿರ್ವಹಣೆಯ ವಿಚಾರದಲ್ಲಿ ದೆಹಲಿ ಸರ್ಕಾರದ ಕ್ರಮವನ್ನು ಟೀಕಿಸಿರುವ ದೆಹಲಿ ಹೈಕೋರ್ಟ್, ‘ಸಮಸ್ಯೆ ಎಂದರೆ ನಮ್ಮಲ್ಲಿ ವೈದ್ಯರು, ನರ್ಸ್‌ಗಳು ಹಾಗೂ ಇತರ ಸಿಬ್ಬಂದಿಯಾಗಲಿ, ಆಮ್ಲಜನಕ ಅಥವಾ ಔಷಧವಾಗಲಿ ಇಲ್ಲ. ರಾಜ್ಯವು ಸಂಪೂರ್ಣವಾಗಿ ವಿಫಲವಾಗಿರುವುದರ ಸಂಕೇತ ಇದು’ ಎಂದಿದೆ.

ಕೋವಿಡ್‌ನಿಂದ ಬಳಲುತ್ತಿರುವ ವಕೀಲರಿಗೆ ಪ್ರತ್ಯೇಕವಾದ ಚಿಕಿತ್ಸಾ ವ್ಯವಸ್ಥೆ ಮಾಡುವಂತೆ ನಿರ್ದೇಶನ ನೀಡಬೇಕು ಎಂದು ದೆಹಲಿಯ ವಕೀಲರ ಸಂಘದ ಅಧ್ಯಕ್ಷ ರಮೇಶ್ ಗುಪ್ತಾ ಸೇರಿದಂತೆ ಇತರ ಕೆಲವು ವಕೀಲರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿಪಿನ್ ಸಂಘಿ ಹಾಗೂ

ರೇಖಾ ಪಲ್ಲಿ ಅವರನ್ನೊಳಗೊಂಡ ಪೀಠವು ಶುಕ್ರವಾರ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸೋಂಕಿತ ವಕೀಲರ ಸ್ಥಿತಿಯನ್ನು ವಿವರಿಸುತ್ತಾ, ವಿಚಾರಣೆಯ ಸಂದರ್ಭದಲ್ಲಿ ಕಣ್ಣೀರಿಟ್ಟ ಗುಪ್ತಾ ಅವರು, ‘ಈ ವಕೀಲರಿಗೆ ಸರಿಯಾದ ಚಿಕಿತ್ಸೆ ಲಭಿಸುತ್ತಿಲ್ಲ. ದಯವಿಟ್ಟು ಅವರ ನೆರವಿಗೆ ಬರಬೇಕು’ ಎಂದು ಮನವಿ ಮಾಡಿದರು.

‘ವಕೀಲರಿಗೆ ಚಿಕಿತ್ಸೆ ನೀಡಲು ಖಾಸಗಿ ಆಸ್ಪತ್ರೆಗಳು ಒಪ್ಪಿವೆ. ಆದರೆ, ಆಮ್ಲಜನಕದ ವ್ಯವಸ್ಥೆ ಇರುವ ಹಾಸಿಗೆ ಒದಗಿಸಬಹುದೇ ವಿನಾ ಐಸಿಯು ಒದಗಿಸಲು ಸಾಧ್ಯವಿಲ್ಲ ಎಂದಿವೆ. ವಕೀಲರಿಗೆ ಆರ್ಥಿಕ ನೆರವು ಬೇಕಿಲ್ಲ. ಸರ್ಕಾರವನ್ನಾಗಲಿ, ವ್ಯವಸ್ಥೆಯನ್ನಾಗಲಿ ಟೀಕಿಸಲು ನಾವು ಬಯಸುವುದಿಲ್ಲ. ನಮ್ಮಲ್ಲಿ ನಾಲ್ಕೈದು ಕೋಟಿ ರೂಪಾಯಿಯಷ್ಟು ನಿಧಿ ಇದೆ. ಸಾಲದಿದ್ದರೆ ವಕೀಲ ಮಿತ್ರರಿಂದ ಇನ್ನಷ್ಟು ಹಣವನ್ನು ಸಂಗ್ರಹಿಸುತ್ತೇವೆ. ತುರ್ತು ಸಂದರ್ಭಗಳಲ್ಲಿ ಸರಿಯಾದ ಚಿಕಿತ್ಸೆ ಲಭಿಸಬೇಕು ಎಂದಷ್ಟೇ ನಾವು ಬಯಸುತ್ತೇವೆ’ ಎಂದು ಗುಪ್ತಾ ಹೇಳಿದರು.

ದ್ವಾರಕಾದಲ್ಲಿ ಇಂದಿರಾಗಾಂಧಿ ಅವರ ಹೆಸರಿನಲ್ಲಿ ನಿರ್ಮಿಸಲಾಗುತ್ತಿರುವ ಆಸ್ಪತ್ರೆಯ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದೆ. ಅದರಲ್ಲಿ ವಕೀಲರಿಗಾಗಿ 100 ಆಮ್ಲಜನಕ ವ್ಯವಸ್ಥೆ ಇರುವ ಹಾಸಿಗೆಗಳ ವ್ಯವಸ್ಥೆ ಮಾಡಿಸಲು ಸೂಚನೆ ನೀಡಬೇಕು ಎಂದು ಅವರು ನ್ಯಾಯಾಲಯವನ್ನು ವಿನಂತಿಸಿದರು.

‘ನಿಮ್ಮ ನೋವು ನಮಗೆ ಅರ್ಥವಾಗುತ್ತದೆ. ನಾವೂ ಅದೇ ಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಕೋವಿಡ್‌ನ ಈ ಅಲೆಯು ಎಷ್ಟು ಅಪಾಯಕಾರಿಯಾಗಿದೆ ಎಂದರೆ, ಈ ಮಟ್ಟದಲ್ಲಿ ಅದು ಅಪ್ಪಳಿಸಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಇಲ್ಲಿ ಹಣಕಾಸಿನ ಸಮಸ್ಯೆ ಇಲ್ಲ. ಸೌಲಭ್ಯಗಳದ್ದೇ ಸಮಸ್ಯೆ. ಈ ವಿಚಾರದಲ್ಲಿ ರಾಜ್ಯವು ವಿಫಲವಾಗಿದೆ’ ಎಂದು ಪೀಠ ಹೇಳಿದೆ.

## ಕೋವಿಡ್: ಮದುವೆ ಮರುದಿನವೇ ವರ ಸಾವು

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ಬಳ್ಳಾರಿ ಜಿಲ್ಲೆ): ಪಟ್ಟಣದ ವಿಜಯನಗರ ಬಡಾವಣೆ ನಿವಾಸಿ, ಗುರುವಾರ ಹಸೆಮಣೆ ಏರಿದ್ದ ನವ ವಿವಾಹಿತ ಬಸವರಾಜ ಭಜಂತ್ರಿ (36) ಕೋವಿಡ್ ನಿಂದ ಶುಕ್ರವಾರ ಮೃತಪಟ್ಟಿದ್ದಾರೆ.

ಪಟ್ಟಣದ ಶಾದಿ ಮಹಲ್ ನಲ್ಲಿ ಅವರ ವಿವಾಹ ಜರುಗಿತ್ತು. ಮದುವೆ ಕಾರ್ಯದ ಬಳಿಕ ಅಸ್ವಸ್ಥಗೊಂಡು ವಿಶ್ರಾಂತಿಯಲ್ಲಿದ್ದ ಅವರಿಗೆ ಉಸಿರಾಟ ಸಮಸ್ಯೆ ಕಾಣಿಸಿಕೊಂಡು ಆರೋಗ್ಯದಲ್ಲಿ ಏರುಪೇರಾಗಿದೆ. ಚಿಕಿತ್ಸೆಗಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಅವರು ಮೃತಪಟ್ಟಿದ್ದರು. ಮೃತದೇಹದ ಗಂಟಲುದ್ರವ ತಪಾಸಣೆ ನಡೆಸಿದಾಗ ಕೋವಿಡ್ ತಗುಲಿದ್ದು ದೃಢಪಟ್ಟಿದೆ.

## ಕೋವಿಡ್ ಪತ್ತೆಗೆ ‘ವಾಸನೆ ಪರೀಕ್ಷಾ ವಿಧಾನ’

ನವದೆಹಲಿ (ಪಿಟಿಐ): ವಾಸನೆ ಗುರುತಿಸಲಾಗದ ಸ್ಥಿತಿಗೆ ಕಾರಣವಾಗುವ ಕೋವಿಡ್–19ರಂತಹ ವಿವಿಧ ರೋಗಗಳನ್ನು ತ್ವರಿತವಾಗಿ ಪತ್ತೆ ಮಾಡಲು, ಮಾತ್ರೆ (ಕ್ಯಾಪ್ಸೂಲ್) ಆಧಾರಿತ ಹೊಸ ಪರೀಕ್ಷಾ ವಿಧಾನವು ಪರಿಣಾಮಕಾರಿಯಾಗಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಪಾರ್ಕಿನ್ಸನ್ಸ್ ಕಾಯಿಲೆ ಇರುವವರಲ್ಲಿ ಸುಲಭವಾಗಿ ಬಳಸಬಹುದಾದ ಈ ವಿಧಾನವು ಕೋವಿಡ್ ಪತ್ತೆಗೂ ಸಹಾಯಕವಾಗಬಹುದು ಎಂದು ರಾಯಲ್ ಸೊಸೈಟಿ ಇಂಟರ್‌ಫೇಸ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಲೇಖನದಲ್ಲಿ ಹೇಳಲಾಗಿದೆ.

ಪಾರ್ಕಿನ್ಸನ್ಸ್, ಅಲ್ಜೈಮರ್ಸ್ ಮುಂತಾಗಿ ನರಗಳಿಗೆ ಸಂಬಂಧಿಸಿದ ಕೆಲವು ರೋಗಗಳನ್ನು ಪತ್ತೆ ಮಾಡಲು ಈ ವಿಧಾನವು ಸಹಕಾರಿಯಾಗಬಲ್ಲದು. ಆದರೆ ದುಬಾರಿ ಮತ್ತು ಪರೀಕ್ಷೆಗೆ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ ಎಂಬ ಕಾರಣಕ್ಕೆ ಇದನ್ನು ವ್ಯಾಪಕವಾಗಿ ಬಳಸಲಾಗುತ್ತಿಲ್ಲ ಎಂದು ಲಂಡನ್‌ನ ಕ್ವೀನ್ ಮೇರಿ ವಿ.ವಿ. ಸಂಶೋಧಕರು ಹೇಳಿದ್ದಾರೆ.

ಈ ಸಮಸ್ಯೆಯನ್ನು ಬಗೆಹರಿಸಲು ಸಂಶೋಧಕರ ತಂಡವು ಹೊಸ ‘ವಾಸನೆ ಪರೀಕ್ಷಾ ಕಿಟ್’ ಒಂದನ್ನು ಅಭಿವೃದ್ಧಿಪಡಿಸಿದೆ. ಟೇಪ್ ಒಂದರ ಎರಡು ಸ್ಟ್ರಿಪ್‌ಗಳಲ್ಲಿ ಪರಿಮಳಯುಕ್ತ ಎಣ್ಣೆಯನ್ನು ಹೊಂದಿರುವ ಎರಡು ಕ್ಯಾಪ್ಸೂಲ್‌ಗಳನ್ನು ಬಳಸುವ ಮೂಲಕ ಈ ಪರೀಕ್ಷೆ ನಡೆಸಲಾಗುತ್ತದೆ. ಈ ಸ್ಟ್ರಿಪ್ ಮತ್ತು ಬೆರಳಿನ ಮಧ್ಯೆ ಕ್ಯಾಪ್ಸೂಲನ್ನಿಟ್ಟು ಪುಡಿ ಮಾಡಲಾಗುವುದು. ಈ ಸಂದರ್ಭದಲ್ಲಿ ಕ್ಯಾಪ್ಸೂಲ್ ಒಳಗಿದ್ದ ಪರಿಮಳಯುಕ್ತ ಎಣ್ಣೆ ಹೊರಗೆ ಬರುತ್ತದೆ. ವ್ಯಕ್ತಿಯು ಈ ಪರಿಮಳವನ್ನು ಗ್ರಹಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ಅಂಕಗಳನ್ನು ನೀಡಲಾಗುವುದು. ಒಂದುವೇಳೆ ವ್ಯಕ್ತಿಯು ವಾಸನೆ ಗ್ರಹಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದರೆ, ಫಲಿತಾಂಶದ ವಿವರವನ್ನು ವೈದ್ಯರಿಗೆ ಕಳುಹಿಸಬಹುದು.

ಕೋವಿಡ್ ಪರೀಕ್ಷೆಗೆ ಪ್ರಸಕ್ತ ಅನುಸರಿಸಲಾಗುತ್ತಿರುವ ಗಂಟಲು, ಮೂಗುದ್ರವ ಪರೀಕ್ಷಾ ವಿಧಾನಕ್ಕಿಂತ ಇದು ಸುಲಭವಾಗಿದೆ. ಮೂಗು ಹಾಗೂ ಗಂಟಲದ್ರವ ತೆಗೆಯುವ ವೇಳೆ ಮಕ್ಕಳು ಒತ್ತಡಕ್ಕೆ ಒಳಗಾಗುತ್ತಾರೆ. ಇಂಥವರ ಪರೀಕ್ಷೆಗೆ ಕ್ಯಾಪ್ಸೂಲ್ ವಿಧಾನವನ್ನು ಅನುಸರಿಸಬಹುದು. ಅದೂ ಅಲ್ಲದೆ ಮನೆಯಲ್ಲೇ ಇದ್ದುಕೊಂಡು, ಹೆಚ್ಚು ವೆಚ್ಚವಿಲ್ಲದೇ ಪರೀಕ್ಷೆಯನ್ನು ನಡೆಸಬಹುದು ಎಂದು ಸಂಶೋಧಕರು ಹೇಳಿದ್ದಾರೆ.

### ನಿಧನ ವಾರ್ತೆ

## ಮಾಜಿ ಅಟಾರ್ನಿ ಜನರಲ್ ಸೋಲಿ ಸೊರಾಬ್ಜಿ



ನವದೆಹಲಿ (ಪಿಟಿಐ): ಕೋವಿಡ್‌ನಿಂದಾಗಿ ಮಾಜಿ ಅಟಾರ್ನಿ ಜನರಲ್ ಮತ್ತು ಖ್ಯಾತ ಕಾನೂನು ತಜ್ಞ ಸೋಲಿ ಸೊರಾಬ್ಜಿ (91) ಶುಕ್ರವಾರ ನಿಧನರಾಗಿದ್ದಾರೆ.

ಮೃತರಿಗೆ ಪತ್ನಿ ಮತ್ತು ಪುತ್ರಿ, ಇಬ್ಬರು ಪುತ್ರರಿದ್ದಾರೆ.

ಕೋವಿಡ್ ದೃಢಪಟ್ಟ ನಂತರ ಅವರನ್ನು ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು. ಸೋಲಿ ಸೊರಾಬ್ಜಿ ಅವರ ಪತ್ನಿಗೂ ಸೋಂಕು ತಗುಲಿತ್ತು. ಅವರು ಚೇತರಿಸಿಕೊಳ್ಳುತ್ತಿದ್ದಾರೆ.

1930ರ ಮಾ. 9ರಂದು ಮುಂಬೈನ ಪಾರ್ಸಿ ಕುಟುಂಬದಲ್ಲಿ ಜನಿಸಿದ ಸೋಲಿ ಜಹಾಂಗೀರ್ ಸೊರಾಬ್ಜಿ ಅವರು, 1953ರಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ವಕೀಲಿ ವೃತ್ತಿ ಆರಂಭಿಸಿದರು. 1971ರಲ್ಲಿ ಹಿರಿಯ ವಕೀಲರಾಗಿ ನೇಮಕಗೊಂಡರು.

ಜನತಾ ಪಕ್ಷದ ಆಡಳಿತದ ಅವಧಿಯಲ್ಲಿ 1977ರಿಂದ 1980ರವರೆಗೆ ಸಾಲಿಸಿಟರಲ್ ಜನರಲ್ ಆಗಿ ಕಾರ್ಯನಿರ್ವಹಿಸಿದರು. ನಂತರ, 1989–90 ಮತ್ತು 1998–2004ರಲ್ಲಿ ಅಟಾರ್ನಿ ಜನರಲ್ ಆಗಿ ಕಾರ್ಯನಿರ್ವಹಿಸಿದರು.

ಸೋಲಿ ಸೊರಾಬ್ಜಿ ಅವರು ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದರು. ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದಕರಾಗಿದ್ದ ಅವರು, ಮಾನವ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಹೋರಾಟ ನಡೆಸಿದ್ದರು.

‘ಸಂವಿಧಾನದ ಮೂಲ ರಚನೆಯನ್ನು ಸಂಸತ್ತು ಬದಲಾಯಿಸಲು ಸಾಧ್ಯವಿಲ್ಲ’ ಎಂಬ ಐತಿಹಾಸಿಕ ತೀರ್ಪು ಪ್ರಕಟವಾಗಲು ಕಾರಣವಾದ ಕೇಶವಾನಂದ ಭಾರತಿ ಪ್ರಕರಣ ಹಾಗೂ ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲು ಉಲ್ಲೇಖಿಸುವ ಎಸ್. ಆರ್. ಬೊಮ್ಮಾಯಿ ಪ್ರಕರಣದಂಥ ಐತಿಹಾಸಿಕ ಹಾಗೂ ಹಲವು ಪ್ರಮುಖ ಪ್ರಕರಣಗಳಲ್ಲಿ ಸೋಲಿ ಸೊರಾಬ್ಜಿ ಮಾಡಿದ್ದ ವಾದಕ್ಕೆ ಮನ್ನಣೆ ದೊರಕಿತ್ತು.

## ಛಾಯಾಗ್ರಾಹಕ ಕೆ.ವಿ.ಆನಂದ್



ಚೆನ್ನೈ (ಪಿಟಿಐ): ತಮಿಳು ಚಿತ್ರರಂಗದ ರಾಷ್ಟ್ರಪ್ರಶಸ್ತಿ ಪುರಸ್ಕೃತ ಖ್ಯಾತ ಛಾಯಾಗ್ರಾಹಕ ಮತ್ತು ಸಿನಿಮಾ ನಿರ್ದೇಶಕ ಕೆ.ವಿ. ಆನಂದ್ (54) ಶುಕ್ರವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫೋಟೊ ಜರ್ನಲಿಸ್ಟ್ ಆಗಿದ್ದ ಆನಂದ್, 1994ರಲ್ಲಿ ಮಲಯಾಳಂ ಚಲನಚಿತ್ರ 'ತೇನ್ವಿನ್ ಕೊಂಬತ್' ಮೂಲಕ ಸಿನಿಮಾ ಛಾಯಾಗ್ರಹಕರಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದರು.

## ಬಿಹಾರ ಸಿ.ಎಸ್ ಅರುಣ್ ಕುಮಾರ್

ಪಟ್ನಾ: ಕೋವಿಡ್–19 ಸೋಂಕಿಗೆ ಒಳಗಾಗಿದ್ದ ಬಿಹಾರ ಸರ್ಕಾರದ ಮುಖ್ಯ ಕಾರ್ಯದರ್ಶಿ ಅರುಣ್ ಕುಮಾರ್ ಸಿಂಗ್ ಅವರು ಶುಕ್ರವಾರ ನಿಧನರಾಗಿದ್ದಾರೆ.

1985ನೇ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿದ್ದ ಅರುಣ್ ಕುಮಾರ್ ಸಿಂಗ್ ಅವರು, ಇದೇ ವರ್ಷದ ಫೆಬ್ರುವರಿ 28ರಂದು ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು. ಇದಕ್ಕೂ ಮೊದಲು ರಾಜ್ಯದಲ್ಲಿ ಅಭಿವೃದ್ಧಿ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದರು.

### ಕೋವಿಡ್: ಕೇಂದ್ರ ಸಚಿವರಿಗೆ ಪ್ರಧಾನಿ ನರೇಂದ್ರ ಮೋದಿ ಸೂಚನೆ

# ‘ಜನರೊಂದಿಗಿದ್ದು, ಸಹಾಯ ಮಾಡಿ’

ನವದೆಹಲಿ (ಪಿಟಿಐ): ‘ಕೋವಿಡ್–19 ಬಿಕ್ಕಟ್ಟಿನ ಮಧ್ಯೆ ಆಯಾ ಪ್ರದೇಶದ ಜನರೊಂದಿಗೆ ಸಂಪರ್ಕದಲ್ಲಿದ್ದು, ಅವರಿಗೆ ಸಹಾಯ ಮಾಡಬೇಕು ಮತ್ತು ಪರಿಸ್ಥಿತಿಯ ಕುರಿತು ಜನರಿಂದ ಪ್ರತಿಕ್ರಿಯೆ ಪಡೆಯಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಕೇಂದ್ರ ಸಚಿವರಿಗೆ ಸೂಚನೆ ನೀಡಿದ್ದಾರೆ.

ಕೋವಿಡ್–19 ಎರಡನೇ ಅಲೆಯಿಂದ ಉಂಟಾಗಿರುವ ಪರಿಸ್ಥಿತಿಯ ಕುರಿತು ಚರ್ಚಿಸಲು ನಡೆದ ಕೇಂದ್ರ ಮಂತ್ರಿ ಪರಿಷತ್‌ನ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,‘ ಈ ಸಾಂಕ್ರಾಮಿಕ ರೋಗವು, ಶತಮಾನದಲ್ಲಿ ಒಮ್ಮೆ ಬರುವ ಬಿಕ್ಕಟ್ಟಾಗಿದ್ದು, ಜಾಗತಿಕ ಮಟ್ಟದಲ್ಲಿ ದೊಡ್ಡ ಸವಾಲಾಗಿ ಪರಿಣಮಿಸಿದೆ. ಕೇಂದ್ರ ಸಚಿವರು ಸ್ಥಳೀಯ ಮಟ್ಟದಲ್ಲಿ ಜನರೊಂದಿಗೆ ಸಂಪರ್ಕದಲ್ಲಿದ್ದು, ಸಮಸ್ಯೆಗಳನ್ನು ಗುರುತಿಸಿ ಸಹಾಯ ಮಾಡಬೇಕು. ಅವರಿಂದ ಪ್ರತಿಕ್ರಿಯೆ

ನವದೆಹಲಿಯಲ್ಲಿ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ಕುರಿತು ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದರು –ಪಿಟಿಐ ಚಿತ್ರ

ಪಡೆಯಬೇಕು. ಅಲ್ಲದೇ, ಈ ಸಮಸ್ಯೆಗಳು ತ್ವರಿತವಾಗಿ ಪರಿಹಾರವಾಗಿವೆಯೇ ಎಂಬುದನ್ನೂ ಖಚಿತ ಪಡಿಸಿಕೊಳ್ಳಬೇಕು’ ಎಂದು ಒತ್ತಿ ಹೇಳಿದರು.

ಕೋವಿಡ್ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆ, ಆಮ್ಲಜನಕದ ಸೌಲಭ್ಯ ಹೆಚ್ಚಳ ಮತ್ತು ಅಗತ್ಯ ಔಷಧಿಗಳ ಲಭ್ಯತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಕೈಗೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಪ್ರಧಾನಿ ಅವರಿಗೆ ಮಾಹಿತಿ ನೀಡಲಾಯಿತು.

ಬಡವರಿಗೆ ಉಚಿತ ಆಹಾರ ಧಾನ್ಯಗಳನ್ನು ವಿತರಿಸುವುದು, ಜನ್‌ಧನ್ ಖಾತೆದಾರರಿಗೆ ಆರ್ಥಿಕ ನೆರವು ನೀಡುವ ಕುರಿತೂ ಸಭೆಯಲ್ಲಿ ಚರ್ಚಿಸಲಾಯಿತು.

‘ದೇಶದಲ್ಲಿ ಇದುವರೆಗೆ 15 ಕೋಟಿ ಜನರಿಗೆ ಕೋವಿಡ್ ನಿರೋಧಕ ಲಸಿಕೆಯನ್ನು ನೀಡಲಾಗಿದೆ. ಭಾರತವು ಎರಡು ರೀತಿಯ ಕೋವಿಡ್ ಲಸಿಕೆಗಳನ್ನು ಉತ್ಪಾದಿಸಲು ಸಶಕ್ತವಾಗಿದೆ. ಕೋವಿಡ್ ಅನ್ನು ಹಿಮ್ಮೆಟ್ಟಿಸುವ ಬೃಹತ್ ಕಾರ್ಯಕ್ಕೆ ಸಾರ್ವಜನಿಕ ಸಹಭಾಗಿತ್ವವು ಮುಖ್ಯ ಅಂಶವಾಗಿದೆ. ಏರುಗತಿಯಲ್ಲಿರುವ ಕೋವಿಡ್ ಅನ್ನು ಭಾರತ ಯಶಸ್ವಿಯಾಗಿ ಹಿಮ್ಮೆಟ್ಟಿಸಲಿದೆ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲಾ ಕೇಂದ್ರ ಸಚಿವರು ವಿಶ್ವಾಸ ವ್ಯಕ್ತಪಡಿಸಿದರು’ ಎಂದು ಪ್ರಧಾನಿ ಕಚೇರಿಯ ಪ್ರಕಟಣೆ ತಿಳಿಸಿದೆ.

### ‘ಸ್ವಯಂ ಸೇವಕರನ್ನು ನಿಯೋಜಿಸಿ’

‘ಆರೋಗ್ಯ ವಲಯದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ನಾಗರಿಕ ಸಮಾಜದಲ್ಲಿ ಸ್ವಯಂ ಸೇವಕರನ್ನು ನಿಯೋಜಿಸುವ ಸಾಧ್ಯತೆಗಳನ್ನು ಅಧಿಕಾರಿಗಳು ಬಳಸಿಕೊಳ್ಳಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವಿವಿಧ ಸಂಘಟನೆಗಳು ಮತ್ತು ಸಂಸ್ಥೆಗಳ ಜತೆ ನಡೆದ ವಿಡಿಯೊ ಕಾನ್ಫರೆನ್ಸ್ ಸಭೆಯಲ್ಲಿ ಪ್ರಧಾನಿ ಈ ಸೂಚನೆ ನೀಡಿದ್ದಾರೆ.

## ‘ವಿದ್ಯುತ್ ಕಡಿತದಿಂದ ಆಕ್ಸಿಜನ್ ಪೂರೈಕೆ ಸ್ಥಗಿತ: ರೋಗಿ ಸಾವು’

ಯಾದಗಿರಿ: ಎರಡು ಗಂಟೆಗಳ ಕಾಲ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದರಿಂದ ಇಲ್ಲಿಯ ಸರ್ಕಾರಿ ಕೋವಿಡ್ ಆಸ್ಪತ್ರೆಯಲ್ಲಿ ಆಕ್ಸಿಜನ್ ಪೂರೈಕೆ ಸ್ಥಗಿತಗೊಂಡು ಶಿಕ್ಷಕರೊಬ್ಬರು ಶುಕ್ರವಾರ ಬೆಳಗಿನ ಜಾವ ಸಾವನ್ನಪ್ಪಿದ್ದಾರೆ ಎಂದು ಸಂಬಂಧಿಕರು ದೂರಿದ್ದಾರೆ.

ತಾಲ್ಲೂಕಿನ ನಾಗರಬಂಡಿ ಗ್ರಾಮದ 30 ವರ್ಷದ ಶಿಕ್ಷಕರನ್ನು 3 ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ಹೊಸ ಜಿಲ್ಲಾ ಆಸ್ಪತ್ರೆಯ ನೋಡಲ್ ಅಧಿಕಾರಿಗೆ ನೋಟಿಸ್ ನೀಡಲಾಗಿದೆ. ಜಿಲ್ಲಾ ಶಸ್ತ್ರ ಚಿಕಿತ್ಸಕರ ಅಧ್ಯಕ್ಷತೆಯ ಸಮಿತಿ ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದು ಜಿಲ್ಲಾಧಿಕಾರಿ ಡಾ.ರಾಗಪ್ರಿಯಾ ತಿಳಿಸಿದ್ದಾರೆ. ‘ಆಕ್ಸಿಜನ್ ಕೊರತೆಯಿಂದ ಶಿಕ್ಷಕ ಸಾವನ್ನಪ್ಪಿಲ್ಲ. ವಿದ್ಯುತ್ ಇಲ್ಲದಿದ್ದರೂ ಆಕ್ಸಿಜನ್ ಪೂರೈಕೆಗೆ ಸಮಸ್ಯೆ ಇಲ್ಲ. ವಿದ್ಯುತ್ ಸ್ಥಗಿತಕ್ಕೂ ಮುನ್ನವೇ ಯುವಕ ಸಾವನ್ನಪ್ಪಿದ್ದಾರೆ’ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎಸ್.ಬಿ. ಹಿರೇಮಠ ಪ್ರತಿಕ್ರಿಯಿಸಿದರು.

### ಬೌಲಿಂಗ್‌ನಲ್ಲಿ ಮಿಂಚಿದ ಹರ್‌ಪ್ರೀತ್ ಬ್ರಾರ್, ರವಿ ಬಿಷ್ಣೋಯಿ; ಗೇಲ್ ಅಬ್ಬರ; ಎಬಿಡಿ ವೈಫಲ್ಯ

# ರಾಹುಲ್ ಆಟಕ್ಕೆ ಶರಣಾದ ವಿರಾಟ್ ಪಡೆ

ಅಹಮದಾಬಾದ್ (ಪಿಟಿಐ): ಶಾಂತಚಿತ್ತದ ಬ್ಯಾಟಿಂಗ್ ಮತ್ತು ನಾಯಕತ್ವದ ಮೂಲಕ ಕನ್ನಡಿಗ ಕೆ.ಎಲ್. ರಾಹುಲ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಆಘಾತ ನೀಡಿದರು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಹುಲ್ (ಔಟಾಗದೆ 91; 57ಎಸೆತ, 7ಬೌಂಡರಿ, 5ಸಿಕ್ಸರ್) ಮತ್ತು ಹರ್‌ಪ್ರೀತ್ ಬ್ರಾರ್ (ಔಟಾಗದೆ 25 ಹಾಗೂ 19ಕ್ಕೆ3) ಆಲ್‌ರೌಂಡ್ ಆಟದ ಬಲದಿಂದ ಪಂಜಾಬ್ ಕಿಂಗ್ಸ್ ತಂಡವು 34 ರನ್‌ಗಳಿಂದ ಜಯಿಸಿತು. ಟೂರ್ನಿಯಲ್ಲಿ ಏಳನೇ ಪಂದ್ಯ ಆಡಿದ ತಂಡವು ಮೂರನೆಯ ಜಯ ಸಾಧಿಸಿತು.

ವಿರಾಟ್ ಕೊಹ್ಲಿ ಬಳಗವು ಎರಡನೇ ಸೋಲು ಅನುಭವಿಸಿತು. ಒಟ್ಟು ಹತ್ತು ಅಂಕಗಳನ್ನು ಗಳಿಸಿ ಮೊದಲ ಸ್ಥಾನಕ್ಕೆ ಪೈಪೋಟಿ ನಡೆಸುತ್ತಿರುವ ಬೆಂಗಳೂರು ತಂಡವು ಪಂಜಾಬ್ ಎದುರು ಬೌಲಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಸಾಧಾರಣವಾದ ಆಟವಾಡಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಬೆಂಗಳೂರು ತಂಡದ ಬೌಲರ್‌ಗಳು ರಾಹುಲ್ ಬ್ಯಾಟಿಂಗ್ ನಿಯಂತ್ರಿಸುವಲ್ಲಿ ಯಶಸ್ವಿಯಾಗಲಿಲ್ಲ. ಅದರಿಂದಾಗಿ ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 179 ರನ್ ಗಳಿಸಿತು. ಕ್ರಿಸ್ ಗೇಲ್ (46; 24ಎ, 6ಬೌಂ, 2ಸಿ) ಮಿಂಚಿನ ಬ್ಯಾಟಿಂಗ್ ಗಮನ ಸೆಳೆಯಿತು. ಅವರು ಕೈಲ್ ಜೆಮಿಸನ್ ಹಾಕಿದ ಒಂದು ಓವರ್‌ನಲ್ಲಿ ಐದು ಬೌಂಡರಿಗಳನ್ನು ಹೊಡೆದರು.

ಗೇಲ್ ಔಟಾದ ನಂತರ ಒಂದರ ಹಿಂದೊಂದು ವಿಕೆಟ್‌ಗಳು ಪತನಗೊಂಡವು. ಆದರೆ, ರಾಹುಲ್ ಮಾತ್ರ ದಿಟ್ಟತನದಿಂದ ಬ್ಯಾಟ್ ಬೀಸಿದರು. 14.4 ಓವರ್‌ಗಳಲ್ಲಿ 5 ವಿಕೆಟ್‌ಗೆ 118 ರನ್ ಇದ್ದ ತಂಡದ ಮೊತ್ತಕ್ಕೆ ಕೊನೆಯ ಐದು ಓವರ್‌ಗಳಲ್ಲಿ 60 ರನ್ ಸೇರಲು ಅವರ ಆಟವೇ ಕಾರಣವಾಯಿತು. ಅವರಿಗೆ ಉತ್ತಮ ಜೊತೆ ನೀಡಿದ ಹರ್‌ಪ್ರೀತ್ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಲು ಕಾರಣರಾದರು.

ಅದೇ ಬ್ರಾರ್ ಉತ್ತಮ ಬೌಲಿಂಗ್‌ನಿಂದಾಗಿ ಬೆಂಗಳೂರು ಬ್ಯಾಟಿಂಗ್ ಕುಸಿಯಿತು. ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 145 ರನ್‌ಗಳನ್ನು ಗಳಿಸಲು ಮಾತ್ರ ಶಕ್ತವಾಯಿತು.

ಕೆ.ಎಲ್. ರಾಹುಲ್ ಬ್ಯಾಟಿಂಗ್ ವೈಖರಿ– ಪಿಟಿಐ ಚಿತ್ರ

ಹರ್‌ಪ್ರೀತ್ ಬ್ರಾರ್

ಬೆಂಗಳೂರು ತಂಡದ ಪ್ರಮುಖ ಬ್ಯಾಟ್ಸ್‌ಮನ್‌ಗಳಾದ ದೇವದತ್ತ ಪಡಿಕ್ಕಲ್ ಮತ್ತು ಎಬಿ ಡಿವಿಲಿಯರ್ಸ್ ಎರಡಂಕಿ ಗಳಿಸುವಲ್ಲಿಯೂ ವಿಫಲರಾದರು. ಗ್ಲೆನ್ ಮ್ಯಾಕ್ಸ್‌ವೆಲ್ ಖಾತೆಯನ್ನೇ ತೆರೆಯಲಿಲ್ಲ. ಕೊನೆಯ ಹಂತದಲ್ಲಿ ಹರ್ಷಲ್ ಪಟೇಲ್ (31; 13ಎ) ಮತ್ತು ಕೈಲ್ ಜೆಮಿಸನ್ (16; 11ಎ) ಅವರು ಮಿಂಚಿದರೂ ಪ್ರಯೋಜನವಾಗಲಿಲ್ಲ.

ನಾಯಕ ವಿರಾಟ್ ಕೊಹ್ಲಿ (35 ರನ್) ಮತ್ತು ರಜತ್ ಪಾಟೀದಾರ್ (31 ರನ್) ತಾಳ್ಮೆಯ ಆಟವೂ ವ್ಯರ್ಥವಾಯಿತು.

## ಸ್ಕೋರ್ ಕಾರ್ಡ್

**ಪಂಜಾಬ್ ಕಿಂಗ್ಸ್ 5ಕ್ಕೆ 179 (20 ಓವರ್‌ಗಳಲ್ಲಿ)**

ರಾಹುಲ್ ಔಟಾಗದೆ 91 (57ಎ, 4X7, 6X5)
ಪ್ರಭಸಿಮ್ರನ್ ಸಿ ಕೊಹ್ಲಿ ಬಿ ಜೆಮೀಸನ್ 7 (7ಎ, 4X1)
ಗೇಲ್ ಸಿ ಡಿವಿಲಿಯರ್ಸ್ ಬಿ ಸ್ಯಾಮ್ಸ್ 46 (24ಎ, 4X6, 6X2)
ಪೂರನ್ ಸಿ ಶಹಬಾಜ್ ಬಿ ಜೆಮೀಸನ್ 0 (3ಎ)
ಹೂಡಾ ಸಿ ಪಾಟೀದಾರ್ ಬಿ ಶಹಬಾಜ್ 5 (9ಎ)
ಶಾರೂಕ್ ಬಿ ಚಾಹಲ್ 0 (3ಎ)
ಹರ್‌ಪ್ರೀತ್ ಔಟಾಗದೆ 25 (17ಎ, 4X1, 6X2))
ಇತರೆ (ಲೆಗ್‌ಬೈ 1, ವೈಡ್ 4) 5

**ವಿಕೆಟ್ ಪತನ:** 1–19 (ಪ್ರಭಸಿಮ್ರನ್ ಸಿಂಗ್, 3.3), 2–99 (ಕ್ರಿಸ್ ಗೇಲ್, 10.4), 3–107 (ನಿಕೋಲಸ್ ಪೂರನ್, 11.3), 4–117 (ದೀಪಕ್ ಹೂಡಾ, 13.6), 5–118 (ಶಾರೂಕ್ ಖಾನ್, 14.4))

**ಬೌಲಿಂಗ್:** ಡೇನಿಯಲ್ ಸ್ಯಾಮ್ಸ್ 4–0–24–1, ಮೊಹಮ್ಮದ್ ಸಿರಾಜ್ 3–0–24–0, ಕೈಲ್ ಜೆಮಿಸನ್ 3–0–32–2, ಯಜುವೇಂದ್ರ ಚಾಹಲ್ 4–0–34–1, ಹರ್ಷಲ್ ಪಟೇಲ್ 4–0–53–0, ಶಹಬಾಜ್ ಅಹಮದ್ 2–0–11–1

**ರಾಯಲ್ ಚಾಲೆಂಜರ್ಸ್ ಬೆಂಗಳೂರು 8ಕ್ಕೆ 145 (20 ಓವರ್‌ಗಳಲ್ಲಿ)**

ದೇವದತ್ತ ಬಿ ಮರಡಿತ್ 7 (6ಎ, 6X1)
ರಜತ್ ಸಿ ಪೂರನ್ ಬಿ ಜೋರ್ಡಾನ್ 31 (30ಎ, 4X2, 6X1)
ಮ್ಯಾಕ್ಸ್‌ವೆಲ್ ಬಿ ಹರ್‌ಪ್ರೀತ್ 0 (1ಎ)
ಡಿವಿಲಿಯರ್ಸ್ ಸಿ ರಾಹುಲ್ ಬಿ ಹರ್‌ಪ್ರೀತ್ 3 (9ಎ)
ಶಹಬಾಜ್ ಸಿ ಹರ್‌ಪ್ರೀತ್ ಬಿ ಬಿಷ್ಣೋಯಿ 8 (11ಎ, 4X1)
ಸ್ಯಾಮ್ಸ್ ಬಿ ಬಿಷ್ಣೋಯಿ 3 (4ಎ)
ಜೆಮೀಸನ್ ಔಟಾಗದೆ 16 (11ಎ, 4X1, 6X1)
ಹರ್ಷಲ್ ಸಿ ಬಿಷ್ಣೋಯಿ ಬಿ ಶಮಿ 31 (13ಎ, 4X3, 6X2)
ಮೊಹಮ್ಮದ್ ಸಿರಾಜ್ ಔಟಾಗದೆ 0 (1ಎ)
ಇತರೆ (ಲೆಗ್‌ಬೈ 8, ವೈಡ್ 3) 11

**ವಿಕೆಟ್ ಪತನ:** 1–19 (ದೇವದತ್ತ ಪಡಿಕ್ಕಲ್, 2.3), 2–62 (ವಿರಾಟ್ ಕೊಹ್ಲಿ, 10.1), 3–62 (ಗ್ಲೆನ್ ಮ್ಯಾಕ್ಸ್‌ವೆಲ್, 10.2), 4–69 (ಎಬಿ ಡಿವಿಲಿಯರ್ಸ್, 12.1), 5–91 (ರಜತ್ ಪಾಟೀದಾರ್, 14.4), 6–96 (ಶಹಬಾಜ್ ಅಹಮದ್, 15.4), 7–96 (ಡೇನಿಯಲ್ ಸ್ಯಾಮ್ಸ್, 15.5), 8–144 (ಹರ್ಷಲ್ ಪಟೇಲ್, 19.4)

**ಬೌಲಿಂಗ್:** ರಿಲೆ ಮರಡಿತ್ 3.2–0–29–1, ಮೊಹಮ್ಮದ್ ಶಮಿ 3.4–0–28–1, ರವಿ ಬಿಷ್ಣೋಯಿ 4–0–17–2, ಹರ್‌ಪ್ರೀತ್ ಬ್ರಾರ್ 4–1–19–3, ಕ್ರಿಸ್ ಜೋರ್ಡಾನ್ 4–0–31–1, ದೀಪಕ್ ಹೂಡಾ 1–0–13–0

**ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 34 ರನ್‌ಗಳ ಗೆಲುವು**

### ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

| ಆಟಗಾರ | ತಂಡ | ರನ್ |
|---|---|---|
| ಕೆ.ಎಲ್.ರಾಹುಲ್ | ಪಂಜಾಬ್ | 331 |
| ಶಿಖರ್ ಧವನ್ | ಡೆಲ್ಲಿ | 311 |
| ಫಫ್ ಡುಪ್ಲೆಸಿ | ಚೆನ್ನೈ | 270 |

### ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

| ಆಟಗಾರ | ತಂಡ | ವಿಕೆಟ್ |
|---|---|---|
| ಹರ್ಷಲ್ | ಬೆಂಗಳೂರು | 17 |
| ಆವೇಶ್ ಖಾನ್ | ಡೆಲ್ಲಿ | 13 |
| ರಾಹುಲ್ ಚಾಹರ್ | ಮುಂಬೈ | 11 |

### ಪಾಯಿಂಟ್ ಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಟೈ | ಅಂಕ |
|---|---|---|---|---|---|---|
| ಚೆನ್ನೈ ಸೂಪರ್ ಕಿಂಗ್ಸ್ | 6 | 5 | 1 | - | - | 10 |
| ಡೆಲ್ಲಿ ಕ್ಯಾಪಿಟಲ್ಸ್ | 7 | 5 | 2 | - | - | 10 |
| ಬೆಂಗಳೂರು | 7 | 5 | 2 | - | - | 10 |
| ಮುಂಬೈ ಇಂಡಿಯನ್ಸ್ | 6 | 3 | 3 | - | - | 6 |
| ಪಂಜಾಬ್ | 7 | 3 | 4 | - | - | 6 |
| ಕೋಲ್ಕತ್ತ | 7 | 2 | 5 | - | - | 4 |
| ರಾಜಸ್ಥಾನ | 6 | 2 | 4 | - | - | 4 |
| ಹೈದರಾಬಾದ್ | 6 | 1 | 5 | - | - | 2 |

* ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

# ₹ 20 ಲಕ್ಷ ದೇಣಿಗೆ ನೀಡಿದ ಧವನ್

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರ ಶಿಖರ್ ಧವನ್ ಅವರು ಸ್ವಯಂ ಸೇವಾ ಸಂಘಟನೆಯೊಂದರ ಮೂಲಕ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಆಮ್ಲಜನಕ ಸಿಲಿಂಡರ್ ಮತ್ತು ಕಾನ್ಸೆಂಟ್ರೇಟರ್‌ಗಳ ಖರೀದಿಗಾಗಿ ₹ 20 ಲಕ್ಷ ದೇಣಿಗೆ ನೀಡಿದ್ದಾರೆ.

ಕೋವಿಡ್ ಎರಡನೇ ಅಲೆಯಿಂದಾಗಿ ದೆಹಲಿ ಸೇರಿದಂತೆ ದೇಶದ ಬಹುತೇಕ ನಗರಗಳಲ್ಲಿ ಸಾವು–ನೋವುಗಳು ವರದಿಯಾಗುತ್ತಿವೆ. ರೋಗಿಗಳಿಗೆ ಸೂಕ್ತ ಸಮಯದಲ್ಲಿ ಆಮ್ಲಜನಕ ಸಿಗುತ್ತಿಲ್ಲ.

‘ಇದು ಬಹಳ ಸಂಕಷ್ಟದ ಸಮಯವಾಗಿದೆ. ಅಗತ್ಯವಿರುವವರಿಗೆ ಸಹಾಯ ಮಾಡುವುದು ನಮ್ಮೆಲ್ಲರ ಕರ್ತವ್ಯ. ಸಾಧ್ಯವಿರುವಷ್ಟು ಕೈಜೋಡಿಸಬೇಕು. ಈಗ ನಾನು ₹ 20 ಲಕ್ಷ ದೇಣಿಗೆ ಕೊಡುತ್ತಿದ್ದೇನೆ. ಈ ಐಪಿಎಲ್‌ನ ಪ್ರತಿಯೊಂದು ಪಂದ್ಯದ ನಂತರವೂ ನನಗೆ ಲಭಿಸುವ ಬಹುಮಾನ ಮೊತ್ತವನ್ನೂ ದೇಣಿಗೆಯಾಗಿ ಕೊಡುತ್ತೇನೆ’ ಎಂದು ಧವನ್ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ.

ಆಸ್ಟ್ರೇಲಿಯಾ ಕ್ರಿಕೆಟ್ ಮೀಡಿಯಾ, ರಾಜಸ್ಥಾನ್ ರಾಯಲ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಕೆಲವು ಸಂಘಟನೆಗಳ ಮೂಲಕ ದೇಣಿಗೆ ಸಲ್ಲಿಸಿವೆ.



ಶಿಖರ್ ಧವನ್

ಉನದ್ಕತ್

**ಪೂರನ್–ಉನದ್ಕತ್ ಘೋಷಣೆ:** ಪಂಜಾಬ್ ಕಿಂಗ್ಸ್ ತಂಡದಲ್ಲಿ ಆಡುವ ವೆಸ್ಟ್ ಇಂಡೀಸ್‌ನ ನಿಕೊಲಸ್ ಪೂರನ್ ಅವರು ತಮ್ಮ ಐಪಿಎಲ್ ವೇತನದ ಸ್ವಲ್ಪ ಭಾಗವನ್ನು ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ದೇಣಿಗೆ ನೀಡುವುದಾಗಿ ತಿಳಿಸಿದ್ದರು.

ರಾಜಸ್ಥಾನ್ ರಾಯಲ್ಸ್ ತಂಡದ ಜಯದೇವ್ ಉನದ್ಕತ್ ಅವರು ತಮ್ಮ ಐಪಿಎಲ್ ವೇತನದ ಶೇ 10ರಷ್ಟನ್ನು ದೇಣಿಗೆ ನೀಡುವುದಾಗಿ ಘೋಷಿಸಿದ್ದಾರೆ. ಜಯದೇವ್ ಅವರಿಗೆ ತಂಡವು 2020ರಲ್ಲಿ ಮೂರು ಕೋಟಿ ರೂಪಾಯಿ ನೀಡಿ ಖರೀದಿಸಿತ್ತು. ಈ ವರ್ಷ ಅವರನ್ನು ರಿಟೇನ್ ಮಾಡಿಕೊಂಡಿತ್ತು.

# ಭಾರತದಲ್ಲೇ ಟಿ20 ವಿಶ್ವಕಪ್ ಆಯೋಜನೆ: ಬಿಸಿಸಿಐ ವಿಶ್ವಾಸ

ನವದೆಹಲಿ (ಪಿಟಿಐ): ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯನ್ನು ಈ ವರ್ಷದ ಅಕ್ಟೋಬರ್‌ನಲ್ಲಿ ಭಾರತದಲ್ಲೇ ಆಯೋಜಿಸುವುದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಿಶ್ವಾಸ ವ್ಯಕ್ತಪಡಿಸಿದೆ. ಆದರೆ ಈ ಮೊದಲು ನಿಗದಿಯಾಗಿದ್ದ ಒಂಬತ್ತರ ಬದಲು ಐದು ನಗರಗಳಲ್ಲಿ ಟೂರ್ನಿ ನಡೆಯುವ ಸಾಧ್ಯತೆಯಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ), ಒಪ್ಪಂದದಂತೆ ಟೂರ್ನಿಯ ಪರ್ಯಾಯ ಆತಿಥ್ಯ ರಾಷ್ಟ್ರವಾಗಿ ಯುನೈಟೆಡ್ ಅರಬ್ ಎಮಿರೇಟ್ಸ್‌ಅನ್ನು (ಯುಎಇ) ಸಜ್ಜುಗೊಳಿಸಿತ್ತು.

‘ಟೂರ್ನಿಯ ಆರಂಭಕ್ಕೆ ಇನ್ನು ಐದು ತಿಂಗಳು ಉಳಿದಿದೆ. ದೇಶದ ಸಾಕಷ್ಟು ಜನರು ಇನ್ನೂ ಕೋವಿಡ್‌ಗೆ ಲಸಿಕೆ ಪಡೆಯಬೇಕಿದೆ. ವಿಶ್ವಕಪ್ ಆಯೋಜಿಸುವ ಸ್ಥಿತಿಯಲ್ಲಿ ನಾವಿದ್ದು, ಒಂಬತ್ತು ತಾಣಗಳ ಬದಲಾಗಿ ನಾಲ್ಕು ಅಥವಾ ಐದು ನಗರಗಳಲ್ಲಿ ಟೂರ್ನಿ ನಡೆಸುವ ಆಯ್ಕೆ ನಮ್ಮ ಮುಂದಿದೆ‘ ಎಂದು ಬಿಸಿಸಿಐನ ಹಿರಿಯ ಪದಾಧಿಕಾರಿಯೊಬ್ಬರು ಹೇಳಿದ್ದಾರೆ.

ಐಪಿಎಲ್‌ನ ಬಯೋಸೆಕ್ಯೂರ್ ವ್ಯವಸ್ಥೆಯನ್ನು ವೀಕ್ಷಿಸಲು ಐಸಿಸಿ ತಂಡವೊಂದು ಏಪ್ರಿಲ್ 26ರಂದು ದೆಹಲಿಗೆ ಬರಬೇಕಿತ್ತು. ಆದರೆ ಪ್ರಯಾಣ ನಿರ್ಬಂಧದಿಂದಾಗಿ ಈ ಭೇಟಿಯನ್ನು ಮುಂದೂಡಲಾಗಿದೆ.

‘ಟೂರ್ನಿ ನಡೆಯುವ ಸ್ಥಳ ಯುಎಇ ಆಗಿರಲಿದೆ’ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮುಖ್ಯ ವ್ಯವಸ್ಥಾಪಕ ಧೀರಜ್ ಮಲ್ಹೋತ್ರಾ ಅವರು ಗುರುವಾರ ‘ಬಿಬಿಸಿ‘ಗೆ ತಿಳಿಸಿದ್ದರು.

‘ನಿಯಮಗಳ ಪ್ರಕಾರ ಯುಎಇ ಯಾವಾಗಲೂ ಎರಡನೇ ಆಯ್ಕೆ ಆಗಿರಲಿದೆ. ಕಳೆದ ವರ್ಷ ನಡೆದ ಐಸಿಸಿ ಸಭೆಯಲ್ಲಿ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗಿದೆ. ಧೀರಜ್ ಅವರು ಹೇಳಿರುವುದರಲ್ಲಿ ಹೊಸತೇನಿಲ್ಲ. ಐದು ತಿಂಗಳ ನಂತರವೂ ಕೋವಿಡ್ ಬಿಕ್ಕಟ್ಟು ಮುಂದುವರಿದರೆ ಪರ್ಯಾಯ ಯೋಜನೆಯ ಮೊರೆ ಹೋಗಬೇಕಾಗುತ್ತದೆ’ ಎಂದು ಬಿಸಿಸಿಐ ಪದಾಧಿಕಾರಿ ಹೇಳಿದರು.

‘ಮುಂಬೈ, ಚೆನ್ನೈ, ದೆಹಲಿ ಮತ್ತು ಬೆಂಗಳೂರುಗಳಲ್ಲಿ ಉತ್ತಮ ಕ್ರೀಡಾಂಗಣಗಳಿವೆ. ಆತಿಥ್ಯದ ಆಯ್ಕೆಯಲ್ಲಿ ಇವುಗಳನ್ನು ಕಡೆಗಣಿಸುವಂತಿಲ್ಲ’ ಎಂದರು.

### ಚೆನ್ನೈ ಗೆಲುವಿನ ಓಟಕ್ಕೆ ತಡೆಯೊಡ್ಡುವುದೇ ಮುಂಬೈ ಇಂಡಿಯನ್ಸ್?

# ಧೋನಿ–ರೋಹಿತ್ ಮುಖಾಮುಖಿ

ನವದೆಹಲಿ (ಪಿಟಿಐ): ಯುವ ಆಟಗಾರ ಋತುರಾಜ್ ಗಾಯಕವಾಡ್ ಮತ್ತು ದಕ್ಷಿಣ ಆಫ್ರಿಕಾದ ಅನುಭವಿ ಆಟಗಾರ ಫಫ್ ಡುಪ್ಲೆಸಿ ಜೊತೆಯಾಟವನ್ನು ಮುರಿಯುವುದು ಹೇಗೆ?

ಹೌದು; ಶನಿವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿರುವ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದಲ್ಲಿ ಈ ಸವಾಲಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆದಿದೆ.

ಏಕೆಂದರೆ, ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸತತ ಐದು ಪಂದ್ಯಗಳ ಗೆಲುವಿನ ಓಟದಲ್ಲಿ ಈ ಆರಂಭಿಕ ಜೋಡಿಯು ಮಹತ್ವದ ಕಾಣಿಕೆ ನೀಡಿದೆ. ಮಧ್ಯಮ ಕ್ರಮಾಂಕದಲ್ಲಿ ಸುರೇಶ್ ರೈನಾ, ಅಂಬಟಿ ರಾಯುಡು, ರವೀಂದ್ರ ಜಡೇಜ ಮತ್ತು ಸ್ಯಾಮ್ ಕರನ್ ಅವರು ರನ್‌ಗಳ ಕಾಣಿಕೆ ನೀಡುತ್ತಿದ್ದಾರೆ. ಮಹೇಂದ್ರಸಿಂಗ್ ಧೋನಿ ಲಯ ಕಂಡುಕೊಂಡರೆ ಬ್ಯಾಟಿಂಗ್ ವಿಭಾಗ ಮತ್ತಷ್ಟು ಬಲವರ್ಧನೆಯಾಗುವುದು ಖಚಿತ.

ಬೌಲಿಂಗ್‌ನಲ್ಲಿ ದೀಪಕ್ ಚಾಹರ್, ಲುಂಗಿ ಗಿಡಿ, ಜಡೇಜ ಮತ್ತು ಕರನ್ ಅಮೋಘ ಲಯದಲ್ಲಿದ್ದಾರೆ. ಎದುರಾಳಿ ತಂಡಗಳ ಜೊತೆಯಾಟಗಳಿಗೆ ಕಡಿವಾಣ ಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ಆದ್ದರಿಂದ ರೋಹಿತ್ ಶರ್ಮಾ ಬಳಗವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡಿದರೆ ಮಾತ್ರ ದಿಟ್ಟ ಸವಾಲು ಒಡ್ಡಬಹುದು. ಇಲ್ಲದಿದ್ದರೆ ಧೋನಿಯ ತಂತ್ರಗಾರಿಕೆಯೇ ಮೇಲುಗೈ ಸಾಧಿಸುವುದು ಖಚಿತ.

ಮುಂಬೈ ತಂಡವು ಮೂರು ಪಂದ್ಯಗಳಲ್ಲಿ ಗೆದ್ದು, ಮೂರರಲ್ಲಿ ಸೋತಿದೆ. ಹೋದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಕ್ವಿಂಟನ್ ಡಿ ಕಾಕ್ ಲಯಕ್ಕೆ ಮರಳಿದ್ದರಿಂದ ಜಯ ಸಾಧ್ಯವಾಯಿತು. ರೋಹಿತ್ ಇನ್ನೂ ಸಂಪೂರ್ಣವಾಗಿ ತಮ್ಮ ಸಾಮರ್ಥ್ಯಕ್ಕೆ ತಕ್ಕ ಬ್ಯಾಟಿಂಗ್ ಮಾಡುತ್ತಿಲ್ಲ. ಸೂರ್ಯಕುಮಾರ್ ಯಾದವ್ ಕೂಡ ತಮ್ಮ ನೈಜ ಪ್ರತಿಭೆಯನ್ನು ತೋರುವಲ್ಲಿ ವಿಫಲರಾಗುತ್ತಿದ್ದಾರೆ. ಕೃಣಾಲ್ ಪಾಂಡ್ಯ, ಕೀರನ್ ಪೊಲಾರ್ಡ್ ಕೊನೆಯ ಹಂತದ ಓವರ್‌ಗಳಲ್ಲಿ ಸ್ಥಿರವಾದ ಆಟವಾಡುತ್ತಿರುವುದು ಸಮಾಧಾನಕರ. ಟ್ರೆಂಟ್ ಬೌಲ್ಟ್, ಜಸ್‌ಪ್ರೀತ್ ಬೂಮ್ರಾ ಅವರಿಂದ ಇನ್ನೂ ಮ್ಯಾಚ್ ವಿನ್ನಿಂಗ್ ಬೌಲಿಂಗ್ ಹೊರಹೊಮ್ಮಿಲ್ಲ. ಅವರು ಚೆನ್ನೈ ಎದುರು ತಮ್ಮ ಪರಿಣಾಮಕಾರಿ ಯಾರ್ಕರ್‌ಗಳ ಆಟ ತೋರಿದರೆ, ಚಾಂಪಿಯನ್ ತಂಡದ ಜಯದ ಆಸೆ ಈಡೇರಬಹುದು.

ಐಪಿಎಲ್ ಇತಿಹಾಸದಲ್ಲಿಯೇ ಅತ್ಯಂತ ಯಶಸ್ವಿ ನಾಯಕರೆಂಬ ಹೆಗ್ಗಳಿಕೆಯಿರುವ ರೋಹಿತ್ ಮತ್ತು ಧೋನಿ ಅವರಿಬ್ಬರಿಗೂ ಇದು ಪ್ರತಿಷ್ಠೆಯ ಪಂದ್ಯವಾಗಿದೆ. ಅದರಿಂದಾಗಿ ರೋಚಕ ಹಣಾಹಣಿ ಕಾಣುವ ಸಾಧ್ಯತೆಯೂ ಇದೆ.

**ತಂಡಗಳು:** ಚೆನ್ನೈ ಸೂಪರ್ ಕಿಂಗ್ಸ್: ಮಹೇಂದ್ರಸಿಂಗ್ ಧೋನಿ (ನಾಯಕ–ವಿಕೆಟ್‌ಕೀಪರ್), ಋತುರಾಜ್ ಗಾಯಕವಾಡ್, ಫಫ್ ಡುಪ್ಲೆಸಿ, ಸುರೇಶ್ ರೈನಾ, ಅಂಬಟಿ ರಾಯುಡು, ಸ್ಯಾಮ್ ಕರನ್, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಮೋಯಿನ್ ಅಲಿ, ಲುಂಗಿ ಗಿಡಿ, ದೀಪಕ್ ಚಾಹರ್. ಕೆ. ಗೌತಮ್, ರಾಬಿನ್ ಉತ್ತಪ್ಪ, ಇಮ್ರಾನ್ ತಾಹೀರ್. ಮುಂಬೈ ಇಂಡಿಯನ್ಸ್: ರೋಹಿತ್ ಶರ್ಮಾ (ನಾಯಕ), ಕ್ವಿಂಟನ್ ಡಿಕಾಕ್ (ವಿಕೆಟ್‌ಕೀಪರ್), ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಕೀರನ್ ಪೊಲಾರ್ಡ್, ಕೃಣಾಲ್ ಪಾಂಡ್ಯ, ನೇಥನ್ ಕೌಲ್ಟರ್‌ನೈಲ್, ಜಯಂತ್ ಯಾದವ್, ರಾಹುಲ್ ಚಾಹರ್, ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್, ಇಶಾನ್ ಕಿಶನ್, ಪಿಯೂಷ್ ಚಾವ್ಲಾ,




**ಆರಂಭ:** ರಾತ್ರಿ 7.30
**ಸ್ಥಳ:** ಅರುಣ್ ಜೇಟ್ಲಿ ಕ್ರೀಡಾಂಗಣ, ನವದೆಹಲಿ **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮಹೇಂದ್ರಸಿಂಗ್ ಧೋನಿ – ರೋಹಿತ್ ಶರ್ಮಾ

**ಉಭಯ ತಂಡಗಳ ನಾಯಕರ ಸಾಧನೆ**

| | ಪಂದ್ಯ | ರನ್ | ಗರಿಷ್ಠ | ಶತಕ | ಅರ್ಧಶತಕ | ಸ್ಟ್ರೈಕ್ ರೇಟ್ |
|---|---|---|---|---|---|---|
| ಮಹೇಂದ್ರಸಿಂಗ್ ಧೋನಿ–ಚೆನ್ನೈ | 210 | 4669 | 84* | - | 23 | 136.64 |
| ರೋಹಿತ್ ಶರ್ಮಾ–ಮುಂಬೈ | 206 | 5445 | 109* | 1 | 40 | 130.41 |

## ಕೋವಿಡ್: ‘ಶೂಟರ್ ದಾದಿ’ ಚಂದ್ರೊ ಇನ್ನಿಲ್ಲ

ನವದೆಹಲಿ (ಪಿಟಿಐ): ‘ಶೂಟರ್ ದಾದಿ‘ ಎಂದೇ ಹೆಸರಾಗಿದ್ದ ಹಿರಿಯ ಶೂಟರ್ ಚಂದ್ರೊ ತೋಮರ್ (89) ಕೋವಿಡ್‌ನಿಂದಾಗಿ ಶುಕ್ರವಾರ ನಿಧನರಾದರು. ತಮ್ಮ 60ನೇ ವಯಸ್ಸಿನಲ್ಲಿ ಗನ್ ಹಿಡಿದಿದ್ದ ಚಂದ್ರೊ, ವಿಶ್ವದ ಅತಿ ಹಿರಿಯ ಶಾರ್ಪ್ ಶೂಟರ್ ಎನಿಸಿಕೊಂಡಿದ್ದರು. ಹಲವು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಪ್ರಶಸ್ತಿ ಜಯಿಸಿದ್ದರು.

ಚಂದ್ರೊ ತೋಮರ್

ಕೊರೊನಾ ಸೋಂಕಿತರಾಗಿದ್ದ ಅವರು ಏಪ್ರಿಲ್ 26ರಿಂದ ಮೀರತ್‌ನ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

‘ಮೇರಾ ಸಾಥ್ ಚೂಟ್ ಗಯಾ, ಚಂದ್ರೊ ಕಹಾ ಗಯಿ (ಅವಳು ನನ್ನನ್ನು ತೊರೆದಳು, ಚಂದ್ರೊ ಎಲ್ಲಿಗೆ ಹೋದೆ?)’ ಎಂದು ಚಂದ್ರೊ ಅವರ ಸಂಬಂಧಿ ಪ್ರಕಾಶಿ ತೋಮರ್ ಟ್ವೀಟ್ ಮಾಡಿದ್ದಾರೆ. ಪ್ರಕಾಶಿ ಕೂಡ ಹಿರಿಯ ಮಹಿಳಾ ಶಾರ್ಪ್ ಶೂಟರ್‌ಗಳಲ್ಲಿ ಒಬ್ಬರು.

ಉತ್ತರ ಪ್ರದೇಶದ ಭಾಗ್‌ಪತ್ ಜಿಲ್ಲೆಯ ಹಳ್ಳಿಯವರಾದ ತೋಮರ್, 60ನೇ ವಯಸ್ಸಿನಲ್ಲಿ ಸ್ಪರ್ಧೆಗಿಳಿದು, ವೆಟರನ್ಸ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿದ್ದರು. ಅವರ ಈ ಸಾಧನೆಯಿಂದಾಗಿ ‘ಸಾಂಡ್ ಕಿ ಆಂಖ್’ ಎಂಬ ಬಾಲಿವುಡ್ ಚಿತ್ರಕ್ಕೂ ಸ್ಫೂರ್ತಿಯಾಗಿದ್ದರು.

## ಫುಟ್‌ಬಾಲ್ ಆಟಗಾರ ಉದಯ್ ನಿಧನ

ಬೆಂಗಳೂರು: ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದ ಫುಟ್‌ಬಾಲ್ ಆಟಗಾರ ಉದಯ್ ಕುಮಾರ್ (61) ಅವರು ಕೋವಿಡ್‌ನಿಂದಾಗಿ ಶುಕ್ರವಾರ ಇಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರಿಯಿದ್ದಾರೆ.

ಉದಯ್ ಕುಮಾರ್

1978ರಲ್ಲಿ ಬಿ.ಸಿ.ರಾಯ್ ಟ್ರೋಫಿ ಜೂನಿಯರ್ ರಾಷ್ಟ್ರೀಯ ಟೂರ್ನಿಯಲ್ಲಿ ಕರ್ನಾಟಕ ತಂಡದ ಪರ ಕಣಕ್ಕಿಳಿದಿದ್ದ ಅವರು, ಮರು ವರ್ಷ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. 1979ರಲ್ಲಿ ಚೀನಾ ಪ್ರವಾಸಕ್ಕಾಗಿ ರಾಷ್ಟ್ರೀಯ ಜೂನಿಯರ್ ತಂಡಕ್ಕೆ ಆಯ್ಕೆಯಾದರೂ, ಕೆಲವು ಕಾರಣಗಳಿಂದಾಗಿ ಈ ಪ್ರವಾಸ ರದ್ದಾಗಿತ್ತು. ಎಚ್‌ಎಎಲ್ ಎಫ್‌ಸಿ, ಬಿನ್ನಿ ಎಫ್‌ಸಿ, ಎಜಿಒಆರ್‌ಸಿ ಕ್ಲಬ್ ತಂಡಗಳ ಪರವೂ ಉದಯ್‌ಕುಮಾರ್ ಆಡಿದ್ದರು.

## ಬಿಎಫ್‌ಸಿ ಪಂದ್ಯ 11ರಂದು

ನವದೆಹಲಿ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಎಎಫ್‌ಸಿ ಕಪ್ ಟೂರ್ನಿಯ ಪ್ಲೇ ಆಫ್ ಪಂದ್ಯವನ್ನು ಮೇ 11ರಂದು ಆಡಲಿದೆ. ಈ ಪಂದ್ಯವು ಕೋವಿಡ್–19 ಹಿನ್ನೆಲೆಯಲ್ಲಿ ಮುಂದೂಡಿಕೆಯಾಗಿತ್ತು.

ಬಿಎಫ್‌ಸಿ, ಈ ಪಂದ್ಯವನ್ನು ಏಪ್ರಿಲ್ 28ರಂದು ಆಡಬೇಕಿತ್ತು.

ಡಿ ಗುಂಪಿನ ಈ ಪಂದ್ಯವನ್ನು ಆಡಲು ಬಿಎಫ್‌ಸಿ ಮಾಲ್ಡೀವ್ಸ್‌ಗೆ ತೆರಳಲಿದ್ದು, ಅಲ್ಲಿಯ ಕ್ಲಬ್ ಈಗಲ್ಸ್ ಎದುರು ಸೆಣಸಲಿದೆ.

# ಸೋಫಿಯಾಕ್ಕೆ ಕುಸ್ತಿಪಟುಗಳು

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಅರ್ಹತೆ ಗಳಿಸಲು ಕೊನೆಯ ಅವಕಾಶವಾಗಿದ್ದ ವಿಶ್ವ ಕ್ವಾಲಿಫೈಯರ್ಸ್‌ನಲ್ಲಿ ಭಾಗವಹಿಸಲು ಭಾರತದ ಕುಸ್ತಿಪಟುಗಳು ಶುಕ್ರವಾರ ಬಲ್ಗೇರಿಯಾದ ಸೋಫಿಯಾ ತಲುಪಿದರು. ಪ್ರಯಾಣ ನಿರ್ಬಂಧದ ಕಾರಣ ಈ ಮೊದಲು ಅವರು ವಿಮಾನ ತಪ್ಪಿಸಿಕೊಂಡಿದ್ದರು.

ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವುದರಿಂದ ಹಲವು ದೇಶಗಳು ಭಾರತದ ಮೇಲೆ ಪ್ರಯಾಣ ನಿರ್ಬಂಧ ಹೇರಿವೆ. ಮೇ ಆರರಿಂದ ಆರಂಭವಾಗುವ ಟೂರ್ನಿಗೆ ಭಾರತದ ಕುಸ್ತಿಪಟುಗಳು ಬುಧವಾರ ಆ್ಯಮ್‌ಸ್ಟರ್‌ಡ್ಯಾಮ್ ಮೂಲಕ ಸೋಫಿಯಾಗೆ ತೆರಳಬೇಕಿತ್ತು. ಆದರೆ ಡಚ್ ವಿಮಾನಯಾನ ಸಂಸ್ಥೆ ಅವರ ಟಿಕೆಟ್‌ಗಳನ್ನು ಕೊನೆಯ ಕ್ಷಣದಲ್ಲಿ ರದ್ದುಗೊಳಿಸಿತ್ತು. ಬಳಿಕ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಪ್ಯಾರಿಸ್ ಮೂಲಕ ತೆರಳಲು ಟಿಕೆಟ್‌ಗಳನ್ನು ವ್ಯವಸ್ಥೆ ಮಾಡಿಕೊಟ್ಟಿತು.

‘ನೆದರ್ಲೆಂಡ್ಸ್ ಮತ್ತು ಫ್ರಾನ್ಸ್‌ನಲ್ಲಿರುವ ನಮ್ಮ ದೇಶದ ರಾಯಭಾರ ಕಚೇರಿಗಳ ಮೂಲಕ ಪ್ರಯಾಣ ನಿರ್ಬಂಧದಿಂದ ವಿನಾಯಿತಿ ಪಡೆದೆವು’ ಎಂದು ಡಬ್ಲ್ಯುಎಫ್‌ಐ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಹೇಳಿದ್ದಾರೆ.

ಭಾರತ ಆರು ವಿಭಾಗಗಳಲ್ಲಿ ಈಗಾಗಲೇ ಟೋಕಿಯೊ ಟಿಕೆಟ್ ಗಿಟ್ಟಿಸಿದೆ. ಪೈಲ್ವಾನರಾದ ಬಜರಂಗ್ ಪುನಿಯಾ (65 ಕೆಜಿ ವಿಭಾಗ), ದೀಪಕ್ ಪುನಿಯಾ (86 ಕೆಜಿ), ರವಿ ದಹಿಯಾ (57 ಕೆಜಿ) ಮತ್ತು ಮಹಿಳಾ ಪಟುಗಳಾದ ವಿನೇಶಾ ಪೋಗಟ್ (53 ಕೆಜಿ), ಅನ್ಶು ಮಲಿಕ್ (57 ಕೆಜಿ) ಹಾಗೂ ಸೋನಮ್ ಮಲಿಕ್ (62 ಕೆಜಿ) ಈಗಾಗಲೇ ಒಲಿಂಪಿಕ್ಸ್ ಅರ್ಹತೆ ಪಡೆದವರು.